ಸಂಪುಟ: 13 Volume | ಸಂಚಿಕೆ: 328 Issue | ಪುಟಗಳು 08 Pages | ಬುಧವಾರ 18 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ


Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.

–ಶೇಕ್ಸ್ ಪಿಯರ್

ಸಣ್ಣ ಘಟನೆ ಎಂದವರಿಗೆ ತಕ್ಕ ಉತ್ತರ 6
ವೈಜ್ಞಾನಿಕ ಮೀನುಗಾರಿಕೆ ಲಾಭದಾಯಕ 7
ರಾಜಕಾರಣದ ಘನತೆ ಹೆಚ್ಚಿಸಲು ರಾಮಯ್ಯ ಶ್ರಮ 8



ವಿಜಯಪುರ ಜಿಲ್ಲಾ ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಅವರಿಗೆ ಮಲ್ಲಮ್ಮ ನುಡಿ ದಿನಪತ್ರಿಕೆ ವಿತರಿಸಲಾಯಿತು.

## ಸಿಗದ ಇ ಪರವಾನಗಿ: ಸಾವಿಗೆ ಯತ್ನ

**ವಿಜಯನಗರ:** ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಕಡಬಗೆರೆ ಗ್ರಾ. ಪಂ.ನಲ್ಲಿ ಮನೆ ಕಟ್ಟಲು ಪರವಾನಗಿ ನೀಡದ ಹಿನ್ನೆಲೆಯಲ್ಲಿ ರೈತರೊಬ್ಬರು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ. ಪವನಪುರದ ಕೆ. ಬಸವರಾಜ್ ಎಂಬುವವರು ಗ್ರಾ.ಪಂ. ಕಚೇರಿಯಲ್ಲೇ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು, ಈ ದೃಶ್ಯ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಮನೆ ನಿರ್ಮಾಣಕ್ಕೆ ಇ–ಸ್ವತ್ತು, ಪರವಾನಗಿ ಇಲ್ಲದೆ ಸಾಲ ಸಿಗುತ್ತಿಲ್ಲ. ಆರು ತಿಂಗಳಿಂದ ಕಚೇರಿಗೆ ಸುತ್ತಾಡುತ್ತಿದ್ದೇನೆ ಎಂದಿದ್ದಾರೆ.

## ಶ್ರೀ ರೇಣುಕಾಚಾರ್ಯ ಜಯಂತಿ ಅಂಗವಾಗಿ ಪೂರ್ವಭಾವಿ ಸಭೆ

**ಬೀದರ:** ಇದೇ ಮಾರ್ಚ 1 ರಂದು ಶ್ರೀ ರೇಣುಕಾಚಾರ್ಯ ಜಯಂತಿ ಅಂಗವಾಗಿ ಫೆಬ್ರವರಿ.18 ರಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯಲ್ಲಿ ಕರೆಯಲಾಗಿದೆ. ಈ ಸಭೆಗೆ ಜಿಲ್ಲೆಯ ಮುಖಂಡರು ಆಗಮಿಸಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಬೇಕೆಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಹುಲ್‌ಗೆ ಬಿಗ್ ರಿಲೀಫ್..!



**ಬೆಂಗಳೂರು:** 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಮುಖ ದಿನಪತ್ರಿಕೆಗಳಲ್ಲಿಭ್ರಷ್ಟಾಚಾರ ರೇಟ್ ಕಾರ್ಡ್ ಜಾಹೀರಾತು ಪ್ರಕಟಿಸಿದ್ದಕ್ಕಾಗಿ ರಾಜ್ಯ ಬಿಜೆಪಿ ಘಟಕ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯನ್ನು ಕರ್ನಾಟಕ ಹೈಕೋರ್ಟ್ ಮಂಗಳವಾರ ರದ್ದುಗೊಳಿಸಿದೆ. ಬಿಜೆಪಿ ಸರ್ಕಾರದ ವಿ 'ಕರಪ್ಶನ್ ರೇಟ್ ಕಾರ್ಡ್' ಜಾಹೀರಾತನ್ನು ಹಂಚಿಕೊಂಡಿದ್ದ ರಾಹುಲ್ ವಿರುದ್ಧ ಬಿಜೆಪಿ ಪರವಾಗಿ ಕೇಶವಪ್ರಸಾದ್ ಎಂಬುವವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

## ದಲಿತ ಸಿಎಂ: ಯಾವುದೇ ಚರ್ಚೆ ಇಲ್ಲ



**ಮಂಗಳೂರು:** ದಲಿತ ಸಿಎಂ ಎಂಬ ಚರ್ಚೆ ಸದ್ದುಮಾಡುತ್ತಿದೆ. ಈ ಕುರಿತು ಪ್ರತಿಕ್ರಿಯಿಸಿದ ಗೃಹ ಸಚಿವ ಡಾ.ಜಿ ಪರಮೇಶ್ವರ್, ರಾಜ್ಯದಲ್ಲಿ ದಲಿತ ಸಿಎಂ ಬಗ್ಗೆ ಯಾವುದೇ ಚರ್ಚೆಯೇ ಇಲ್ಲ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ದಲಿತ ಸಿಎಂ ಬಗ್ಗೆ ಯಾವುದೇ ಚರ್ಚೆಯೇ ಇಲ್ಲ. ಯಾರೋ ಹತ್ತು ಜನ ಜೈಕಾರ ಹಾಕಿದ್ರೆ ಆಗಲ್ಲ. ಹೈಕಮಾಂಡ್ನವರು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ನುಡಿದಿದ್ದಾರೆ.

## ಸಚಿವ ಸೋಮಣ್ಣನ ಶ್ಲಾಘಿಸಿದ ಜಮೀರ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬೆಂಗಳೂರಿನ ವಿಜಯನಗರ–ಮೈಸೂರು ರಸ್ತೆಯ ನಾಯಂಡಹಳ್ಳಿ ಬಳಿ ನೂತನ ರಸ್ತೆ ಮೇಲ್ಸೇತುವೆಯನ್ನು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಇಂದು ಲೋಕಾರ್ಪಣೆಗೊಳಿಸಿದ್ದಾರೆ. ಈ ರಸ್ತೆ ಮೇಲ್ಸೇತುವೆ ಈ ಭಾಗದ ಜನರ ಬಹುದಿನದ ಬೇಡಿಕೆಯಾಗಿತ್ತು. ನೂತನ ಮೇಲ್ಸೇತುವೆಯು ವಿಜಯನಗರ ಹಾಗೂ ಪಾದರಾಯನಪುರದ ಜನತೆಗೆ ಸಹಕಾರಿಯಾಗಲಿದೆ ಎಂದು ಸಚಿವ ಸೋಮಣ್ಣ ತಿಳಿಸಿದ್ದಾರೆ.



ಇದೇ ವೇಳೆ ಮಾತನಾಡಿದ ರಾಜ್ಯ ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ರಾಜ್ಯದಲ್ಲಿ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಸೋಮಣ್ಣ ಮಾಡುವ ಹಾಗೆ ಯಾರು ಮಾಡೋಕೆ ಸಾಧ್ಯವಿಲ್ಲ ಎಂದು ಸೋಮಣ್ಣರನ್ನು ಕಂಡಾಡಿದ್ದಾರೆ.

## ಎಐ ಬಗ್ಗೆ ಪಿಎಂ ನರೇಂದ್ರ ಮೋದಿ ಬಣ್ಣನೆ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ದೆಹಲಿಯಲ್ಲಿ ನಡೆಯುತ್ತಿರುವ ಇಂಡಿಯಾ ಎಐ ಇಂಪ್ಯಾಕ್ಟ್ ಎಕ್ಸ್ಪೋ 2026 ಆಲೋಚನೆ, ಆವಿಷ್ಕಾರ, ನಾವೀನ್ಯತೆ ಮತ್ತು ಉದ್ದೇಶಗಳ ಪ್ರಬಲ ಸಂಗಮ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಬಣ್ಣಿಸಿದ್ದಾರೆ. ವೇಗವಾಗಿ ಮುಂದುವರಿಯುತ್ತಿರುವ ಜಾಗತಿಕ ಹೈಟೆಕ್ ಭೂದೃಶ್ಯಕ್ಕೆ ಅನುಗುಣವಾಗಿ ಆಡಳಿತ ಮತ್ತು ದೈನಂದಿನ ಜೀವನದಲ್ಲಿ ತಂತ್ರಜ್ಞಾನದ ವ್ಯಾಪಕ ಬಳಕೆಯನ್ನು ಪ್ರಧಾನಿ ಮೋದಿ ಒತ್ತಿ ಹೇಳಿದ್ದಾರೆ. ಸೋಮವಾರ ಎಕ್ಸ್ಪೋವನ್ನು ಉದ್ಘಾಟಿಸಿದ ನಂತರ, ಪ್ರಧಾನಿ ಮೋದಿ ಅವರು ತಮ್ಮ ಬ್ಯುಸಿ ವೇಳಾಪಟ್ಟಿಯ ಹೊರತಾಗಿಯೂ ವಿವಿಧ ಸ್ಟಾಲ್ಗಳಿಗೆ ಭೇಟಿ ನೀಡಿ, ಎಕ್ಸ್ಪೋವನ್ನು ವೀಕ್ಷಿಸಿದ್ದಾರೆ. ಪ್ರದರ್ಶಕರೊಂದಿಗೆ ಸಂವಹನ ನಡೆಸಿದರು ಮತ್ತು ಕೃತಕ



ಬುದ್ಧಿಮತ್ತೆಗೆ ಸಂಬಂಧಿಸಿದ ಪ್ರದರ್ಶನಗಳು ಹಾಗೂ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ–ಚಾಲಿತ ವಲಯದ ಇತರ ಬೆಳವಣಿಗೆಗಳ ಬಗ್ಗೆ ತಿಳಿದುಕೊಂಡಿದ್ದಾರೆ.

# ಕೈ ಶಾಸಕರ ಫಾರಿನ್ ಟೂರ್

## 20ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಶಾಸಕರ ತಂಡ ವಿದೇಶಕ್ಕೆ | ರಾಜಕೀಯ ಚರ್ಚೆಗೆ ಗ್ರಾಸ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಮಮತ್ತೊಮ್ಮೆ ಸುದ್ದಿಯಲ್ಲಿದೆ. ಏತನ್ಮಧ್ಯೆ 20ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಶಾಸಕರ ತಂಡ ವಿದೇಶಕ್ಕೆ ಹಾರಲು ಸಜ್ಜಾಗಿದೆ.

ವಿದೇಶ ಪ್ರವಾಸದ ಕುರಿತು ಪರ–ವಿರೋಧದ ಚರ್ಚೆ ಶುರುವಾಗಿರುವ ನಡುವೆ ಫೆ.17ರ ರಾತ್ರಿ8 ಗಂಟೆಗೆ ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳಲು ಶಾಸಕರು ಸಜ್ಜಾಗಿದ್ದಾರೆ. ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರ ಗುಂಪಿನಲ್ಲಿ ಗುರುತಿಸಿಕೊಂಡವರೇ ಹೆಚ್ಚಿದ್ದುಕುತೂಹಲ ಕೆರಳಿಸಿದೆ.

**ಆಸ್ಟ್ರೇಲೊಯಾ, ನ್ಯೂಜಿಲ್ಯಾಂಡ್:** ಪಶುಸಂಗೋಪನಾ ಸಚಿವ, ಸಿಎಂ ಆಪ್ತ ಕೆ.ವೆಂಕಟೇಶ್ ನೇತೃತ್ವದಲ್ಲಿ ಅವರದ್ದೇ ಇಲಾಖೆ ವತಿಯಿಂದ ಹಮ್ಮಿಕೊಂಡ ಪ್ರವಾಸ ಇದಾಗಿದೆ. ಈ ಅಧ್ಯಯನ ಪ್ರವಾಸದಲ್ಲಿ17 ಜನ ಕಾಂಗ್ರೆಸ್ ಶಾಸಕರು, ಮೂವರು ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯರು ಇದ್ದಾರೆ. ಬೆಂಗಳೂರಿನಿಂದ ಮೊದಲಿಗೆ ಆಸ್ಟ್ರೇಲಿಯಾ ಪ್ರವಾಸ ಮಾಡಲಿರುವ ಶಾಸಕರ ತಂಡವು ನಂತರ ನ್ಯೂಜಿಲೆಂಡ್ ಕಡೆಗೆ ಮುಖ ಮಾಡಲಿದೆ. ಮಾರ್ಚ್ 3ಕ್ಕೆ ಈ ತಂಡ ಬೆಂಗಳೂರಿಗೆ ಹಿಂತಿರುಗಲಿದೆ ಎಂದು ಮೂಲಗಳು ತಿಳಿಸಿವೆ.

### ಸಿಎಂ ಬಣದವರೇ ಹೆಚ್ಚು..!

ಖಾಸಗಿ ಟ್ರಾವೆಲ್ ಏಜೆನ್ಸಿಯಿಂದ ಶಾಸಕರ ಪ್ರವಾಸಕ್ಕೆ ವಿಮಾನದ ಟಿಕೆಟ್ ಬುಕಿಂಗ್ ಮಾಡಲಾಗಿದೆ. ಪ್ರವಾಸ ಹೊರಟ ಶಾಸಕರ ತಂಡದಲ್ಲಿ ಬಹುತೇಕರು ಸಿಎಂ ಬಣದಲ್ಲಿ ಗುರುತಿಸಿಕೊಂಡವರೇ ಆಗಿದ್ದಾರೆ. ನಾಯಕತ್ವ ಬದಲಾವಣೆಯ ಚರ್ಚೆ ವೇಳೆ ಈ ಪ್ರವಾಸ ಹಲವು ಗುಮಾನಿಗೆ ಎಡೆಮಾಡಿಕೊಟ್ಟಿದೆ.



### ಇದು ಖಾಸಗಿ ವಿದೇಶ ಪ್ರವಾಸ..?

ಕುರ್ಚಿ ಗೊಂದಲದ ವೇಳೆ ಟೂರ್‌ಗೆ ಹೈಕಮಾಂಡ್ ಬ್ರೇಕ್ ಹಾಕಿತ್ತು. ಇದಕ್ಕೂ ಕೆಲ ಶಾಸಕರಿಂದ ಆಕ್ಷೇಪ ವ್ಯಕ್ತವಾಗಿತ್ತು. ಈ ಪ್ರವಾಸಕ್ಕೆ ಪ್ರತಿಯಾಗಿ ಕೆಲವರನ್ನು ರೆಸಾರ್ಟ್‌ಗೆ ಕರೆದೊಯ್ಯುವ ಪ್ಲಾನ್ ಮತ್ತೊಂದು ಬಣದ್ದಾಗಿತ್ತು. ಅದೆಲ್ಲದಕ್ಕೂ ತೆರೆಬಿದ್ದಿದೆ. ಆದರೆ 20 ಶಾಸಕರ ಪೈಕಿ ಬಹುತೇಕರು ಇದು ನಮ್ಮ ಖಾಸಗಿ ವಿದೇಶ ಪ್ರವಾಸ ಎನ್ನುತ್ತಿದ್ದಾರೆ..!

### ಸ್ವಂತ ಖರ್ಚಲ್ಲಿ ಹೋದ್ರೆ ತಪ್ಪೇ?

ಸ್ವಂತ ಖರ್ಚಲ್ಲಿ ಫಾರಿನ್ ಟ್ರಿಪ್ ಹೋದರೆ ಏನು ತಪ್ಪು? ನಾನು ಹೋದಷ್ಟು ಫಾರಿನ್ ಟ್ರಿಪ್ ಯಾರೂ ಹೋಗಲ್ಲ. ನಾನು ಜೊತೆಯಲ್ಲಿ ಯಾರನ್ನೂ ಕರ್ಕೊಂಡು ಹೋಗಲ್ಲ. ಖಾಸಗಿಯಾಗಿ ಶಾಸಕರು ಸ್ವಂತ ಖರ್ಚಲ್ಲಿ ಹೊರಗೆ ಹೋದ್ರೆ, ಅದು ಸರಿಯಲ್ಲ ಅಂತ ಹೇಳೋ ಪದ್ಧತಿ ಯಾಕೆ ಬರ್ತಿದೆ ಅಂತಿದ್ದಾರೆ ಮಾಜಿ ಸಚಿವ ರಾಜಣ್ಣ.



ಈ ಪ್ರವಾಸದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವನ್ನೂ ನಾ ಮಾಡಿಲ್ಲ. ಹೈಕಮಾಂಡ್ ಕೂಡ ಅದರ ಬಗ್ಗೆ ನನ್ನ ಜತೆ ಮಾತನಾಡಿಲ್ಲ. ವಿದೇಶಕ್ಕೆ ಹೋಗುವವರು ಮತ್ತು ಕಳುಹಿಸಿಕೊಟ್ಟವರೂ ಮಾತನಾಡಿಲ್ಲ.

–ಡಿಕೆ ಶಿವಕುಮಾರ್
ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ

### ಯಾವುದೇ ಬುಕ್ ಮಾಡಿಲ್ಲ

ಶಾಸಕರಿಗಾಗಿ ಗೋವಾದಲ್ಲಿ ರಿಸಾರ್ಟ್ಗಳನ್ನು ಬುಕ್ ಮಾಡಿಲ್ಲ. ಶಾಸಕರು ರಜೆಗಾಗಿ ಪ್ರವಾಸಕ್ಕೆ ಹೋಗುವುದರಲ್ಲಿ ಯಾವುದೇ ವಿಶೇಷತೆ ಇಲ್ಲ. ಯಾವುದೂ ಬುಕ್ ಮಾಡಿಲ್ಲ. ಯಾರು ಹೋಗುತ್ತಿದ್ದಾರೆ ಎಂಬುದು ಗೊತ್ತಿಲ್ಲ. ವೈಯಕ್ತಿಕ ಟೂರ್ ಹೊರಟರೆ ಹೋಗಬೇಡಿ ಅಂತಾ ಹೇಳುವುದಕ್ಕೆ ಆಗುತ್ತಾ ಎಂದು ಪ್ರಶ್ನಿಸಿದ್ದಾರೆ ಸಚಿವ ದಿನೇಶ್ ಗುಂಡುರಾವ್.

## ನಾಯಿ? ನಾಯಿ ಬಾಲ ಯಾರ್?

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಸಚಿವ ಡಾ. ಎಚ್ ಸಿ ಮಹದೇವಪ್ಪ ಮಾರ್ಮಿಕ ಮಾತನ್ನಾಡಿದ್ದರು. ಇದೀಗ ಅವರು ನೀಡಿರುವ ಹೇಳಿಕೆ ಸಾಕಷ್ಟು ಚರ್ಚೆಗೆ ಗ್ರಾಸವಾಗುತ್ತಿದೆ. ಅವರ ಹೇಳಿಕೆಯನ್ನೇ ಮುಂದಿಟ್ಟುಕೊಂಡು ನಾಯಿ ಯಾರು ಹಾಗೂ ನಾಯಿಯ ಬಾಲ ಯಾರು ಎಂದು ಪ್ರತಿಪಕ್ಷ ನಾಯಕ ಆರ್‌ಅಶೋಕ್ ಪ್ರಶ್ನಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ್ದ ಎಚ್ಸಿಮಹದೇವಪ್ಪ, ನಾಯಕತ್ವ ಬದಲಾವಣೆ ವಿಚಾರದಲ್ಲಿ ಕುತೂಹಲಕಾರಿ ಹೇಳಿಕೆ ನೀಡಿದ್ದರು. "ಇಲ್ಲಿ ನಾಯಕತ್ವದ ಚರ್ಚೆ ಎಲ್ರಿ ಇದೆ? ಹೈಕೋರ್ಟ್ ಬೀದಿ ನಾಯಿಗಳನ್ನೆಲ್ಲಾ ಪದೇ ಪದೇ ಹಿಡಿದು ಒಳಗೆ ಹಾಕಿ ಅಂತ ಹೇಳ್ತಾ ಇದೆ. ಇಲ್ಲಿ ರಾಜಕೀಯ ನಾಯಕತ್ವ ಗಟ್ಟಿಯಾಗಿದೆ" ಎಂದು ಹೇಳಿದ್ದರು. ಇದೀಗ ಆರ್ ಅಶೋಕ್ ಕೂಡಾ ಟ್ವೀಟ್ ಮಾಡಿ ಮಹದೇವಪ್ಪ ಅವರ ಹೇಳಿಕೆಯ ಹಿಂದಿನ ಮರ್ಮವನ್ನು ಪ್ರಶ್ನಿಸಿದ್ದಾರೆ.

## ನಾಯಿ ನಿಯತ್ತಿನ ಪ್ರಾಣಿ: ಬಮೂಲ್ ಅಧ್ಯಕ್ಷ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ನಿಯತ್ತಿನ ಪ್ರಾಣಿ ಎಂದರೆ ನಾಯಿ. ಕಟ್ಟಾ ಕಾಂಗ್ರೆಸಿಗರು ಯಜಮಾನನ ಋಣ ಸ್ಮರಣೆ ಮಾಡಿಕೊಂಡು, ಅದನ್ನು ತೀರಿಸುವ ನಾಯಿಗಳು ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದ್ದಾರೆ. ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಸಚಿವ ಡಾ. ಎಚ್.ಸಿ ಮಹದೇವಪ್ಪ ಅವರು ಬಾಲ ನಾಯಿಯನ್ನೇ ಅಲ್ಲಾಡಿಸಬಾರದು ಎಂದು ಹೇಳಿಕೆ ನೀಡಿರುವ ಬಗ್ಗೆ ಕೇಳಿದಾಗ, ಅವರು ಯಾರನ್ನು ಉಲ್ಲೇಖಿಸಿ ಈ ರೀತಿ ಹೇಳಿದ್ದಾರೆ ಎಂಬ ಮಾಹಿತಿ ಇಲ್ಲ. ಕಟ್ಟಾ ಕಾಂಗ್ರೆಸಿಗರು ಬೀದಿ ನಾಯಿಗಳಲ್ಲ. ನಿಯತ್ತಿನ ನಾಯಿಗಳು ಎಂದು ತಿರುಗೇಟು ನೀಡಿದ್ದಾರೆ. ಹೊರಗಡೆಯಿಂದ ಬಂದವ ಬಗ್ಗೆ ಕೇಳಿದಾಗ, ಕಟ್ಟಾ ಕಾಂಗ್ರೆಸಿಗರು ಋಣ ತೀರಿಸುವ ವ್ಯಕ್ತಿತ್ವ ಹೊಂದಿರುವವರು. ಈ ನಾಯಿಗಳು ಬೀದಿ ನಾಯಿ ಆಗಿರಲಿ, ಸಾಕಿದ ನಾಯಿ ಆಗಿರಲಿ, ಋಣ ತೀರಿಸುತ್ತವೆಯೇ ಹೊರತು, ಬೇರೆ ರೀತಿ ಮಾಡುವುದಿಲ್ಲ ಎಂದಿದ್ದಾರೆ.

## 500 ಹೆಲಿಕಾಪ್ಟರ್‌ಗಳ ಉತ್ಪನ್ನ: ಎಂಬಿಪಿ




• ಮಲ್ಲಮ್ಮ ನುಡಿ ವಾರ್ತೆ ವೇಮಗಲ್ (ಕೋಲಾರ)


ಫ್ರಾನ್ಸ್ ಮೂಲದ ಏರ್ ಬಸ್ ಮತ್ತು ಭಾರತದ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಜತೆಗೂಡಿ ಅಭಿವೃದ್ಧಿಪಡಿಸಿರುವ ದೇಶದ ಪ್ರಪ್ರಥಮ, ಖಾಸಗಿ ವಲಯದ ಹೆಲಿಕಾಪ್ಟರ್ ಜೋಡಣೆ ಘಟಕದಲ್ಲಿ ಭವಿಷ್ಯದ 20 ವರ್ಷಗಳಲ್ಲಿ ಎ125 ದರ್ಜೆಯ 500 ಲಘು ಹೆಲಿಕಾಪ್ಟರ್ ಸಿದ್ಧವಾಗಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ. ಇಲ್ಲಿ ನಡೆದ ನೂತನ ಘಟಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿಮಾತನಾಡಿ, ಈ ಘಟಕವು ರಾಜ್ಯದಲ್ಲಿ ಕಾರ್ಯಾರಂಭ ಮಾಡುತ್ತಿರುವುದು ಐತಿಹಾಸಿಕ ಸಾಧನೆಯಾಗಿ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಬಣ್ಣಿಸಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರೋನ್ ಅವರು ಮಹಾರಾಷ್ಟ್ರದ ಲೋಕಭವನದಿಂದ ವರ್ಚುಯಲ್ ಮೂಲಕ ಈ ಘಟಕವನ್ನು ಉದ್ಘಾಟಿಸಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೋಲಾರ ಸಂಸದ ಮಲ್ಲೇಶಬಾಬು ಇದ್ದರು.

## ಅಪ್ಪಣ್ಣನ ಮೂರ್ತಿ ಸ್ಥಾಪನೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಹಡಪದ ಅಪ್ಪಣ್ಣನವರ ಮೂರ್ತಿಯನ್ನು ಅವರ ಗವಿಯಲ್ಲಿ ಸ್ಥಾಪಿಸದಿದ್ದರೆ ಉಗ್ರಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಹಡಪದ ಸಮಾಜದ ರಾಜ್ಯ ಮಾಜಿ ಕಾರ್ಯಾಧ್ಯಕ್ಷರು ಹಾಗೂ ಕಲ್ಬುರ್ಗಿ ಜಿಲ್ಲಾಧ್ಯಕ್ಷ ಈರಣ್ಣ ಸಿ. ಹಡಪದ ಸಣ್ಣೂರ ಎಚ್ಚರಿಕೆ ನೀಡಿದ್ದಾರೆ. ನಗರದಲ್ಲಿ ಹಡಪದ ಸಮಾಜದ ವತಿಯಿಂದ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 900 ನೂರು ವರ್ಷಗಳಿಂದ ಹಡಪದ ಸಮಾಜಕ್ಕೆ ಹಾಗೂ ಬಸವಾಭಿಮಾನಿಗಳಿಗೆ ಭಾವನಾತ್ಮಕ ಭಕ್ತಿಯ ಕೇಂದ್ರವಾಗಿದ್ದ ಬಸವಣ್ಣನವರ ಎಡ ಪಕ್ಕದ ಗವಿ ಹಡಪದ ಅಪ್ಪಣ್ಣನವರ ಗವಿ ಇದದ್ದು ಸತ್ಯ ಎಂದು ವಿವರಿಸಿದ್ದಾರೆ. ಜಾಮದಾರ್ ಅವರ ಅವಧಿಯಲ್ಲಿ ಗವಿ ಅಭಿವೃದ್ಧಿ ಮಾಡಿ ಮೂರ್ತಿ ಕುಡಿಸುತ್ತೇನೆ ಎಂದು ಜಾಮದಾರ ಅವರು ಹೇಳಿ, ಹಡಪದ ಅಪ್ಪಣ್ಣನವರ ಗವಿಯ ನಾಮಫಲಕ ತೆಗೆದು ಇರುತ್ತಾರೆ. ಕೆಲವು ದಿನಗಳ ಹಿಂದೆ ಆ ಗವಿಯಲ್ಲಿ ಯಾರದೋ ಅನ್ಯ ಮೂರ್ತಿ ರಾತ್ರೋರಾತ್ರಿ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಸ್ಥಾಪಿಸುತ್ತಾರೆ. 5 ದಿನಗಳಲ್ಲಿ ಅದು ತೆರವುಗೊಳಿಸದೆ ಇದ್ದಲ್ಲಿ ಉಗ್ರ ಪ್ರತಿಭಟನೆ ನಡೆಸುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



## ಬಿಜೆಪಿ ಚಿತ್ತಾಪುರ ಮಂಡಲಕ್ಕೆ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ಕಲಬುರಗಿ ಗ್ರಾಮಾಂತರ ಜಿಲ್ಲೆಯ ಚಿತ್ತಾಪುರ ಮಂಡಲ ಭಾರತೀಯ ಜನತಾ ಪಕ್ಷದ ವಿವಿಧ ಮೋರ್ಚಾಗಳ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆ ಮಾಡಲಾಗಿದೆ ಎಂದು ಮಂಡಲ ಅಧ್ಯಕ್ಷ ರವೀಂದ್ರ ಸಜ್ಜನಶೆಟ್ಟಿ ತಿಳಿಸಿದ್ದಾರೆ.



**ಎಸ್ಸಿ ಮೋರ್ಚಾ:** ಗುಂಡು ಮತ್ತಿಮೂಡ (ಅಧ್ಯಕ್ಷ) ಜೈಭೀಮ ಕೋರವಾರ ವಕೀಲರು, ಕಿಶನ್ ಜಾಧವ ವಾಡಿ (ಪ್ರಧಾನ ಕಾರ್ಯದರ್ಶಿಗಳು).

**ಯುವ ಮೋರ್ಚಾ:** ದೇವರಾಜ ತಳವಾರ (ಅಧ್ಯಕ್ಷ), ಸಿದ್ದುಗೌಡ ಕುರಾಳ, ಗಂಗಾಧರ ಕುಂಬಾರ (ಪ್ರಧಾನ ಕಾರ್ಯದರ್ಶಿ).

**ರೈತ ಮೋರ್ಚಾ:** ರಮೇಶ್ ಬೊಮ್ಮನಳ್ಳಿ (ಅಧ್ಯಕ್ಷ), ದಶರಥ ದೊಡ್ಡಮನಿ, ಲಕ್ಷ್ಮಿಕಾಂತ್ ರೆಡ್ಡಿ ರಾಮತೀರ್ಥ (ಪ್ರಧಾನ ಕಾರ್ಯದರ್ಶಿ).

**ಒಬಿಸಿ ಮೋರ್ಚಾ:** ಸಂತೋಷ ಪೂಜಾರಿ (ಅಧ್ಯಕ್ಷ), ಸ್ವಾಸ್ತಿಕ ಭಂಡಾರಿ ಯರಗಲ್, ಭೀಮಶೇನ ಉಡಗಿ ಭೀಮನಳ್ಳಿ (ಪ್ರಧಾನ ಕಾರ್ಯದರ್ಶಿ).

**ಎಸ್ಟಿ ಮೋರ್ಚಾ:** ರಾಜೇಶ ದೊರೆ (ಅಧ್ಯಕ್ಷ), ಮೌನೇಶ್ವರ ನರಸಪ್ಪ ದೊರೆ ದಿಗ್ಗಾಂವ, ಮರೆಪ್ಪ ನಿಂಗಣ್ಣ ದೊರೆ (ಪ್ರಧಾನ ಕಾರ್ಯದರ್ಶಿಗಳು).

**ಮಹಿಳಾ ಮೋರ್ಚಾ:** ನಾಗುಬಾಯಿ ಜಿತುರೆ (ಅಧ್ಯಕ್ಷ), ವೀಣಾ ಯಲಗೋಡಕರ್, ಕು. ವಿಮಲಾ ಚವ್ಹಾಣ (ಪ್ರಧಾನ ಕಾರ್ಯದರ್ಶಿಗಳು). ಅಲ್ಪಸಂಖ್ಯಾತ ಮೋರ್ಚಾ : ಇಬ್ರಾಹಿಂ ಕೋಳದ್ (ಅಧ್ಯಕ್ಷ), ಶಕೀಲ ಪಟೇಲ್, ಶಾಂತರಾಜ ಭಾಸ್ಕರ್ (ಪ್ರಧಾನ ಕಾರ್ಯದರ್ಶಿಗಳು) ಇವರನ್ನು ಆಯ್ಕೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

**ನನ್ನ–ಸಿದ್ದರಾಮಯ್ಯ ಅವರ ನಡುವೆ ಕದ್ದುಮುಚ್ಚಿ ಗುಟ್ಟಿನ ವ್ಯವಹಾರ ನಡೆದಿಲ್ಲ. ಸಮಯ ಬಂದಾಗ ಸಿಎಂ ಅವರೇ ನಮ್ಮ ತೀರ್ಮಾನದ ಬಗ್ಗೆ ತಿಳಿಸುತ್ತಾರೆ: ಡಿಸಿಎಂ**

# 23ರಂದು 121ನೇ ವಿಶ್ವ ರೋಟರಿ ದಿನಾಚರಣೆ: ಹಾವಶೆಟ್ಟಿ ಪಾಟೀಲ

• ಮಲ್ಲಮ್ಮ ನುಡಿ ವಾರ್ತೆ
ಬೀದರ್

ರೋಟ್ರಿ ಇಂಟರ್ ನ್ಯಾಶನಲ ಸಂಸ್ಥೆಯ 121ನೇ ವಿಶ್ವ ರೋಟರಿ ದಿನಾಚರಣೆಯನ್ನು ಅಂಗವಾಗಿ ರೋಟ್ರಿಕ್ಲಬ್ ಬೀದರ್ ವತಿಯಿಂದ ಫೆಬ್ರವರಿ 23ರಂದು ಸಂಜೆ 6.00 ಗಂಟೆಗೆ ನಗರದ ಲಾವಣ್ಯ ಕನ್ವೆನ್ಶನ್ ಹಾಲ್‌ನಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಂಸ್ಥೆಯ ಸಹಾಯಕ ಗವರ್ನರ್ ರೋ.ಇಂ.ಹಾವಶೆಟ್ಟಿ ಪಾಟೀಲ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರೋಟರಿ ಕಲ್ಯಾಣ ವಲಯದ ಮಾರ್ಗದರ್ಶನದಲ್ಲಿ ಹಾಲಿ ಅಧ್ಯಕ್ಷರಾದ ರೋ. ಬಸವಕುಮಾರ ಪಾಟೆಲ್, ರೋ.ಅನೀಲಕುಮಾರ ಬಿರಾದಾರ, ಖಜಾಂಚಿ ರೋ. ಅನೀಲ ಮಸೂದಿ ಹಾಗೂ 2025–26ನೇ ಸಾಲಿನ ನಿರ್ದೇಶಕರ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ವಿಶ್ವದ ಸುಮಾರು 190 ದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಹೊಂದಿರುವ ರೋಟರಿ ಸಂಸ್ಥೆ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ನೈರ್ಮಲ್ಯ ಸೇರಿದಂತೆ ಹಲವಾರು ಸಮಾಜಮುಖಿ ಯೋಜನೆಗಳ ಮೂಲಕ ವಿಶಿಷ್ಟ ಛಾಪು ಮೂಡಿಸಿದೆ. ಬೀದರದಲ್ಲಿ 1972 ರಲ್ಲಿ ಕ್ಲಬ್ ಸ್ಥಾಪನೆಯಾಗಿ ನಿರಂತರ ಸೇವೆ ಸಲ್ಲಿಸುತ್ತಿದೆ.

ವಿಶ್ವ ರೋಟರಿ ದಿನಾಚರಣೆಯ ಅಂಗವಾಗಿ ವಿವಿಧ ಕ್ರೀಡಾ, ಸಾಂಸ್ಕೃತಿಕ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಇಂದು ನಗರದ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ಶಟ್ಲರ್ ಕ್ಲಬ್ ಸಹಯೋಗದಲ್ಲಿ ಶಟಲ್ ಪಂದ್ಯಾವಳಿ ನಡೆಯಲಿದೆ. ಹಾಗೇ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಇಂದು ಬೆಳಿಗ್ಗೆ 10.00ಕ್ಕೆ "ಬೀದರ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು" ವಿಷಯದ ಮೇಲೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ (2 ಗಂಟೆ). ಬೆಳಿಗ್ಗೆ 10.15ಕ್ಕೆ ಎಲ್ಲಾ ವಯೋಮಾನದ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ. ಬೆಳಿಗ್ಗೆ 10.30ಕ್ಕೆ ರಸ್ತೆ ಅಪಘಾತ ಸಂದರ್ಭಗಳಲ್ಲಿ ನೀಡುವ ಪ್ರಥಮ ಚಿಕಿತ್ಸೆ ಹಾಗೂ ಸಿ.ಪಿ.ಆರ್ ಕುರಿತು ನುರಿತ ವೈದ್ಯರಿಂದ ಕಾರ್ಯಾಗಾರ. ಮಧ್ಯಾಹ್ನ 12.00ಕ್ಕೆ "ದುಶ್ಚಟಗಳ ನಿರ್ಮೂಲನೆಯಲ್ಲಿ ಯುವಕರ ಪಾತ್ರ ಅಥವಾ ಜಿಲ್ಲಾಭಿವೃದ್ಧಿಯಲ್ಲಿ ರೋಟರಿ ಸಂಸ್ಥೆಯ ಪಾತ್ರ" ವಿಷಯದ



ಮೇಲೆ ಕಾಲೇಜು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ (5 ನಿಮಿಷ). ಸಂಜೆ 6.00ಕ್ಕೆ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳ ಸಮೂಹ ನೃತ್ಯಗಳ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಫೆಬ್ರವರಿ 21ರಂದು ನಗರದ ಬಿ.ವಿ.ಬಿ. ಕಾಲೇಜಿನ ಆಟದ ಮೈದಾನದಲ್ಲಿ ಬೆಳಿಗ್ಗೆ 6.00 ಗಂಟೆಯಿಂದ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ರೋಟರಿ ತಂಡಗಳೊಂದಿಗೆ ಪತ್ರಕರ್ತರ ಹಾಗೂ ಬ್ಯಾಂಕ್ ಉದ್ಯೋಗಿಗಳ ತಂಡಗಳು ಭಾಗವಹಿಸಲಿವೆ ಎಂದರು.

ಫೆಬ್ರವರಿ 22ರಂದು ಬೆಳಿಗ್ಗೆ 6.00ಕ್ಕೆ ನಗರದ ಬರಿದ್ ಶಾಹಿ ಗಾರ್ಡನ್ ನಿಂದ ಫತೇ ದರವಾಜ ಹತ್ತಿರದ ರಮೇಶ ಹೋಂಡಾ ಶೋರೂಮ್ ವರೆಗೆ ಬ್ರೇಕ್ ದ್ ಸೈಕಲ್ ಆಫ್ ಕ್ಯಾನ್ಸರ್" ಘೋಷವಾಕ್ಯದೊಂದಿಗೆ ಸೈಕ್ಲಾಥಾನ್ ಜಾಥಾ ನಡೆಯಲಿದೆ. ರೋಟರಿ ಕ್ಲಬ್, ಬೀದರ ಅಡ್ವೆಂಚರ್ಸ್ ಕ್ಲಬ್ ಹಾಗೂ ಡಾ. ವಿಪಿನ್ ಗೋಯಲ್ ಸಹಯೋಗದಲ್ಲಿ ಈ ಜಾಗೃತಿ ಅಭಿಯಾನ ನಡೆಯಲಿದ್ದು, ರೋ. ರಮೇಶ ಗೋಯಲ್ ಉದ್ಘಾಟಿಸಲಿದ್ದಾರೆ ಎಂದವರು ಹೇಳಿದರು.

ಫೆಬ್ರವರಿ 23ರಂದು ಸಂಜೆ 6.00ಕ್ಕೆ ಲಾವಣ್ಯ ಕನ್ವೆನ್ಶನ್ ಹಾಲ್‌ನಲ್ಲಿ ನಡೆಯುವ 121ನೇ ರೋಟರಿ ದಿನಾಚರಣೆಯನ್ನು ಬೀದರ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ರೋ. ತ್ರಿವಿಕ್ರಂ ಜೋಷಿ (ರಾಯಚೂರು) ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸ್ಪರ್ಧೆಗಳ ವಿಜೇತರಿಗೆ ಬಹುಮಾನ, ಪ್ರಮಾಣಪತ್ರ ವಿತರಣೆ, ಪ್ರಾಯೋಜಕರ ಸನ್ಮಾನ ಹಾಗೂ ರೋಟರಿ ಕ್ಲಬ್‌ನಲ್ಲಿ 30 ವರ್ಷಗಳಿಗಿಂತ ಹೆಚ್ಚು ಕಾಲ ಸಮಾಜ ಸೇವೆ ಸಲ್ಲಿಸಿರುವ ಸದಸ್ಯರ ಗೌರವ ಸನ್ಮಾನ ನಡೆಯಲಿದೆ. ಜೊತೆಗೆ ಸಂಗೀತ ರಸ ಸಂಜೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ರೋಟರಿ ಕ್ಲಬ್ ಹಿರಿಯ ಸಲಹೆಗಾರರಾದ ಡಾ.ರಾಜಶೇಖರ ಸೇಡಂಕರ್ ಮಾತನಾಡಿ, ಇಂದು ಬೀದರ್ ನಾಗರಿಕ ಸನ್ಮಾರ್ಗ ಸಮಿತಿ ವತಿಯಿಂದ ನಶಮುಕ್ತ ಭಾರತ ಅಭಿಯಾನ ಕುರಿತು ನರ್ಸಿಂಗ್ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಬೀದರ್ ಜಿಲ್ಲೆಯನ್ನು ಭಿಕ್ಷಾಟನೆ ಮುಕ್ತ ಜಿಲ್ಲೆಯನ್ನಾಗಿಸಲು ಪ್ರತಿ ರವಿವಾರ ಒಂದೊಂದು ಗ್ರಾಮ ಪಂಚಾಯತ್‌ಗಳಿಗೆ ಹೋಗಿ ಅಲ್ಲಿ ಜಾಗೃತಿ ಮೂಡಿಸಿ ಜೊತೆಗೆ ಮಕ್ಕಳಿಗೆ ಮೊಬೈಲ್ ಕೊಡಬಾರದೆಂದು ಗ್ರಾಮ ಪಂಚಾಯತ್ಗಳಿಗೆ ಒಂದು ಸೈರನ್ ನೀಡಲಾಗಿದ್ದು, ಬೆಳಿಗ್ಗೆ 6 ಗಂಟೆಗೆ 7:00 ಗಂಟೆ ಒಳಗೆ ಮಾತ್ರ ಮಕ್ಕಳಿಗೆ ಮೊಬೈಲ್ ನೀಡಬೇಕು ನಂತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅಣಿಯಾಗಿಸಬೇಕೆಂದು ಅಲ್ಲಿಯೇ ತಾಯಿಯಂದಿರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಹಾಗೆ ನಗರ ಪ್ರದೇಶದಲ್ಲಿ ಸಂಜೆ ವೇಳೆಗೆ ಎಲ್ಲಾ ಅಂಗಡಿ ಮುಗ್ಗಟ್ಟುಗಳಿಗೆ ತೆರಳಿ ಮಕ್ಕಳು ಭಿಕ್ಷಾಟನೆಗೆ ತೆರಳಬಾರದು ಎಂದು ಭಿಕ್ಷಾಟನೆಗೊಳಪಟ್ಟ ಮಕ್ಕಳನ್ನು ಬ್ರಿಮ್ಸ್ ಆಸ್ಪತ್ರೆಗೆ ಕರೆದು ಅವರಿಗೆ ವೈದ್ಯರಿಂದ ಜಾಗೃತಿ ಮೂಡಿಸಿ, ತಪಾಸಣೆಗೊಳಪಡಿಸಿ, ಚಿಕಿತ್ಸೆ ನೀಡಿ ಅವರ ಮಾನಸಿಕ ಭಿಕ್ಷಾಟನೆ ಸ್ಥಿತಿಯನ್ನು ತಿಳಿಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಹೀಗೆ ಈ ಸಂಸ್ಥೆಯಿಂದ ಹತ್ತು ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ನಿತ್ಯ ಹಮ್ಮಿಕೊಳ್ಳುತ್ತಿದ್ದೇವೆ ಎಂದು ಡಾ ಸೇಡಂಕರ್ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನ್ನಶೆಟ್ಟಿ, ರವೀಂದ್ರ ಮುಲಗೆ, ರೋಟರಿ ಕ್ಲಬ್‌ನ ನಿಕಟಪೂರ್ವ ಅಧ್ಯಕ್ಷ ಸೋಮಶೇಖರ ಪಾಟೀಲ್, ಹಾಲಿ ಅಧ್ಯಕ್ಷ ಬಸವಕುಮಾರ ಪಾಟೀಲ್ ಕಾರ್ಯದರ್ಶಿ ಅನಿಲಕುಮಾರ ಬಿರಾದಾರ್ ಹಾಗೂ ಇತರರು ಮಾತನಾಡಿದರು. ನಿಕಟಪೂರ್ವ ಕಾರ್ಯದರ್ಶಿ ಕೃಪಾಶಿಂಧು ಪಾಟೀಲ, ರೋಟ್ರಿ ಕ್ಲಬ್ ಹಿರಿಯ ಸದಸ್ಯರಾದ ಡಾ.ಸುರೇಶ ಪಾಟೀಲ, ಸಂಗಮೇಶ ಗಾದಗಿ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



### ನಿಷ್ಕಳಂಕ ರಾಜಕಾರಣ –ರಾಜ್ಯದ ಭವಿಷ್ಯಕ್ಕೆ ಅನಿವಾರ್ಯ ಅಗತ್ಯ

ರಾಜಕಾರಣ ಎಂದರೆ ಸೇವೆ, ತ್ಯಾಗ ಮತ್ತು ಜನಹಿತದ ಸಂಕಲ್ಪವಾಗಿರಬೇಕಿತ್ತು. ಆದರೆ ಇಂದು ಅದು ಬಹುತೇಕ ಕಡೆ ಸ್ವಾರ್ಥ, ಭ್ರಷ್ಟಾಚಾರ ಹಾಗೂ ಅಧಿಕಾರದ ಲಾಲಸೆಯ ಸಂಕೇತವಾಗಿ ಮಾರ್ಪಟ್ಟಿರುವುದು ದುಃಖಕರ ಸತ್ಯ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ನಿಷ್ಕಳಂಕ ರಾಜಕಾರಣ ನಡೆಯಬೇಕೆಂಬುದು ಕೇವಲ ಆಶಯವಲ್ಲ – ಅದು ಕಾಲದ ಕಠಿಣ ಅಗತ್ಯವಾಗಿದೆ.

ಜನಪ್ರತಿನಿಧಿಗಳು ಸಾರ್ವಜನಿಕ ಸೇವಕರಾಗಬೇಕು; ಜನರ ತೆರಿಗೆ ಹಣವನ್ನು ವೈಯಕ್ತಿಕ ಲಾಭಕ್ಕೆ ಬಳಸದಂತೆ ನೋಡಿಕೊಳ್ಳಬೇಕು. ರಸ್ತೆ, ಶಾಲೆ, ಆಸ್ಪತ್ರೆ, ಕುಡಿಯುವ ನೀರು ಎಂಬ ಮೂಲಭೂತ ಸೌಲಭ್ಯಗಳು ರಾಜಕೀಯ ಲಾಭದ ಸಾಧನವಾಗದೇ, ಜನರ ಹಕ್ಕಾಗಬೇಕು. ಆದರೆ ದುರಾದೃಷ್ಟವಶಾತ್ ಇಂದು ಅಭಿವೃದ್ಧಿಯ ಹೆಸರಿನಲ್ಲಿ ಲೂಟಿ ನಡೆಯುತ್ತಿರುವುದನ್ನು ಜನರು ದಿನನಿತ್ಯ ಕಾಣುತ್ತಿದ್ದಾರೆ.

ನಿಷ್ಕಳಂಕ ರಾಜಕಾರಣ ಎಂದರೆ ಕೇವಲ ಭ್ರಷ್ಟಾಚಾರ ರಹಿತ ಆಡಳಿತವಲ್ಲ – ಅದು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಜನರೊಂದಿಗೆ ನೇರ ಸಂವಾದ ಹೊಂದಿರುವ ಆಡಳಿತ. ಚುನಾವಣೆಯಲ್ಲಿ ಹಣದ ಬಲ, ಜಾತಿ–ಧರ್ಮದ ರಾಜಕೀಯ ಬದಲು ಅಭಿವೃದ್ಧಿ ಮತ್ತು ಸೇವೆಯ ರಾಜಕಾರಣ ಮೆಚ್ಚುಗೆ ಪಡೆಯಬೇಕು. ಇದರಲ್ಲಿ ಜನರ ಪಾತ್ರ ಅತ್ಯಂತ ಮುಖ್ಯ. ನಾವು ಪ್ರಶ್ನಿಸದಿದ್ದರೆ, ತಪ್ಪುಗಳನ್ನು ವಿರೋಧಿಸದಿದ್ದರೆ, ಭ್ರಷ್ಟರು ಮತ್ತಷ್ಟು ಬಲಿಷ್ಠರಾಗುತ್ತಾರೆ. ಮತದಾನ ಕೇವಲ ಹಕ್ಕು ಮಾತ್ರವಲ್ಲ – ಅದು ಸಮಾಜವನ್ನು ಶುದ್ಧಗೊಳಿಸುವ ಶಕ್ತಿಯುತ ಅಸ್ತ್ರವೂ ಹೌದು. ಯೋಗ್ಯ, ನಿಷ್ಠಾವಂತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ.

ರಾಜ್ಯವು ನಿಜವಾಗಿ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ರಾಜಕೀಯ ಶುದ್ಧೀಕರಣ ಅನಿವಾರ್ಯ. ನಿಷ್ಕಳಂಕ ನಾಯಕರಿಗೆ ಬೆಂಬಲ, ಭ್ರಷ್ಟರಿಗೆ ಬಹಿಷ್ಕಾರ –ಇದುವೇ ಉತ್ತಮ ಭವಿಷ್ಯದ ದಾರಿ.

**ಸ್ವಚ್ಛ ರಾಜಕಾರಣದಿಂದ ಮಾತ್ರ ಸಮೃದ್ಧ ರಾಜ್ಯ ಸಾಧ್ಯ.**
ಜನಸೇವೆ ಧ್ಯೇಯವಾಗಿರುವ ಆಡಳಿತ ಬಂದಾಗಲೇ ನಿಜವಾದ ಪ್ರಗತಿಯ ಸೂರ್ಯ ಉದಯವಾಗುತ್ತದೆ.

# ಸಿ.ಎಸ್.ಷಡಾಕ್ಷರಿಗೆ ಸನ್ಮಾನ ನೌಕರರ ಸಮಸ್ಯೆಗಳಿಗೆ ಸ್ಪಂದನೆ

ಮಲ್ಲಮ್ಮ ನುಡಿ ವಾರ್ತೆ
ಭಾಲ್ಕಿ

ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ಸರಕಾರಿ ನೌಕರರ ಸಮಸ್ಯೆಗಳಿಗೆ ಸರಕಾರಿ ನೌಕರರ ಸಂಘ ಸ್ಪಂದಿಸುತ್ತಿದೆ ಎಂದು ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು. ಪಟ್ಟಣದ ತಾಲೂಕು ಸರಕಾರಿ ನೌಕರರ ಸಂಘದ ಕಚೇರಿ ಆವರಣದಲ್ಲಿ ತಾಲೂಕು ಸರಕಾರಿ ನೌಕರರ ಸಂಘದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಸರಕಾರಿ ನೌಕರರ ಹುದ್ದೆಗೆ ವಿಶಿಷ್ಟ ಗೌರವ ಸಿಗುತ್ತದೆ. ಹಾಗಾಗಿ ಸರಕಾರಿ ನೌಕರರು ತಮ್ಮ ಜವಾಬ್ದಾರಿ ಅರಿತು ಜನರಿಗೆ ಉತ್ತಮ ಸೇವೆ ನೀಡಬೇಕು ಎಂದರು. ರಾಜ್ಯದಲ್ಲಿ 5 ಲಕ್ಷಕ್ಕೂ ಮೇಲ್ಪಟ್ಟು ಸರಕಾರಿ ನೌಕರರು ಇದ್ದು, ಸಾಕಷ್ಟು ಒತ್ತಡವನ್ನು ನಿಭಾಯಿಸಿ ಜನರಿಗೆ ಸೇವೆಯನ್ನು ನೀಡುತ್ತಿದ್ದಾರೆ.

ನೌಕರರಿಗೂ ಅನೇಕ ಸಮಸ್ಯೆ, ಬೇಡಿಕೆಗಳಿದ್ದು ಸರಕಾರದ ಮಟ್ಟದಲ್ಲಿ ಹಂತ ಹಂತವಾಗಿ ಈಡೇರಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದರು. ನೌಕರರ 26 ಆದೇಶಗಳನ್ನು ಮಾಡಿಸಿದ್ದೇವೆ. ಕೆಜಿಡಿ ಆನ್‌ಲೈನ್, ಸರಿಯಾದ ಸಮಯಕ್ಕೆ ವೇತನ, ಡಿಎ ಹೆಚ್ಚಳ, ಆರೋಗ್ಯ ಯೋಜನೆ, ಮಹಿಳಾ ನೌಕರಸ್ಥರಿಗೆ ಋತುಚಕ್ರ ರಜೆ, ಕ್ಯಾನ್ಸರ್, ಕಿಡ್ನಿ ಪೀಡಿತ ನೌಕರರಿಗೆ 6 ತಿಂಗಳು ರಜೆ ಸೇರಿ ಮುಂತಾದ ಬೇಡಿಕೆಗಳನ್ನು ಈಡೇರಿಸಲಾಗುತ್ತಿದೆ ಎಂದರು.

ಮುಂದಿನ ದಿನಗಳಲ್ಲಿ ರಾಜ್ಯದ ಸರಕಾರಿ ನೌಕರರಿಗೆ ಕೇಂದ್ರದ ಮಾದರಿ ವೇತನ ನೀಡುವುದು ಸೇರಿ ಎನ್‌ಪಿಎಸ್ ರದ್ದು ಪಡಿಸಿ ಒಪಿಎಸ್ ಯೋಜನೆ ಜಾರಿಗೆ ತರುವಂತೆ ಸರಕಾರ ಮಟ್ಟದಲ್ಲಿ ಪ್ರಯತ್ನ ನಡೆದಿವೆ. ಈ ಎರಡು ಬೇಡಿಕೆಗೆ ಸರಕಾರಕ್ಕೆ ಕಾಲವಕಾಶ ನೀಡಲಾಗಿದೆ. ವಿಳಂಬ ಆದರೆ ಮುಂದಿನ ದಿನಗಳಲ್ಲಿ ಹೋರಾಟ ನಡೆಸಿ ಸರಕಾರಿ ನೌಕರರ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸೋಮಶೇಖರ ಚಿದ್ರಿ, ಗೌರವಾಧ್ಯಕ್ಷ ಸೂರ್ಯಕಾಂತ ಬಿರಾದಾರ್, ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ, ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್, ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಬಂಗಾರೆ, ಕಾರ್ಯದರ್ಶಿ ರಾಜಪ್ಪ ಪಾಟೀಲ್, ಉಪಾಧ್ಯಕ್ಷ ಪ್ರಭು ಡಿಗ್ಗೆ, ಖಜಾಂಚಿ ಸುನಿಲಕುಮಾರ ಬಿರಾದಾರ್, ನಿರ್ದೇಶಕರಾದ ಮಲ್ಲಿಕಾರ್ಜುನ ಘುಲಾರಿ, ಮಾರುತಿ ಜಾಬನೂರ, ರಾಜೇಂದ್ರ, ನಂದು ಜಾಧವ, ದತ್ತಾ, ನಾಜೀಮ, ತಬಸುಮ, ಶಮಿ ಪಟೇಲ್, ಪ್ರಮುಖರಾದ ವಿಜಯಕುಮಾರ ಪಾಟೀಲ್, ರವಿಚಂದ್ರ ಮೈನಾಳೆ, ದಾವುದ, ಶಿವಕಾಂತ ಬಾಪೂಸೆ, ಮೀನಾ, ಸುಜಾತಾ, ನಿರ್ಮಲಾ, ಚಂದ್ರಕಲಾ ಡಿಗ್ಗೆ, ರತ್ನಮ್ಮ ಹಾಲಕುಡೆ, ಪುಣ್ಯವತಿ ಸೇರಿದಂತೆ ಹಲವರು ಇದ್ದರು. ಕುಪೇಂದ್ರ ಜಗಶೆಟ್ಟೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.



ಭಾಲ್ಕಿಯ ಸರಕಾರಿ ನೌಕರರ ಸಂಘದ ಕಚೇರಿ ಆವರಣದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರನ್ನು ಸನ್ಮಾನಿಸಲಾಯಿತು. ಸೋಮಶೇಖರ ಚಿದ್ರಿ, ಸೂರ್ಯಕಾಂತ ಬಿರಾದಾರ್, ರಾಜಪ್ಪ ಪಾಟೀಲ್, ಪ್ರಭು ಡಿಗ್ಗೆ, ಮಲ್ಲಿಕಾರ್ಜುನ ಘುಲಾರಿ, ಸುನಿಲ ಬಿರಾದಾರ್, ಮಾರುತಿ ಜಬನೂರ, ಕುಪೇಂದ್ರ ಜಗಶೆಟ್ಟೆ ಇದ್ದರು.

# ಕನ್ನಡ ಒಂದು ಜಾತ್ಯಾತೀತ ಭಾಷೆ ನಾಡೋಜ ಬರಗೂರು ರಾಮಚಂದ್ರಪ್ಪ

ಮಲ್ಲಮ್ಮ ನುಡಿ ವಿಜಯನಗರ (ಹೊಸಪೇಟೆ)

ಕನ್ನಡ ಒಂದು ಜಾತ್ಯಾತೀತ ಭಾಷೆ. ಎಲ್ಲಾ ಜಾತಿ, ಧರ್ಮದ ಜನರು ಕನ್ನಡ ಸಾಹಿತ್ಯವನ್ನು ಕಟ್ಟುತ್ತಾ ಬಂದಿದ್ದಾರೆ. ಕನ್ನಡ ಸಮಾಜದೊಳಗೆ ಕ್ರಿಯಾಶೀಲರಾಗಿದ್ದಾರೆ. ಆದ್ದರಿಂದ ಕನ್ನಡವನ್ನು ಕೇಂದ್ರವನ್ನಾಗಿಟ್ಟುಕೊಂಡಿರುವ ಮತ್ತು ಸಂಶೋಧನೆಯನ್ನು ಜೀವಾಳವಾಗಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಚ್ಚು ಬೆಂಬಲ ಸಿಗಬೇಕು ಎಂದು ಹಿರಿಯ ವಿದ್ವಾಂಸರು ಮತ್ತು ಸಂಸ್ಕೃತಿ ಚಿಂತಕರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ 17ನೇ ಫೆಬ್ರವರಿ 2026ರಂದು 34ನೇ ನುಡಿಹಬ್ಬದ ಪ್ರಯುಕ್ತ ಪ್ರಸಾರಾಂಗವು ಹಮ್ಮಿಕೊಂಡಿದ್ದ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಮುಂದುವರೆದು ಮಾತನಾಡುತ್ತ, ಇಂದು ಪ್ರಸಾರಾಂಗಗಳು ಭೂತ ಮತ್ತು ಭವಿಷ್ಯದ ಚಿಂತನೆಗಳ ಜೊತೆಗೆ ಹೆಚ್ಚು ಹೆಚ್ಚು ವರ್ತಮಾನದ ಜೊತೆ ಮುಖಾಮುಖಿಯಾಗುವ, ಅನುಸಂಧಾನಗೊಳ್ಳುವ ಪುಸ್ತಕಗಳ ಪ್ರಕಟಣೆಗೆ ಒತ್ತು ನೀಡಬೇಕು. ಇತ್ತೀಚಿಗೆ ವಾಣಿಜ್ಯ, ವಾಸ್ತುಶಿಲ್ಪ, ಫ್ಯಾಶನ್ ತಂತ್ರಜ್ಞಾನ, ಹೊಟೇಲ್ ಮ್ಯಾನೇಜ್‌ಮೆಂಟ್ ಶಿಸ್ತುಗಳು ಮುನ್ನಲೆಯಲ್ಲಿದ್ದು, ಮಾನವಿಕ ಶಿಸ್ತುಗಳನ್ನು ಅಧ್ಯಯನ ಮಾಡುವವರ ಪ್ರಮಾಣ ಶೇ. 5ರಷ್ಟಿದೆ. ಮಾನವಿಕ ಜ್ಞಾನ ಶಿಸ್ತುಗಳಿಗೆ ಹಿನ್ನಡೆಯಾಗುತ್ತಿದೆ. ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮಾನವಿಕ ಜ್ಞಾನಗಳ ಅಗತ್ಯವಿದೆ. ತಂತ್ರಜ್ಞಾನ ಇಂದು ಜ್ಞಾನವಾಗಿ ಉಳಿದಿಲ್ಲ, ಉದ್ಯಮವಾಗಿ ಹೋಗಿದೆ. ಮನುಷ್ಯ ಜ್ಞಾನಕ್ಕಿಂತ ತಂತ್ರಜ್ಞಾನ ಮೇಲುಗೈ ಪಡೆದಿದೆ. ತಂತ್ರಜ್ಞಾನವನ್ನು ವಿವೇಕ ಮತ್ತು ಔಚಿತ್ಯಪೂರ್ಣವಾಗಿ ಬಳಸಬೇಕು. ಎಂದಿಗೂ ಮನುಷ್ಯ ಜ್ಞಾನಕ್ಕೆ ಮೊದಲ ಆದ್ಯತೆ ಸಿಗಬೇಕು ಎಂದರು. ಪುಸ್ತಕಗಳ ಓದಿನ ಪ್ರವೇಶ ಪೂರ್ವಗ್ರಹಗಳಿಂದ ಮುಕ್ತವಾಗಿರಬೇಕು. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿರಬೇಕು ಆದರೆ ದ್ವೇಷಗಳಿರಬಾರದು, ಬೌದ್ಧಿಕ ವಿಭಜಕ ಪ್ರವೃತ್ತಿಗಳಿರಬಾರದು. ಲೇಖಕರಾದ ನಾವೆಲ್ಲರೂ ಜನರಿಗೆ ಸತ್ಯವನ್ನು ಹೇಳುವ ಪ್ರ್ಯಾದಸ್ಥ ಮನುಷ್ಯರಾಗೋಣ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಪ್ರಸಾರಾಂಗದ ಪುಸ್ತಕಗಳನ್ನು ಬಿಡುಗಡೆ ಮಾಡಲು ನನ್ನನ್ನು ಆಹ್ವಾನಿಸಿರುವುದು ನನಗೆ ಖುಷಿ ನೀಡಿದೆ. ವಿಶ್ವವಿದ್ಯಾಲಯಕ್ಕೆ ಒಳಿತಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಡಾ.ಚಂದ್ರಶೇಖರ ಕಂಬಾರ ಅವರಿಗೆ ಗಣ್ಯಮಾನ್ಯರು ಗೌರವ ಸನ್ಮಾನ ಮಾಡಿದರು.

# ಸಂತ ಸೇವಾಲಾಲ್ ಮಹಾರಾಜರ ಜಯಂತ್ಯುತ್ಸವ; ಅದ್ದೂರಿ ಮೆರವಣಿಗೆ



ಮಲ್ಲಮ್ಮ ನುಡಿ ಹುಣಸಗಿ

ಭಾನುವಾರ ನಡೆದ ಸಂತ ಸೇವಾಲಾಲ್ ಮಹಾರಾಜರ ಜಯಂತಿಯನ್ನು ಬಂಜಾರ ಸಮುದಾಯ ಬಾಂದವರು ಹಾಗೂ ಪಟ್ಟಣದ ಮುಖಂಡರಿಂದ ಅದ್ದೂರಿಯಾಗಿ ಆಚರಿಸಿತು. ಸೇವಾಲಾಲರ ಚಿತ್ರದ ಮೆರವಣಿಗೆ ಶ್ರೀ.ಮಹಾಂತ ಸ್ವಾಮಿ ವೃತ್ತದಿಂದ ಸೇವಾಲಾಲ್ ವೃತ್ತವರಿಗೆ ನೂರಾರು ಜನರೊಂದಿಗೆ ಮೆರವನಣೆಗೆ ಸಾಗಿ ಬಂತು.

ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಬೆಳಿಗ್ಗೆ 10 ಗಂಟೆ ಹೊತ್ತಿಗೆ ಶುರುವಾದ ಮೆರವಣಿಗೆ 12 ಗಂಟೆಗೆ

ಸಮುದಾಯದ ಸಾವಿರಾರು ಜನರು ಭವ್ಯ ಮೆರವಣಿಗೆಯಲ್ಲಿ ಪಾಲ್ಗೊಂಡರು.ಯುವಜನರು ಮನ ದಣಿಯುವಂತೆ ಕುಣಿದು ಕುಪ್ಪಳಿಸಿದರು.

ನಂತರ ಸೇವಾಲಾಲ್ ವೃತ್ತದಲ್ಲಿ ಸಂತ ಸೇವಾಲಾಲ್ ಮೂರ್ತಿ ಸ್ಥಾಪನೆ ಅಡಿಗಲ್ಲು ಪಟ್ಟಣದ ಮುಖಂಡರು ಸಮಾಜ ಮುಖಂಡರಿಂದ ನೆರವೇರಿಸಲಾಯಿತು

ಈ ಸಂದರ್ಭದಲ್ಲಿ ಬಸವರಾಜ,ಬಳಿ ಮೋತಿಲಾಲ್ ಚಹ್ವಾಣ, ಸಿದ್ದಣ್ಣ ಮಲಗದಿನ್ನಿ, ಸಿದ್ದು ಮುದಗಲ್ ಆರ್ ಎಮ್ ರೇವಡಿ ವೆಂಕಟೇಶ್ ಪಿ ರಾಥೋಡ್ ಶೇಖರ್ ನಾಯಕ, ವಿಠ್ಠಲ ಚವ್ಹಾಣ ಗುರು ಹುಲಕಲ್ ಬಾಬು ನಾಯಕ್, ವಿಠ್ಠಲ್ ನಾಯಕ ನಿಂಗನಾಯಕ,ಕೃಷ್ಣ ಎಚ್ ಜಾಧವ ಶರಣಪ್ಪ ಗುಳಬಾಳ,ಗುಂಡೂರಾವ್ ದೇವಿಂದ್ರಪ್ಪ ಬಳಿಚಕ್ರ ಗುರು ರಾಥೋಡ್, ಸೀತಾರಾಮ್ ತಾರನಾಥ ರಾಠೋಡ ಕಾಂತೇಶ್ ಹಲಗಿನಮನಿ ತಾಲೂಕಿನ ಸಮಾಜದ ಬಾಂಧವರು ಇದ್ದರು.

# ಗ್ರಾಮೀಣ ಬ್ಯಾಂಕಿಗೆ ಶಾಲಾ ಮಕ್ಕಳು ಭೇಟಿ

ಮಲ್ಲಮ್ಮ ನುಡಿ ಕೆಂಭಾವಿ

ಸುರಪುರ ತಾಲೂಕಿನ ಗೌಡಗೇರ ಗ್ರಾಮದ ಪ್ರಧಾನ ಮಂತ್ರಿ ಉದಯೋನ್ಮುಖ ಭಾರತ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪಟ್ಟಣದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಗೆ ಮಂಗಳವಾರ ಭೇಟಿ ನೀಡಿ ಶಾಖಾ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರೊಂದಿಗೆ ಸಮಾಲೋಚನೆ ನಡೆಸಿ ಬ್ಯಾಂಕಿನ ಸೇವಾ ಸೌಲಭ್ಯಗಳ ಮಾಹಿತಿ ಪಡೆದುಕೊಂಡರು.

ಇದೇ ವೇಳೆ ಬ್ಯಾಂಕಿನ ವ್ಯವಸ್ಥಾಪಕ ವಿಜಯಭಾಸ್ಕರ್ ರೆಡ್ಡಿ ಮಕ್ಕಳೊಂದಿಗೆ ಮಾತನಾಡಿ ವಿದ್ಯಾರ್ಥಿಗಳು ಹಾಗೂ ಪಾಲಕ ಪೋಷಕರು ಬ್ಯಾಂಕ್ಗಳಲ್ಲಿ ಉಳಿತಾಯ ಖಾತೆ ತೆರೆದು ಹಣ ಹೂಡಿಕೆ ಮಾಡಿದರೆ ಅದಕ್ಕೆ ಬಡ್ಡಿ ನೀಡಲಾಗುತ್ತದೆ, ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಪಡೆಯಬಹುದು, ಹಾಗೂ ಅಪಘಾತ ವಿಮೆ, ವೈಯಕ್ತಿಕ ವಿಮೆ, ಬೆಳೆ ವಿಮೆ, ಹಾಗೂ ಇನ್ನಿತರ ಆರ್ಥಿಕ ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದ ಅವರು, ಯಾವುದೇ ಕಾರಣಕ್ಕೂ ಬ್ಯಾಂಕುಗಳಿಂದ ಫೋನ್ ಕರೆ ಹಾಗೂ ವಾಟ್ಸಾಪ್ ಲಿಂಕ್ ಗಳಿಂದ ಗ್ರಾಹಕರು ಎಚ್ಚರಿಕೆ ವಹಿಸಿಕೊಂಡರೆ ಸೈಬರ್ ವಂಚನೆಯಿಂದ ತಪ್ಪಿಸಿಕೊಳ್ಳಬಹುದು ಎಂದು ಹೇಳಿದರು. ಬ್ಯಾಂಕಿನ ಸಿಬ್ಬಂದಿ ವಿಜಯಕುಮಾರ್ ಮತ್ತು ಅಂಜನಾದೇವಿ ಹಿರಿಯ ಪತ್ರಕರ್ತ ಸಂಜೀವರಾವ್ ಕುಲ್ಕರ್ಣಿ ಮುಖ್ಯಶಿಕ್ಷಕ ದುರ್ಗಪ್ಪ ರಾಂಪುರ, ಸಹಶಿಕ್ಷಕರು ಹಳ್ಳೇರಾವ್ ಕುಲ್ಕರ್ಣಿ, ಭೀಮನಗೌಡ ದೇಸಾಯಿ, ಸುನೀಲ್, ಹಣ್ಮಂತಿ ಸೇರಿದಂತೆ ಇತರರು ಇದ್ದರು.




# ಬಸಂತಪೂರದಲ್ಲಿ ಮೆಣಸಿನ ಕಾಯಿ ಬೆಳೆಯ ಕ್ಷೇತ್ರೋತ್ಸವ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ ಬೀದರ:

ಮೆಣಸಿನ ಕಾಯಿ ಬೆಳೆಯ ತಳಿಯನ್ನು ಕ್ಷೇತ್ರಕ್ಕೆ ಹೊಸದಾಗಿ ಪರಿಚಯಿಸುವ ಮುಖಾಂತರ ಹೆಚ್ಚಿನ ಲಾಭ ಪಡೆಯಬೇಕೆಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಎಸ್.ವಿ.ಪಾಟೀಲ್ ಸಲಹೆ ನೀಡಿದರು.

ಅವರು ಸೋಮವಾರ ಬೀದರ ಜಿಲ್ಲೆಯ ಬಸಂತಪೂರ ಗ್ರಾಮದ ರೈತರಾದ ಈರಪ್ಪ ಕಾಳೆ ಅವರ ಜಮೀನಿನಲ್ಲಿ ಹಮ್ಮಿಕೊಂಡಿದ್ದ ಮೆಣಸಿನ ಕಾಯಿ ಬೆಳೆಯ ಕ್ಷೇತ್ರೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮೆಣಸಿನ ಕಾಯಿಯು ಒಂದು ತೋಟಗಾರಿಕಾ ಹಾಗೂ ವಾಣಿಜ್ಯ ಬೆಳೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಹಸಿ ಹಾಗೂ ಒಣ ಮೆಣಸಿನ ಕಾಯಿ ಬೇಸಾಯ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದ್ದು, ರೈತರು ಮೆಣಸಿನ ಕಾಯಿಯನ್ನು ವಿದೇಶಗಳಿಗೆ ರಪ್ತು ಮಾಡುವ ಮೂಲಕ ಅಧಿಕ ಲಾಭವನ್ನು ಕಂಡುಕೊಳ್ಳಬಹುದಾಗಿದೆ ಹಾಗೂ ರೈತರು ಹವಾಮಾನ ಅನುಗುಣವಾಗಿ ಶಿಫಾರಿತ ತಳಿಗಳನ್ನು ಬೆಳೆಸಲು ಕ್ರಮವಹಿಸುವಂತೆ ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಎಸ್.ವಿ.ಪಾಟೀಲ್ ಸಲಹೆ ನೀಡಿದರು. ಭಾಲ್ಕಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಮಲ್ಲಿಕಾರ್ಜುನ ಅವರು ಮಾತನಾಡಿ, ಕೃಷಿ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ರೈತರು ತಪ್ಪದೇ ತಮ್ಮ ತಾಕುಗಳ ಮಣ್ಣು ಪರೀಕ್ಷೆ ಮಾಡಿಸಿ, ಅದಕ್ಕೆ ಅನುಗುಣವಾಗಿ ಬೆಳೆಗಳ ಸಸೂಕ್ತ ತಳಿಗಳನ್ನು ಬೆಳೆಯುವುದರಿಂದ ಅಧಿಕ ಇಳುವರಿ ಪಡೆಯಬಹುದೆಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿ ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಅರವಿಂದಕುಮಾರ ರಾಠೋಡ ಅವರು ಮಾತನಾಡಿ, ಮೆಣಸಿನಕಾಯಿ ಬೆಳೆಯ ಬೀಜೋತ್ಪಾದನೆ ಕುರಿತು ಮಾಹಿತಿ ನೀಡಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ ವತಿಯಿಂದ ಅಭಿವೃದ್ಧಿಪಡಿಸಲಾದ ಕೃಷ್ಣ ಪ್ರಭಾ ರುದ್ರ ತಳಿಯ ಪ್ರಾತ್ಯಕ್ಷಿಕೆ ಹಾಗೂ ಹೊಸ ತಳಿಗಳ ಪರಿಚಯ ಅಡಿಯಲ್ಲಿ ಆಸಕ್ತ ರೈತರಿಗೆ ಬೀಜ ಹಾಗೂ ಸಸಿಗಳನ್ನು ವಿತರಿಸಲಾಯಿತು. ಬಸಂತಪೂರ ಗ್ರಾಮದ ಪ್ರಗತಿಪರಿ ರೈರಾದ ಬಸವರಾಜ ಕಾಳೆ, ಗುರುಲಿಗಪ್ಪಾ ಪಾಟೀಲ್, ವೆಂಕಟರಾವ ಬಿರಾದಾರ, ನರಸಾ ರೆಡ್ಡಿ, ಸುಭಾಸ ಪಾಟೀಲ್ ಅವರು ಮುಂಬರುವ ದಿನಗಳಲ್ಲಿ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಕೇಂದ್ರ ಬೀದರ ವತಿಯಿಂದ ಇತರೆ ತೋಟಗಾರಿಕೆ ಬೆಳೆಗಳ ಕ್ಷೇತ್ರೋತ್ಸವ ಆಯೋಜಿಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ತೋಟಗಾರಿಕೆ ಅಧಿಕಾರಿ ಮಹೆಬೂಬ, ಡಾ.ರಾಜಕುಮಾರ ಎಮ್., ಬಸಂತಪೂರ ಹಾಗೂ ಸುತ್ತಮುತ್ತಲಿನ ಗ್ರಾಮದ ರೈತರು ಸೇರಿದಂತೆ ಇತರರು ಉಪಸ್ಥಿತರಿದ್ದರು. ಬೀದರನ ವಿಸ್ತರಣಾ ಘಟಕದ ಅಧಿಕಾರಿ ಜಾನವಿ ಡಿ.ಆರ್. ಕಾರ್ಯಕ್ರಮ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು.





# ಚನ್ನಬಸವಾಶ್ರಮದಲ್ಲಿ ಕಾರ್ಯಕ್ರಮ ಮಹಾಸಭೆಯ ಅಧ್ಯಕ್ಷ ಖಂಡ್ರೆಗೆ ಅದ್ಧೂರಿ ಸನ್ಮಾನ

**ಮಲ್ಲಮ್ಮ ನುಡಿ ಭಾಲ್ಕಿ:**
ರಾಜ್ಯದಲ್ಲಿ ವೀರಶೈವ ಲಿಂಗಾಯತ ಬಹುದೊಡ್ಡ ಸಮುದಾಯವಾಗಿದ್ದು, ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಒಳ ಪಂಗಡಗಳನ್ನು ಒಗ್ಗೂಡಿಸಿ ಈ ಸಮಾಜವನ್ನು ಬಲಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಅಖಿಲ ಭಾರತ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನ ಮತ್ತು ಅಭಿನಂದನಾ ಸಮಿತಿವತಿಯಿಂದ ಸೋಮವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರು ಸ್ವಧರ್ಮದಲ್ಲಿ ನಿಷ್ಠೆ ಇಟ್ಟುಕೊಂಡು ಸಮುದಾಯವನ್ನು ಸಂಘಟಿಸುವುದರ ಜತೆಗೆ ಪರಧರ್ಮಗಳ ಬಗ್ಗೆ ಗೌರವ ಬೆಳೆಸಿಕೊಂಡು ಸುಂದರ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಹಾನಗಲ್ ಕುಮಾರೇಶ್ವರ ಸ್ಥಾಪಿಸಿದ 122 ವರ್ಷಗಳ ಇತಿಹಾಸ ಹೊಂದಿರುವ ವೀರಶೈವ ಲಿಂಗಾಯತ ಮಹಾಸಭೆ ಇದು ವರೆಗೂ 23 ಅಧ್ಯಕ್ಷರನ್ನು ಕಂಡಿದೆ. ಸಿರಸಂಗಿ ಲಿಂಗರಾಜ, ಶತಾಯಷಿ ಡಾ.ಶಿವಕುಮಾರ ಸ್ವಾಮೀಜಿ, ಶರಣಬಸಪ್ಪ ಅಪ್ಪ, ಡಾ.ಭೀಮಣ್ಣ ಖಂಡ್ರೆ, ಡಾ.ಶಾಮನೂರು ಶಿವಶಂಕರಪ್ಪ ಸೇರಿ ಮುಂತಾದವರು ಮಹಾಸಭೆಗೆ ಅಧ್ಯಕ್ಷರಾಗಿ ತಮ್ಮ ಕಾರ್ಯಕಾಲದಲ್ಲಿ ಉತ್ತಮ ಕೆಲಸ ಮಾಡಿದ್ದಾರೆ.

ಇಂತಹ ಮಹಾಸಭೆಗೆ 24ನೇ ಅಧ್ಯಕ್ಷರನ್ನಾಗಿ ವಿಶ್ವಾಸವಿಟ್ಟು ನನಗೆ ಜವಾಬ್ದಾರಿ ವಹಿಸಲಾಗಿದೆ. ಮಠಾಧೀಶರ ಮಾರ್ಗದರ್ಶನ ಹಿರಿಯರ ಅನುಭವ ಪಡೆದು ಸಮುದಾಯಕ್ಕೆ ಶಕ್ತಿ ತುಂಬುವ ಪ್ರಯತ್ನ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ವಸತಿ ನಿಲಯ ಕಟ್ಟಡಗಳನ್ನು ನಿರ್ಮಿಸಿ ಸಮಾಝುದ ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.



ಭಾಲ್ಕಿಯ ಚನ್ನಬಸವಾಶ್ರಮ ಪರಿಸರದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ದಂಪತಿಗಳನ್ನು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಗುರುಬಸವ ಪಟ್ಟದ್ದೇವರು ಸನ್ಮಾನಿಸಿದರು. ರಾಜಶೇಖರ ಅಷ್ಟೂರೆ, ಶಶಿಧರ ಕೋಸಂಬೆ ಇದ್ದರು.



ವಿವಿಧ ಸಂಘ ಸಂಸ್ಥೆಗಳ ಮುಖಂಡರು ಮಹಾಸಭೆಯ ಅಧ್ಯಕ್ಷ ಖಂಡ್ರೆ ಅವರನ್ನು ಸನ್ಮಾನಿಸಿದರು.

ರಾಜಕೀಯ ಇದೊಂದು ಸಮಾಜ ಸೇವೆಯೆಂದ ಅರಿತು ನಮ್ಮ ತಂದೆ ಡಾ.ಭೀಮಣ್ಣ ಖಂಡ್ರೆ ಅವರು ರಾಜಕೀಯ ಕ್ಷೇತ್ರ ಪ್ರವೇಶಿಸಿದರು. ಅದರಂತೆ ನಾನು ಕೂಡ ನಮ್ಮ ತಂದೆ ಮಾರ್ಗದರ್ಶನದಲ್ಲಿ ರಾಜಕೀಯಕ್ಕೆ ಬಂದಿದ್ದು, ಎರಡು ಸಲ ಮಂತ್ರಿ ಮತ್ತು ನಾಲ್ಕು ಬಾರಿ ಶಾಸಕನಾಗಿ ಜನರ ಸೇವೆಯಲ್ಲಿದ್ದೇನೆ ಎಂದು ತಿಳಿಸಿದರು.

> “ ವ್ಯಕ್ತಿಗಳು ಹುಟ್ಟಿ ಅಳಿದು ಹೋಗುತ್ತಾರೆ. ಸಂಸ್ಥೆ ಹುಟ್ಟಿ ಸಾಯುತ್ತವೆ. ಸಾಮ್ರಾಜ್ಯ ಬಾಳಿ ಪತನವಾಗುತ್ತದೆ. ಆದರೆ ಮಾಡುವ ಸಮಾಜ ಸೇವೆ ಶಾಶ್ವತವಾಗಿ ಉಳಿಯುತ್ತದೆ.
> – ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವರು ಬೀದರ್

ನೇತೃತ್ವ ವಹಿಸಿದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಶತಮಾನೋತ್ಸವ ಕಂಡಿರುವ ವೀರಶೈವ ಲಿಂಗಾಯತ ಮಹಾಸಭೆ ತನ್ನದೇ ಇತಿಹಾಸ, ಪರಂಪರೆ ಹೊಂದಿದೆ. ಅಂತಹ ಮಹಾಸಭೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮೆಲ್ಲರಿಗೂ ಅತೀವ ಸಂತಸ ತರಿಸಿದೆ. ಅವರ ಕಾರ್ಯಕಾಲದಲ್ಲಿ ಸಮುದಾಯ ಮತ್ತಷ್ಟು ಪ್ರಗತಿ ಕಾಣಲಿ ಎಂದು ಆಶಿಸಿದರು.

ಈಶ್ವರ ಖಂಡ್ರೆ ಅವರು ರಾಜಕೀಯ ಸೇವೆ ಜತೆಗೆ ಧರ್ಮ ಕಾರ್ಯಗಳಲ್ಲಿಯು ತೊಡಗಿಸಿಕೊಂಡಿದ್ದಾರೆ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ, ಅನುಭವ ಮಂಟಪ ಕಟ್ಟಡ ನಿರ್ಮಾಣಕ್ಕೆ ನೀಲನಕಾಶೆ, ಅನುದಾನ ಬಿಡುಗಡೆ, ಬಸವಣ್ಣನವರ ಹೆಸರಿನಲ್ಲಿ ಉದ್ಯಾನವನ ನಿರ್ಮಾಣ ಸೇರಿ ಇಂತಹ ಅನೇಕ ವಿಧಾಯಕ ಕಾರ್ಯಗಳು ಈಶ್ವರ ಖಂಡ್ರೆ ಅವರು ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸಿ ಮಾತನಾಡಿದರು. ಅಭಿನಂದನಾ ಸಮಿತಿ ಅಧ್ಯಕ್ಷ ಹಿರಿಯ ನ್ಯಾಯವಾದಿ ರಾಜಶೇಖರ ಅಷ್ಟೂರೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಡಾ.ಗೀತಾ ಈಶ್ವರ ಖಂಡ್ರೆ ಇದ್ದರು. ಅನುಭವ ಮಂಟಪ ಸಂಸ್ಕೃತಿ ವಿದ್ಯಾಲಯದ ಮಕ್ಕಳು ವಚನ ಸ್ತೋತ್ರ, ಪ್ರಾರ್ಥನೆ ಗೀತೆ ನಡೆಸಿ ಕೊಟ್ಟರು. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿದರು. ಸಂತೋಷ ಬಿಜಿ ಪಾಟೀಲ್ ವಂದಿಸಿದರು.

## ಖಂಡ್ರೆ ಮುಖ್ಯಮಂತ್ರಿ ಆಗಲಿ

ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರು, ಸಚಿವರು ಆಗಿರುವ ಈಶ್ವರ ಖಂಡ್ರೆ ಅವರು ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿ ಆಗಿ ರಾಜ್ಯವನ್ನು ಪ್ರತಿನಿಧಿಸಲಿ ಎಂದು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ರಾಜ್ಯದಲ್ಲಿ ಸಚಿವರಾಗಿ ಖಂಡ್ರೆ ಅವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಸಿಎಂ ಆಗುವ ಎಲ್ಲ ಅರ್ಹತೆ ಅವರಲ್ಲಿದೆ. ಹಾಗಾಗಿ ಈಶ್ವರ ಖಂಡ್ರೆ ಅವರನ್ನು ಸಿಎಂ ಆಗಿ ನೋಡುವ ಈ ಭಾಗದ ಜನರ ಕನಸು ಆದಷ್ಟು ಬೇಗ ಈಡೇರಲಿ ಎಂದು ಆಶಿಸಿದರು.

## ಖಂಡ್ರೆ ದಂಪತಿಗಳಿಗೆ ಸನ್ಮಾನ

ಹಿರೇಮಠ ಸಂಸ್ಥಾನ ಮತ್ತು ಅಭಿನಂದನಾ ಸಮಿತಿ ವತಿಯಿಂದ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಉಭಯ ಪೂಜ್ಯರು ಖಂಡ್ರೆ ದಂಪತಿಗಳನ್ನು ಸನ್ಮಾನಿಸಿ, ಅಭಿನಂದನಾ ಪತ್ರ ನೀಡಿ ಆಶೀರ್ವದಿಸಿದರು. ನಂತರ ವಿವಿಧ ಸಂಘ ಸಂಸ್ಥೆ, ವಿವಿಧ ಸಮಾಜದ ಮುಖಂಡರು, ಪ್ರಮುಖರು, ಮಹಿಳೆಯರು ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಸುಮಾರು 2 ಗಂಟೆಗಳ ಕಾಲ ನಿರಂತರವಾಗಿ ಸರತಿ ಸಾಲಿನಲ್ಲಿ ಜನರು ನಿಂತೂ ತಮ್ಮ ನೆಚ್ಚಿನ ನಾಯಕ ಖಂಡ್ರೆ ಅವರನ್ನು ಸನ್ಮಾನಿಸಿ, ಖುಷಿ ಪಟ್ಟರು.

# ವಿವಿಧ ಮಸಾಲಾ ಪದಾರ್ಥಗಳ ಪೌಡರ್ ತರಬೇತಿ



**ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**
ಟಿ.ಎಂ ಜಿ ಸುನಿಧಿ ಫೌಂಡೇಶನ್ ಟ್ರಸ್ಟ್ ಮಣಿಪಾಲ ಪ್ರಾಯೋಜಕತ್ವದಲ್ಲಿ ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ, ಸಂಗಮ ಸೇವಾ ಸಂಸ್ಥೆ ಅಂಕೋಲಾ, ಶಾರದಾಂಬಾ ಮಹಿಳಾ ಮಂಡಳಿ ಕಾಕರ ಮಠ ಅಂಕೋಲಾ ಇವರ ಮಾರ್ಗದರ್ಶನದಲ್ಲಿ ಅಂಕೋಲಾ ತಾಲೂಕಿನ ಕಾಕರಮಠದಲ್ಲಿ 7 ದಿನಗಳ ಕಾಲ ವಿವಿಧ ಮಸಾಲಾ ಪದಾರ್ಥಗಳ ಪೌಡರ್ ತರಬೇತಿಯ ಉದ್ಘಾಟನೆಯನ್ನು ಅಂಕೋಲಾ ಅರ್ಬನ್ ಬ್ಯಾಂಕ್ ನ ಮಾಜಿ ನಿರ್ದೇಶಕಿ ಪ್ರಭಾ ಮೋಹನ್ ಹಬ್ಬು ಉದ್ಘಾಟಿಸಿ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಸಂಗಮ ಸೇವಾ ಸಂಸ್ಥೆಯ ಅಧ್ಯಕ್ಷರಾದ ರವೀಂದ್ರ ಶೆಟ್ಟಿ, ಬಿವಿಟಿ ಮಣಿಪಾಲದ ರಾಘವೇಂದ್ರ ಆಚಾರ್ಯ ಕೆದೂರು, ತರಬೇತುದಾರರಾದ ಅಶ್ವಿನಿ ಸಂತೋಷ್ ಸಾಮಂತ್ ಅವರು ಶುಭಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ವೈಶ್ಯ ವಿದ್ಯಾ ನಿಧಿ ಅಂಕೋಲಾ ಇದರ ನಿರ್ದೇಶಕರಾದ ಸದಾನಂದ ರಾಮಯ್ಯ ಶೆಟ್ಟಿ ವಹಿಸಿದ್ದರು.


## Paper Publication

IN THE COURT OF THE SENIOR CIVIL JUDGE AT HUMNABAD. P & Sc 01/2026

**petitioner:-**

**Ramanna**

**Respondent:**

To whom so ever it may concerned.

***Sub: Petition Under Sec. 372 of Indian Succession Act.***

To,

The respondent to whom so ever it may concerned, whereas, the petitioner has filed the petition for obtaining the succession certificate of the deceased Anil s/o Ramanna who has died leaving behind his legal heirs and successors petitioner. Therefore any legal heirs or interested persons to appear through person or through pleader and able to answer all material persons relating to the claim of petitioner on the day of 13th March 2026 at about 10-30 A-M. Before the Hon'ble Senior Civil Judge Court Humnabad, falling which heard and determined in your absence.

***Given under my hand and the seal of the on 17-02 2026.***

Sd-

By order of the Court.

Senior Civil Judge and JMFC Humnabad.



## :CITATON:

**IN THE COURT OF THE ADDL. CIVIL JUDGE AND JMFC., AT HUMNABAD. CRL. MISC.No.2712/2025**

**Petitioners:**

**1. Smt. Narsamma W/o late. Mallappa Basgonda,** Age : 42-year, Occu : Labour. R/o H.No. 1-11, Village Kandgoal, Tq. Chitguppa.

**2. Sri. Neelkant S/o late. Mallanna @ Mallappa,** Age : 37-year, Occu : Labour. R/o H.No. 1-11 Village Kandgoal, Tq. Chitguppa, Now at H.No. # 10th Cross Road, Tarfall Kalaburagi.

**Respondent:**

The Registrar of Birth and Death through The Tahasildar

**Chitguppa.**

**Sub:- Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Daughter in law of petitioner No. 1 and Sister in law of petitioner No. 2 Deceased by namely LATE. RENUKA W/O LATE SHIVRAJ, she was died on 26.01.2020 at Village Kandgoal. Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 09.03.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 28-01-2026.

**//By order of the court//**

**Chief Ministerial Officer,**

**Pri. Civil Judge & JMFC Court, Humnabad.**


# ಕನ್ನಡ, ನಾಡು, ನುಡಿ, ನೆಲ, ಜಲ, ಭಾಷೆಗಾಗಿ ಎಲ್ಲರೂ ಒಗ್ಗೂಡಬೇಕು: ಪಡುಕೋಟಿ



**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**
ಕನ್ನಡ, ನಾಡು, ನುಡಿ, ನೆಲ, ಜಲ, ಭಾಷೆಗಾಗಿ ಎಲ್ಲರೂ ಒಗ್ಗೂಡಬೇಕು. ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಕನ್ನಡಕ್ಕಾಗಿ ಹೋರಾಟ ಮಾಡಿದವರನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಪಟ್ಟಣದಲ್ಲಿ ನಡೆದ ನಮ್ಮ ಕನಾಟಕ ಸೇನೆ ತಾಲ್ಲೂಕು ಘಟಕದ ಪದಾಧಿಕಾರಿಗಳ ನೇಮಕ ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷ ಬಸವರಾಜ್ ಎಂ. ಪಡುಕೋಟಿ ಮಾತನಾಡುತ್ತಾ ನುಡಿದರು. ಇತ್ತೀಚಿನ ದಿನಗಳಲ್ಲಿ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ದುಶ್ಚಟಗಳಿಗೆ ಬಲಿಯಾಗುತ್ತಿದ್ದು, ದೇಶದ ಅಭಿವೃದ್ಧಿಗೆ ಮಾರಕವಾಗುತ್ತಿದೆ. ಆದ್ದರಿಂದ ಈ ಬಗ್ಗೆ ಚಿಂತನೆ ನಡೆಸಿ ಯುವಕರು ಅವುಗಳಿಂದ ದೂರವಿದ್ದು, ಸಂಘಟನೆ ಬಲಿಷ್ಠಗೊಳಿಸಿ, ಹೋರಾಟ ಮಾಡೋಣ ಎಂದು ಸಲಹೆ ನೀಡಿದರು. ವ್ಯಸನದ ಆರಂಭಿಕ ಹಂತದಲ್ಲಿ ಆನಂದ ನೀಡಿದರೂ ಅದರಿಂದ ಸಮಸ್ಯೆಗಳೇ ಹೆಚ್ಚು. ಮದ್ಯ ವ್ಯಸನದಿಂದಾಗಿ ವ್ಯಕ್ತಿ ಆರೋಗ್ಯ ಕಳೆದುಕೊಳ್ಳುವುದರೊಂದಿಗೆ ಸಮಾಜದಲ್ಲಿ ಗೌರವವನ್ನೂ ಕಳೆದುಕೊಳ್ಳುತ್ತಾನೆ. ಹಣದ ಅಭಾವವೂ ಎದುರಾಗುತ್ತದೆ. ಇದರಿಂದಾಗಿ ಒಂಟಿ ಜೀವನ ನಡೆಸ ಬೇಕಾದ ಅನಿವಾರ್ಯತೆ ಎದುರಾಗಬಹುದು ಎಂದರು. ಜಿಲ್ಲಾಧ್ಯಕ್ಷ ಗಣೇಶ ಪಾಟೀಲರವರು ಮಾತನಾಡಿ, ಭಾರತ ದೇಶವನ್ನು ಸ್ವಾತಂತ್ರ್ಯ

ಗೊಳ್ಳಿಸಲು ಬ್ರಿಟೀಷರ ವಿರುದ್ಧ ಹೋರಾಡಿದ ಕ್ರಾಂತಿವೀರ ಸಂಗೊಳ್ಳಿರಾಯಣ್ಣ, ಕಿತ್ತೂರ ರಾಣಿ ಚನ್ನಮ್ಮ ಇವರು ನಮ್ಮ ಕರ್ನಾಟಕ ಜನಹಿತ ವೇದಿಕೆಯ ಆದರ್ಶ ವ್ಯಕ್ತಿಗಳಾಗಿದ್ದಾರೆ. ಆಗ ಸ್ವಾತಂತ್ರ್ಯ

> ಕನ್ನಡ ಭಾಷೆಯ ಅಳಿವು–ಉಳಿವು ನಮ್ಮ ಕೈಯಲ್ಲಿದ್ದು, ಕನ್ನಡಕ್ಕಾಗಿ ಕೆಲಸ ಮಾಡುವ ಮನಸ್ಸು ಹೊಂದಿರಬೇಕು. ಸರ್ಕಾರ, ಜನಪ್ರತಿನಿಧಿಗಳು ಸಹ ಕನ್ನಡಕ್ಕಾಗಿ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಇತರ ಭಾಷೆಗಳನ್ನು ಪ್ರೀತಿಸಿ, ನಮ್ಮ ಭಾಷೆಯನ್ನು ಪೋಷಿಸಬೇಕಿದೆ ಎಂದರು.
> –ಅಭಿಷೇಕರೆಡ್ಡಿ
> ನಮ್ಮ ಕರ್ನಾಟಕ ಸೇನೆ ತಾಲ್ಲೂಕು ಅಧ್ಯಕ್ಷರು ಹುಮನಾಬಾದ

ಭಾರತಕ್ಕಾಗಿ ಹೋರಾಟ ನಡೆಸಿದ ನಾವು ಇಂದು ಕನ್ನಡ ನಾಡು–ನುಡಿ, ಜಲ ರಕ್ಷಣೆಗೆ ಒಗ್ಗಟಿನಿಂದ ಹೋರಾಟ ನಡೆಸಬೇಕಾಗಿದೆ ಎಂದು ತಿಳಿಸಿದರು. ಕನ್ನಡ ನಾಡು, ನುಡಿ, ಭಾಷೆಯ ಬಗ್ಗೆ ಪ್ರತಿಯೊಬ್ಬರೂ ಅಭಿಮಾನ ಹೊಂದಬೇಕು. ಮಾತೃಭಾಷೆ ಪ್ರೀತಿಸುವುದರ ಜೊತೆಗೆ ಅನ್ಯಭಾಷೆಯ ಬಗ್ಗೆ ಗೌರವ ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು. ಹಾಗೂ ತಂಬಾಕು ಸೇವನೆಯಿಂದ ಕ್ಯಾನ್ಸರ್, ಕ್ಷಯರೋಗ, ಎಚ್ಐವಿ. ಸೇರಿದಂತೆ ಮುಂತಾದ ಅಪಾಯಕಾರಿ ಕಾಯಿಲೆಗಳು ಬರುತ್ತವೆ. ತಂಬಾಕು ಮುಕ್ತ ದೇಶವನ್ನಾಗಿಸಲು ಪ್ರತಿಯೊಬ್ಬರು ಶ್ರಮಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲಾ ಅಧ್ಯಕ್ಷ ಸುಧೀಂದ್ರ ಇಜೇರಿ, ಬೆಂಗಳೂರಿನ ಕಟ್ಟಡ ಕಾರ್ಮಿಕ ಘಟಕ ರಾಜ್ಯ ಉಪಾಧ್ಯಕ್ಷ ಗುರು ದೊಡ್ಮನಿ, ಶಾಪುರ್ ತಾಲೂಕ ಅಧ್ಯಕ್ಷ

ಸಿದ್ದು ಪಟ್ಟೆದಾರ್, ಯುವ ಘಟಕ ಅಧ್ಯಕ್ಷ

ರಾಜು ಗುಂಡಗುರ್ತಿ ವಡಗೇರಿ, ಕಲಬುರಗಿ ತಾಲೂಕ ವಿದ್ಯಾರ್ಥಿ ಘಟಕ ಜಿಲ್ಲಾಧ್ಯಕ್ಷ ರಕ್ಷಿತಾ ದಾಮಾ ಉಪಸ್ಥಿತರಿದ್ದರು.

ಹುಮನಾಬಾದ ತಾಲ್ಲೂಕು ಘಟಕದ ಪದಾಧಿಕಾರಿಗಳ ನೇಮಕ:

ತಾಲ್ಲೂಕು ಅಧ್ಯಕ್ಷರಾಗಿ ಅಭಿಷೇಕರೆಡ್ಡಿ, ಗೌರವಾಧ್ಯಕ್ಷರಾಗಿ ಮಹೇಶ ಪ್ರಭಾ, ಪ್ರ.ಕಾರ್ಯದರ್ಶಿಯಾಗಿ ಅವಿನಾಶರೆಡ್ಡಿ, ಉಪಾಧ್ಯಕ್ಷರಾಗಿ ಮಚ್ಚೇಂದ್ರ ಹಿಲಾಲಪೂರ, ಕೃಷ್ಣಾ ಬಿರಾದಾರ, ರಿತೇಶ ಹಡಪದ, ಆಕಾಶ ಸ್ವಾಮಿ, ಸಂ.ಕಾರ್ಯದರ್ಶಿಯಾಗಿ ಸುನೀಲ್ ಹಂಟರ್, ಸತೀಶ ದೇವನೂರ, ಬಸಪ್ಪಾ ದೇವನೂರ, ಅಂಬರೀಶ್ ಪಂಚಾಳ, ಇವರುಗಳನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ಬಸವರಾಜ್ ಎಂ. ಪಡುಕೋಟಿ ರವರು ಆದೇಶ ಹೊರಡಿಸಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಶಿಕಾಂತ ದುರ್ಗೆ ಅವರಿಗೆ: ಶ್ರೀಗಳಿಂದ ಸನ್ಮಾನ

**ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ**
ನಗರದ ಶ್ರೀ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಟ್ಟಡದ ಉದ್ಘಾಟನಾ ಸಮಾರಂಭ ಹಾಗೂ ಮಹಾಶಿವರಾತ್ರಿಯ ಪ್ರಯುಕ್ತ ಸಾಮೂಹಿಕ ಇಷ್ಟಲಿಂಗ ಪೂಜೆಯ ಕಾರ್ಯಕ್ರಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ ಅವರಿಗೆ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಹುಲಸೂರಿನ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿ. ಗೋರ್ಟಾದ ಪೂಜ್ಯಶ್ರೀ ಮ.ನಿ.ಪ್ರ. ಪ್ರಭುದೇವ ಮಹಾಸ್ವಾಮಿಜಿಗಳು. ಖೇಳಗಿ ಪೂಜ್ಯ ಶ್ರೀ ಮ. ನಿ. ಪ್ರ. ಶಿವಲಿಂಗೇಶ್ವರ ಮಹಾಸ್ವಾಮಿಜಿಗಳು. ಸಾಯಗಾವದ ಪೂಜ್ಯಶ್ರೀ ಶಿವಾನಂದ ದೇವರು. ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ. ಶಾಸಕರಾದ ಶರಣು ಸಲಗರ. ಮಲ್ಲಿಕಾರ್ಜುನ ಗುಂಗೆ. ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೊರಕೆ. ಕಾರ್ಯದರ್ಶಿ ವಿವೇಕಾನಂದ ಹೂದಲೂರೆ. ಡಾ. ಜಿ. ಎಸ್. ಭುರಳೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.






ಬಸವಕಲ್ಯಾಣ :– ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ಭಾಲ್ಕಿಯ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ, ಲಿಂಗೈಕ್ಯ ಶತಾಯುಷಿ ಲೋಕನಾಯಕ ಡಾ. ಭೀಮಣ್ಣ ಖಂಡ್ರೆಯವರ ನುಡಿ ನಮನ ಕಾರ್ಯಕ್ರಮದಲ್ಲಿ ಸಚಿವರಾದ ಈಶ್ವರ ಖಂಡ್ರೆ ಜಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಮುಖಂಡರಾದ ಶಶಿಕಾಂತ್ ದುರ್ಗೆ, ಗಿರೀಶ ತಾಂಬೋಳೆ, ನಾಗೇಶ ತಾಂಬೋಳೆ, ಶಿವಕುಮಾರ ಉಮ್ಮರ್ಗೆ, ಮೈನೊದ್ದಿನ ಅತ್ತಾರ, ದಿನೇಶ ತ್ರಿಮುಕೆ, ಸುನಿಲ ನಿಣ್ಣೆ, ಜಯರಾಜ ತ್ರಿಮುಕೆ ಇತರರು ಪಾಲ್ಗೊಂಡಿದರು. (ಮಲ್ಲಮ್ಮ ನುಡಿ ಚಿತ್ರ).

# ಬಸವರಾಜ ಕೊರಕೆ ಅವರಿಗೆ ಶ್ರೀಗಳಿಂದ ಸನ್ಮಾನ

**ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ**
ನಗರದ ಶ್ರೀ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಟ್ಟಡದ ಉದ್ಘಾಟನಾ ಸಮಾರಂಭ ಹಾಗೂ ಮಹಾಶಿವರಾತ್ರಿಯ ಪ್ರಯುಕ್ತ ಸಾಮೂಹಿಕ ಇಷ್ಟಲಿಂಗ ಪೂಜೆಯ ಕಾರ್ಯಕ್ರಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೊರಕೆ ಅವರಿಗೆ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಜಿ. ಗೋರ್ಟಾದ ಲಿಂಗಾಯತ ಮಹಾಮಠದ ಪೂಜ್ಯಶ್ರೀ ಮ.ನಿ.ಪ್ರ. ಪ್ರಭುದೇವ ಮಹಾಸ್ವಾಮಿಜಿಗಳು. ಖೇಳಗಿ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠದ ಪೂಜ್ಯ ಶ್ರೀ ಮ. ನಿ. ಪ್ರ. ಶಿವಲಿಂಗೇಶ್ವರ ಮಹಾಸ್ವಾಮಿಜಿಗಳು. ಸಾಯಗಾವದ ಪೂಜ್ಯ ಶ್ರೀ ಶಿವಾನಂದ ದೇವರು. ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ. ಶಾಸಕರಾದ ಶರಣು ಸಲಗರ. ಮಲ್ಲಿಕಾರ್ಜುನ ಗುಂಗೆ. ಶ್ರೀ ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯ ಕಾರ್ಯದರ್ಶಿಗಳಾದ ವಿವೇಕಾನಂದ ಹೂದಲೂರೆ. ಡಾ. ಜಿ. ಎಸ್. ಭುರಳೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ತೆರಿಗೆ ವಸೂಲಿ ಸಮಸ್ಯೆ ಪರಿಹಾರ ಕುರಿತು ಒಂದು ದಿನದ ಕಾರ್ಯಗಾರ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಅಂಬರೀಶ್ ಪಾಟೀಲ್ ರವರ ಅಧ್ಯಕ್ಷತೆಯಲ್ಲಿ ತೆರಿಗೆ ವಸೂಲಿ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಹಾರದ ಕುರಿತು ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸದರಿ ಸಭೆಗೆ ಜಿಲ್ಲಾ ಪಂಚಾಯಿತಿಯ ಡಿಪಿಎಂ ಶ್ರೀ ಗುರು ಪಾಟೀಲ್ ರವರು ತೆರಿಗೆ ವಸೂಲಿ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಹಾರಗಳ ಕುರಿತು ವಿವರವಾಗಿ ತಿಳಿಸಿದರು.

ಗ್ರಾಮ ಪಂಚಾಯಿತಿಗಳಲ್ಲಿ ಬಾಕಿ ಇರುವ ಕರ ವಸೂಲಿ ತಪಾಸಣೆ ಗೈದು ಜನರಿಂದ ಕರ ಸಂಗ್ರಹಿಸುವುದು. ಸೇರಿದಂತೆ ಇತರೆ ವಿಷಯಗಳ ಕುರಿತು ಚರ್ಚಿಸಲಾಯಿತು.


ಆನಂತರ ಕರ ವಸೂಲಿಯಲ್ಲಿ ನಿಗದಿತ 1 ಲಕ್ಷ ಕರ ಸಂಗ್ರಹಿಸಿ ಗುರಿ ಸಾಧಿಸಿದ ಗ್ರಾಮ ಪಂಚಾಯಿತಿಗಳಾದ ಯಲ್ಹೇರಿ, ಚಪೇಟ್ಲಾ, ಕಂದಕೂರ, ಮಿನಾಸಪುರ ಬಿಲ್ ಕಲೆಕ್ಟರ್, ಡಿ ಇಓ ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ತಾ.ಪಂ ಇಓ ಅಂಬರೀಶ್ ಪಾಟೀಲ್ ಮಾತನಾಡಿ, ಬೇಸಿಗೆ ಕಾಲ ಆರಂಭವಾಗುತ್ತಿದೆ. ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ನೀರಿನ ಗುಣಮಟ್ಟ ಪರೀ–ಕ್ಷೆ ಮಾಡುವುದು. ಮನರೇಗಾ ಯೋಜನೆಯಡಿ ಅಪೂರ್ಣಗೊಂಡಿರುವ ಕಾಮಗಾರಿಗಳು ಶೀಘ್ರವೇ ಎಂಆರ್ ತೆಗೆದು ಪೂರ್ಣಗೊಳಿಸುವುದು. ನಿತ್ಯ ಕರವಸೂಲಿ ಮಾಡಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ತಾ.ಪಂ ಸಹಾಯಕ ನಿರ್ದೇಶಕ ರಾಮಚಂದ್ರ ಬಸೂದೆ, ಎಲ್ಲಾ ಗ್ರಾಮ ಪಂಚಾಯತಿ ಪಿಡಿಓಗಳು, ಕರ ವಸೂಲಿಗಾರರು, ಡಿಇಓಗಳು ಸೇರಿದಂತೆ ತಾಲೂಕು ಪಂಚಾಯಿತಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಪರಿಮಿಳ ಮಂಟಪದಲ್ಲಿ ಸಚಿತ್ರ ದಾಸವಾಣಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಯಾದಗಿರಿ ನಗರದ ಶ್ರೀಮದ್ ಉತ್ತರಾದಿಮಠ ಶ್ರೀ ರಾಘವೇಂದ್ರ ಸ್ವಾಮಿಗಳ ಪರಿಮಳಮಂಟಪದಲ್ಲಿ ವರ್ಧಂತಿ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಕಾರ್ಯಕ್ರಮದ ಅಂಗವಾಗಿ ಖ್ಯಾತ ಸಂಗೀತ ಗಾಯಕರದ ಮೈಸೂರು ರಾಮಚಂದ್ರ ಆಚಾರ್ಯ ಇವರಿಂದ ಸಚಿತ್ರ ದಾಸವಾಣಿ ಕಾರ್ಯಕ್ರಮ ಇದೆ ಫೆ.19ರಂದು ಗುರುವಾರ ಸಂಜೆ 6 ಗಂಟೆಗೆ ನಡೆಯಲಿದೆ. ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಅನುಗ್ರಹದಿಂದ ಕಲಿಯುಗದ ಕಾಮಧೇನು ಕಲ್ಪತರು ಆದ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ನಿಮಿತ್ತವಾಗಿ ಫೇ. 19ರ ಗುರುವಾರ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆಯಿಂದ ಆರಂಭವಾಗುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮೊದಲಿಗೆ ಅಷ್ಟೋತ್ತರ, ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ, ಆಗಮಿಸಿದ ಭಕ್ತರಿಂದ ಭಜನೆ, ರಥೋತ್ಸವ, ಗುರುರಾಯರಿಗೆ ಪುಷ್ಪಾರ್ಚನೆ ನಂತರ ಪ್ರವಚನ ಅದಾದ ಮೇಲೆ ಹಸ್ತೋದಕ ಹಾಗೂ ತೀರ್ಥ ಪ್ರಸಾದ ಜರುಗುವುದು.

ಪ್ರಯುಕ್ತ ಜಿಲ್ಲೆಯ ಎಲ್ಲಾ ವಿಪ್ರಬಾಂಧವರು ಭಾರತೀಯ ಪರಂಪರೆಯ ಉಡುಗೆಯನ್ನು ತೊಟ್ಟು, ನಡೆಯುವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಮಠದ ವ್ಯವಸ್ಥಾಪಕರಾದ ಶ್ರೀ ರಾಘವೇಂದ್ರ ಜೋಶಿ ಅವರು ಮನವಿ ಮಾಡಿದ್ದಾರೆ.

# ದುರ್ಗಾದೇವಿ ಜಾತ್ರಾ ಮಹೋತ್ಸವ: ಕಬ್ಬಡಿ ಪಂದ್ಯಾವಳಿ



• ಮಲ್ಮನ ನುಡಿ ವಾರ್ತೆ ಮಸ್ಕಿ

ತಾಲೂಕಿನ ಹಾಲಾಪೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಿನ್ನಾಪೂರು ಗ್ರಾಮದ ಗ್ರಾಮ ದೇವತೆ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕಬ್ಬಡಿ ಪಂದ್ಯಾವಳಿ ಏರ್ಪಡಿಸಲಾಗಿತ್ತು

ಈ ಒಂದು ಪಂದ್ಯಾವಳಿಗೆ ಮೊದಲ ಬಹುಮಾನ 15,000/–ಸಾವಿರ ರೂಪಾಯಿಗಳನ್ನು ವೆಂಕಟರೆಡ್ಡಿ ಹಾಲಾಪೂರು ಅವರು ನೀಡಿ ಪ್ರೋತ್ಸಾಹಿಸಿದರೆ, ಎರಡನೇ ಬಹುಮಾನ 10,000/–ಸಾವಿರ ರೂಪಾಯಿಗಳನ್ನು ಮಾರುತಿ ಜಿನ್ನಾಪೂರು ರವರು ನೀಡುವ ಮೂಲಕ ಬೆಂಬಲಿಸಿದರು ಹಾಗೂ ಮೂರನೇ ಬಹುಮಾನ 5,000/–ಸಾವಿರ ರೂಪಾಯಿಗಳನ್ನು ಕರಿಯಪ್ಪ ಹಾಲಾಪೂರು ರವರು ಕೊಡುವುದರ ಮೂಲಕ ಸಹಕರಿಸಿದರು. ಹಾಗೂ ಈ ಒಂದು ಪಂದ್ಯಾವಳಿಯಲ್ಲಿ ಮೊದಲ ಬಹುಮಾನವನ್ನು ಈಚನಾಳ ತಂಡ ಗೆದ್ದು ನಗುವಿನ ಕೇಕೆಯನ್ನು ಹಾಕಿತು, ಮತ್ತು ದ್ವಿತೀಯ ಬಹುಮಾನವನ್ನು ಜಿನ್ನಾಪೂರು ತಂಡ ಗೆಲುವಿನತ್ತ ಸಾಗಿತ್ತು, ಹಾಗೂ

ತೃತೀಯ ಬಹುಮಾನವನ್ನು ಗೊಲದಿನ್ನಿ ತಂಡ ಗೆಲುವು ಸಾಧಿಸಿ ಸೈ ಎನಿಸಿಕೊಂಡಿತು.

# ಶಿವಾಜಿ ಜಯಂತಿ ಪೂರ್ವಭಾವಿ ಸಭೆ




• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದ ತಹಶೀಲ್ದಾರ ಕಾರ್ಯಾಲಯದ ಸಭಾಂಗಣದಲ್ಲಿ ಶಿವಾಜಿ ಮಹಾರಾಜರ ಜಯಂತಿ ಆಚರಣೆಯ ಕುರಿತು ಪೂರ್ವಭಾವಿ ಸಭೆಯು ತಹಶೀಲ್ದಾರ್ ಹಾಗೂ ತಾಲೂಕಾ ಕಾರ್ಯನಿರ್ವಾಹಕ ದಂಡಾಧಿಕಾರಿಗಳಾದ ಅಮಿತಕುಮಾರ ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಜರುಗಿತು.

ಸಭೆಯಲ್ಲಿ ಶಿವಾಜಿ ಜಯಂತಿಯನ್ನು ಅರ್ಥಪೂರ್ಣವಾಗಿ ಮತ್ತು ವಿಜೃಂಭಣೆಯಿಂದ ಆಚರಿಸುವ ಕುರಿತು ಸಮಾಲೋಚನೆ ನಡೆಸಲಾಯಿತು. ಜಯಂತಿಯ ಅಂಗವಾಗಿ 10:30 ಗಂಟೆಗೆ ಶಿವಾಜಿ ಮಹಾರಾಜರ ಭಾವಚಿತ್ರ ಪೂಜೆ ನಂತರ 11 ಗಂಟೆಗೆ ವೇದಿಕೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಿಂದ ಉಪನ್ಯಾಸ ಹಮ್ಮಿಕೊಳ್ಳಲಾಯಿತು. ಅಗತ್ಯ ಸಿದ್ಧತೆಗಳ ಬಗ್ಗೆ ಅಧಿಕಾರಿಗಳು ಹಾಗೂ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಚರ್ಚಿಸಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ತಹಶೀಲ್ದಾರರು ಈ ಸಂದರ್ಭದಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಮಲನಗರ ಗ್ರಾಮ ಪಂಚಾಯತ ಅಧ್ಯಕ್ಷೆ ಸುಶೀಲಾ ಮಹೇಶ ಸಜ್ಜನಶೆಟ್ಟಿ, ಜಯಂತಿ ಸಮಿತಿಯ ಅಧ್ಯಕ್ಷ ವಿನೋದ ಚಾಂಗುಣೆ, ರಂಗಾರಾವ ಜಾಧವ, ವಿಠ್ಠಲರಾವ ಪಾಟೀಲ, ಎಸ್. ಎನ್ ಶಿವಣಕರ, ವೈಜೀನಾಥ ವಡ್ಡೆ, ಶೇಷಾರಾವ ಪಾಟೀಲ, ಮಹೇಶ ಜಾಧವ, ಮಹಾದೇವ ಚಾಂಗುಣೆ, ಮನೋಹರ ಜಾಧವ, ಸಚಿನ ಚಾಂಗುಣೆ, ಮಹೇಶ ಜಾಧವ, ದತ್ತಾ ಚಾಂಗುಣೆ, ಶಿವಾನಂದ ಧೂಪನಾಳೆ, ಸೇರಿದಂತೆ ಇನ್ನಿತರ ಇದ್ದರು. ಸಭೆಯಲ್ಲಿ ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೈರು ಹಾಜರಿದ್ದರು.

# ಪಡಿತರ ಆಹಾರ ಬಿಡುಗಡೆ: ಸೋಮಶೇಖರ ಬಿರಾದಾರ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

2026ರ ಫೆಬ್ರವರಿ ಮಾಹೆಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಯಾದಗಿರಿ ಜಿಲ್ಲೆಯ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 35 ಕೆ.ಜಿ ಅಕ್ಕಿ ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 5 ಕೆ.ಜಿ, ಉಚಿತವಾಗಿ ವಿತರಿಸಿದೆ ಎಂದು ಯಾದಗಿರಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕರು ಸೋಮಶೇಖರ ಬಿರಾದಾರ ಅವರು ತಿಳಿಸಿದ್ದಾರೆ. ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಏಕ ಸದಸ್ಯ, ದ್ವಿ ಸದಸ್ಯ ಮತ್ತು ತ್ರಿ ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಅಂತ್ಯೋದಯ (ಎಎವೈ) ಪಡಿತರ ಚೀಟಿಯ ಫಲಾನುಭವಿಗೆ ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 5 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು. ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ, ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿ–ದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಯಾವುದೇ ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ಶುಲ್ಕ ಸಹಾಯವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಛೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಛೇರಿಗೆ ದೂರನ್ನು ಸಲ್ಲಿಸಬಹುದಾಗಿದೆ. ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿ–ದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು, ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದು ಎಂದು ಅವರು ತಿಳಿಸಿದ್ದಾರೆ.

# ಕ್ರೀಡೆಯಿಂದ ದೈಹಿಕ ಮಾನಸಿಕವಾಗಿ ಸದೃಢರಾಗಬಹುದು: ಈಶಪ್ಪಗೌಡ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯುವಕರು ಹಿರಿಯರು ಕ್ರೀಡೆಯಲ್ಲಿ ಭಾಗವಹಿಸುವುದರಿಂದ ದೈಹಿಕ ಮಾನಸಿಕವಾಗಿ ಸದೃಢರಾಗಬಹುದು ಎಂದು ಬಿಜೆಪಿ ಯುವ ಮುಖಂಡ ಈಶಪ್ಪಗೌಡ ಮಾಲಿ ಪಾಟೀಲ್ ಅಗ್ನಿಹಾಳ ಹೇಳಿದರು. ತಾಲೂಕಿನ ಗುಂಡ್ಲುರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಗುಂಡ್ಲುರ್ ಪ್ರೀಮಿಯರ್ ಲೀಗ್ ಸೀಸನ್ 5 ಕ್ರಿಕೆಟ್ ಫೈನಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪ್ರತಿಯೊಬ್ಬರು ಕ್ರೀಡಾಸಕ್ತಿ ಬೆಳೆಸಿಕೊಳ್ಳಬೇಕು ದೇಶದ ಪರವಾಗಿ ಅತಿ ಹೆಚ್ಚು ಗ್ರಾಮೀಣ ಕ್ರೀಡಾಪಟುಗಳೇ ಭಾಗವಹಿಸಿ ಕೀರ್ತಿ ತಂದಿದ್ದಾರೆ ಅವರಂತೆ ನೀವು ಕೂಡ ಸಾಧನೆ ಮಾಡಬೇಕು ಕ್ರೀಡೆಯಲ್ಲಿನ ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಹೇಳಿದರು. ಕ್ರೀಡೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಆರ್‌ಸಿಜಿ ಗುಂಡ್ಲುರು ಇಂಡಿಯನ್ಸ್ ತಂಡಕ್ಕೆ ನಗದು ಬಹುಮಾನ ಪಾರಿತೋಷಕ ವಿತರಿಸಿದರು. ಈ ಸಂದರ್ಭದಲ್ಲಿ ನಾಗರಜ್ ಗೌಡ ಶಿವಪೂರ, ಮಹಮ್ಮದ್ ಹನಿಫ, ಅಜಿತ್, ಖತಾಲ್ ಹುಸೇನ್, ಸೈಯದ್ ಪಟೇಲ್, ಇಸ್ಮಾಯಿಲ್, ನಬಿಸಾಬ, ಕ್ರಿ–ಕೆಟ್ ಪಂದ್ಯಾವಳಿಯ ವ್ಯವಸ್ಥಾಪಕರಾದ ಇಬ್ರಾಹಿಂ ಸಾಹುಕಾರ ಸೆರಿದಂತೆ ಗ್ರಾಮಸ್ಥರು ಕ್ರೀಡಾಪಟುಗಳು ಇನ್ನಿತರರು ಉಪಸ್ಥಿತರಿದ್ದರು.

# ವಿವಿಧೆಡೆ ಮಹಾಶಿವರಾತ್ರಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಮುದಗಲ್



ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ಶ್ರೀ ನೀಲಕಂಠೇಶ್ವರ ದೇವಸ್ಥಾನ, ರಾಮಲಿಂಗೇಶ್ವರ ಕಾಲೋನಿ ರಾಮಲಿಂಗೇಶ್ವರ ದೇವಾಲಯ,

ಹಳೇಪೇಟೆ ಶ್ರೀರಾಮಲಿಂಗೇಶ್ವರ, ವೆಂಕಟರಾಯನ ಪೇಟೆ ಬಸವೇಶ್ವರ ದೇವಸ್ಥಾನ, ಶಂಕರಲಿಂಗ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ ವಿಜೃಂಭಣೆಯಿಂದ ಆಚರಣೆ ಮಾಡಲಾಯಿತು.

ಬೆಳಿಗ್ಗೆ ಶಿವನ ಮೂರ್ತಿಗೆ ವಿಶೇಷ ಪೂಜೆಗಳು ಜರುಗಿದವು. ಬಿಲ್ವಾರ್ಚನೆ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ್, ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ಜರುಗಿದವು. ಸಂಜೆಯಾಗುತ್ತಲೇ ಶಿವನ ಭಕ್ತಾದಿಗಳು ಸರದಿ ರೂಪದಲ್ಲಿ ಸಾಲು ಸಾಲಾಗಿ ನಿಂತು ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಬಿಲ್ವ ಪತ್ರೆ ಸಮರ್ಪಣೆ ಮಾಡಿ, ಉತ್ತರಾಣಿ ಕಡ್ಡಿಯಿಂದ ದೀಪಬೆಳಗಿ ಭಕ್ತಿ ಪರಾಕಾಷ್ಟೆ ಮೆರೆದರು. ಶಿವನ ಆರಾಧನೆಯ ಉಪವಾಸ ವ್ರತ ಕೈಗೊಂಡ ಭಕ್ತರು. ಶಿವನ ಪ್ರಸಾದ ಮಾಡಿದ ಹಣ್ಣು ಹಾಲು ಮಿಶ್ರಣ ಮಾಡಿದ ಪ್ರಸಾದ ಸೇವಿಸಿದರು. ಮಹಾಶಿವರಾತ್ರಿ ನಿಮಿತ್ತ ಒಂದು ದಿನ ಮುಂಚಿತವಾಗಿ ಶಿವನ ಆರಾಧನೆ ಭಜನೆ ಕಾರ್ಯಕ್ರಮ ಜರಗಿತು. ದೇವಸ್ಥಾನದಲ್ಲಿ ಸ್ಥಳೀಯ ಕಲಾವಿದ ರಹಿಮಾನ್ಸಾಬ್ ನದಾಫ್ ಅವರಿಂದ ದಾಸ್ ಸಾಹಿತ್ಯ, ವಚನ ಸಾಹಿತ್ಯ, ತತ್ವ ಪದ, ಭರತ ನಾಟ್ಯ, ಶಿವಲಿಂಗ ಭಕ್ತಿ ಹಾಡುಗಳು ಸೇರದಂತೆ ವಿವಿಧ ಧಾರ್ಮಿಕತೆಗೆ ಸಲ್ಲುವ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಮಿತಿ ಅಧ್ಯಕ್ಷ ಹಾಗೂ ಸರ್ವ ಪದಾಧಿಕಾರಿಗಳು ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.

# ಹಳೆಯ ಪಿಂಚಣಿ ಯೋಜನೆ ಜಾರಿಗೆ ಕ್ರಮ: ಭರತ್ ರೆಡ್ಡಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯ ಸರ್ಕಾರಿ ನೌಕರರ ಬಹುನಿರೀಕ್ಷಿತ ಬೇಡಿಕೆಯಾಗಿರುವ ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಮರಳಿ ಜಾರಿಗೆ ತರಲು ರಾಜ್ಯ ಸರ್ಕಾರ ಕ್ರಮ ವಹಿಸಲಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಮಂಗಳವಾರ ಜಿಲ್ಲಾಡಳಿತ, ಜಿಪಂ, ಯುವ ಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಸರ್ಕಾರಿ ನೌಕರರಿಗಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಳೆಯ ಪಿಂಚಣಿ ಯೋಜನೆಯ ಜಾರಿಗೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಸಮಿತಿಯನ್ನು ರಚಿಸಿ, ಐದು ರಾಜ್ಯಗಳಲ್ಲಿರುವ ವ್ಯವಸ್ಥೆಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಿದ್ದಾರೆ, ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ, ಈ ವರ್ಷದ ಬಜೆಟ್ ಅಧಿವೇಶನದ ವೇಳೆ ನಾನು, ಮಾಜಿ ಸಚಿವ ಬಿ.ನಾಗೇಂದ್ರ ಹಾಗೂ ಶಾಸಕ ಜೆ.ಎನ್. ಗಣೇಶ್ ಒಟ್ಟಾಗಿ ಸರ್ಕಾರದ ಗಮನ ಸೆಳೆಯುತ್ತೇವೆ ಎಂದರು.

ಜಿಲ್ಲೆಯಲ್ಲಿ ಸುಸಜ್ಜಿತವಾದ ಸರ್ಕಾರಿ ನೌಕರರ ಭವನ ನಿರ್ಮಾಣಕ್ಕೆ ಕ್ರಮ ವಹಿಸುತ್ತೇನೆ, ಇದಲ್ಲದೇ ಸರ್ಕಾರಿ ನೌಕರರ ಗೃಹ ನಿರ್ಮಾಣಕ್ಕಾಗಿ ಖರೀದಿಯಾಗಿರುವ ಜಮೀನಿಗೆ ಸಂಬಂಧಿಸಿದ ಅನುಮೋದನೆ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

# ಭಕ್ತ ಸಾಗರದ ನಡುವೆ ಸಂಪನ್ನಗೊಂಡ ವೀರಭದ್ರೇಶ್ವರ ಪಂಚಕಳಸ ಮಹಾರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ತಾಲೂಕಿನ ಮಂಡಲಗಿರಿ ಗ್ರಾಮದ ಶ್ರೀವೀರಭದ್ರೇಶ್ವರ ಸ್ವಾಮಿಯ ಪಂಚ ಕಳಸ ಮಹಾ ರಥೋತ್ಸವ ಭಕ್ತ ಸಾಗರದ ನಡುವೆ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಜಾತ್ರಾ ಮಹೋತ್ಸವದ ಪ್ರಯುಕ್ತ ಫೆಬ್ರವರಿ 08 ರಿಂದ ಗ್ರಾಮದಲ್ಲಿ ಲಘು ರಥೋತ್ಸವದ ಗಾಲಿ ಗಳನ್ನು ಹೊರತರುವುದರೊಂದಿಗೆ ಪ್ರಾರಂಭವಾದ ಧಾರ್ಮಿಕ ಚಟುವಟಿಕೆಗಳು ಮಂಗಳವಾರ ಪಂಚಕಳಸ ಮಹಾ ರಥೋತ್ಸವ ಜರಗಿತು.

ರಥೋತ್ಸವದ ದಿನ ಪ್ರಾತಃಕಾಲದಿಂದ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿ ಧಿ, ವಿಧಾನಗಳನ್ನು ನಡೆದವು. ಬೆಳಿಗ್ಗೆ ಎಂಟು ಗಂಟೆಯ ವೇಳೆಗೆ ಗ್ರಾಮದ ವಿಶ್ವಕರ್ಮ ಸಮಾಜದವರ ಮನೆಯಿಂದ ಕಳಸ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀವೀರಭದ್ರೇಶ್ವರ ದೇವಸ್ಥಾನಕ್ಕೆ ತರಲಾಯಿತು.

ಈ ವೇಳೆಯಲ್ಲಿ ಗ್ರಾಮದ ಮುತ್ತೈದೆಯರು ಕಳಸಕ್ಕೆ ಆರತಿ ಮಾಡಿ ಹೂವಿನ ಹಾರ ಹಾಕಿ ಪೂಜೆ ಮಾಡುವುದರೊಂದಿಗೆ ಸ್ವಾಗತಿಸಿಕೊಂಡರು.

ಸಂಜೆ ವೇಳೆಗೆ ಹತ್ತಿರದ ಗೊರ್ಲೆ ಕೊಪ್ಪ ಗ್ರಾಮ ದಿಂದ ನಂದಿಕೋಲು ಸೇವೆ ಹಾಗೂ ಪಕ್ಕದ ಬಟಪನಹಳ್ಳಿ ಗ್ರಾಮದಿಂದ ತೇರಿನ ಹಗ್ಗದ ಸೇವೆ ಆಗಮಿಸಿದ ನಂತರ ನಂದಿಧ್ವಜ ಲೀಲಾವು ನಡೆಸಿ ಪಂಚಕಳಸ ಮಹಾ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಕುಕನೂರು ಪಟ್ಟಣದ ಮುಂಡರಗಿ ಶ್ರೀ ಅನ್ನದಾನೀಶ್ವರ ಶಾಖಾ ಮಠದ ಪೂಜ್ಯರಾದ ಮಹಾದೇವ ಮಹಾಸ್ವಾಮಿಗಳು ಪಂಚ ಕಳಸ ಮಹಾರಥೋತ್ಸವಕ್ಕೆ ಚಾಲನೆ ನೀಡಿದರು.

ಮಂಡಲಗಿರಿ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಹಾಗೂ ನೆರೆ ಜಿಲ್ಲೆಗಳಿಂದ ಸಹಸ್ರಾರು ಭಕ್ತರು ಮಹಾ ರಥೋತ್ಸವ ಸಂದರ್ಭದಲ್ಲಿ ಪಾಲ್ಗೊಂಡು ಶ್ರೀವೀರಭದ್ರೇಶ್ವರನಿಗೆ ತಮ್ಮ ಹರಕೆ, ಇಷ್ಟಾರ್ಥಗಳನ್ನು ನೆರವೇರಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು.

ಮಹಾರಥೋತ್ಸವದ ದಿನ ಗ್ರಾಮದ ಚಿಗುರು ಚೇತನ ಗೆಳೆಯರ ಬಳಗದಿಂದ ವಿಶೇಷ ಅನ್ನ ಸಂತರ್ಪಣೆಯ ಮಹಾ ಪ್ರಸಾದದ ಆಯೋಜನೆ ಮಾಡಲಾಯಿತು. ರಾತ್ರಿವೇಳೆ ಗ್ರಾಮದಲ್ಲಿ ಉಚಿತ ನಾಟಕ ಪ್ರದರ್ಶನ ಹಾಗೂ ಶನಿವಾರ ಕಡುಬಿನ ಕಾಳಗ ಮತ್ತು ಸುಡುವ ಕಾರ್ಯಕ್ರಮ ನೆರವೇರಿಸುವುದಾಗಿ ಶ್ರೀವೀರಭದ್ರೇಶ್ವರ ಜಾತ್ರಾ ಸೇವಾ ಸಮಿತಿಯ ಸದಸ್ಯರು ತಿಳಿಸಿದ್ದಾರೆ.

ಪ್ರಮುಖರಾದ ನವೀನ ಕುಮಾರ ಗುಳಗಣ್ಣನವರ್, ಈರಪ್ಪ ಬಿಸನಹಳ್ಳಿ, ಕಳಕಪ್ಪ ಕಂಬಳಿ, ಹೆಚ್ ಡಿ ಪಾಟೀಲ್, ಉದಯ ರಾಯರೆಡ್ಡಿ, ಬಸವನಗೌಡ ಪಾಟೀಲ ಸಿಂದಗಿ, ಹಾಗೂ ಇನ್ನಿತರರು ವೇದಿಕೆಯಲ್ಲಿದ್ದರು.



### ಅಂಗನವಾಡಿ ಕೇಂದ್ರಗಳಲ್ಲಿ ಆರೋಗ್ಯದ ರಕ್ತಹೀನತೆ ಕುರಿತು ಕಾರ್ಯಾಗಾರ

# ದೇಹದ ಕಬ್ಬಿಣಾಂಶದ ಕೊರತೆಯೇ ರಕ್ತಹೀನತೆಗೆ ಕಾರಣ

- ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಎಲ್ಲಾ ವಯಸ್ಸಿನವರು ತಮ್ಮ ದಿನನಿತ್ಯದ ಆಹಾರ ಸೇವನೆಯಲ್ಲಿ ದೇಹದಲ್ಲಿ ಕಬ್ಬಿಣಾಂಶದ ಕೊರತೆಯೇ ರಕ್ತಹೀನತೆಗೆ ಕಾರಣವಾಗುತ್ತದೆ ಎಂದು ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಹೇಳಿದರು ನಗರದ ಬಡಿಬೀಸ್ ಕಾಲೋನಿಯಲ್ಲಿ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಾಲಯರಾಯಚೂರುಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾ ಲಯ ಸಿಂಧನೂರು ಅವರು ಸಂಯುಕ್ತ ಆಶ್ರಯದಲ್ಲಿ ಅಂಗನವಾಡಿ ಕೇಂದ್ರ ಬಿಡಿಬೇಸ್ ಕಾಲೋನಿಯಲ್ಲಿ ಒಂದು ದಿನದ ಕಾರ್ಯಾಗಾರಸಭೆನಡೆಸಲಾಯಿತು ಈ ಕಾರ್ಯಾಗಾರ ಸಭೆ ಕುರಿತು ಮಾತನಾಡಿದರು.

ತಾಯಿ ಆರೋಗ್ಯವಂತ ಮಗು ಕುರಿತು ತಾಯಂದಿರ ಸಭೆಯಲ್ಲಿ ಎಲ್ಲಾ ವಯಸ್ಸಿನವರು ತಮ್ಮ ದಿನನಿತ್ಯದ ಆಹಾರ ಸೇವನೆಯಲ್ಲಿ ಕಬ್ಬಿಣಾಂಶ ಪೋಲಿಕ್ ಆಮ್ಲ ಮಾತ್ರೆ,ಃ12 ಇುಣ, ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ತಪ್ಪದೇ ತಿಳಿಸುವುದು ಗರ್ಭಿಣಿಯರು ಎರಡನೆಯ ತ್ರೈಮಾಸಿಕದಲ್ಲಿ ಜಂತುಹುಳುನಿವಾರಕಮಾತ್ರಗಳನ್ನು, ಸೇಂಗಾ ಎಳ್ಳು ಬೆಲ್ಲ ಹಸಿರು ತರಕಾರಿ ಖರ್ಜುರಾ, ಒಣ ದ್ರಾಕ್ಷಿ ಸೇವನೆ ಮಾಡುವುದು ತೊಂದರೆಗಳನ್ನು ತಡೆಗಟ್ಟಲು ಸಹಾಯ ಮಾಡುತ್ತದೆ ಕಬ್ಬಿಣಾಂಶದ ಮಾತ್ರೆಗಳ ಸೇವನೆ ಎಲ್ಲಾ ಗರ್ಭಿಣಿಯರ ಐದು ತಿಂಗಳ ಅವಧಿಯಿಂದ ಒಂದು (ಐರನ್ ಪೋಲೀಕ್ ಆಮ್ಲ) ಮಾತ್ರೆಯನ್ನ ಪ್ರತಿದಿನ ಒಂದರಂತೆ ತಪ್ಪದೆ ಸೇವಿಸಬೇಕು ಅತಿ ಹೆಚ್ಚು ತರಕಾರಿ ಸೇವನೆ ಮಾಡಬೇಕು.



ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಥವಾ ಆಸ್ಪತ್ರೆಗೆ ಭೇಟಿ ನೀಡಿ ಹಿಮೋಗ್ಲೋಬಿನ್ ಪರೀಕ್ಷೆ ಮಾಡಿಕೊಳತಕ್ಕದ್ದು, ರಕ್ತ ಹೀನತೆಗೆ ಕಾರಣಗಳು ದಿನನಿತ್ಯ ಆಹಾರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಕ್ತ ಉತ್ಪತ್ತಿಗೆ ಬೇಕಾದ ಕಬ್ಬಿಣ ಅಂಶ ಪೋಲೀಕ್ ಆಸಿಡ್,ವಿಟಮಿನ್ ಬಿ12 ಮುಂತಾದ ಪೋಷಕಾಂಶವಿರುವ ಆಹಾರ ಪದಾರ್ಥಗಳನ್ನು ಸೇವಿಸದೆ ಇರುವುದು ಜಂತುಹುಳು ಕೊಕ್ಕೆ ಹುಳು ಮುಂತಾದ ಸೋಂಕಿಗೆ ತುತ್ತಾಗುವುದು ಬಯಲಿನಲ್ಲಿ ಮಲವಿಸರ್ಜನೆ ಮಾಡುವುದು ಶೌಚಾಲಯ ಬಳಸದೆ ಇರುವುದು ಸಾಬೂನು ಮತ್ತು ನೀರಿನಿಂದ ಕೈ ಕಾಲುಗಳನ್ನು ತೊಳೆಯದೆ ಇರುವುದು ಪಾದರಕ್ಷೆಗಳನ್ನು ಬಳಸದೆ ಇರುವುದು ಹೊರಗಡೆ ಸುತ್ತಾಡುವುದು ಮಹಿಳೆಯರಲ್ಲಿ ಮುಟ್ಟಿನ ಬೇಳೆ ಅತಿಯಾದ ರಕ್ತಸ್ರಾವಾಗುವಂತದ್ದು ಗರ್ಭಿಣಿಯರಲ್ಲಿ ರಕ್ತ ಹೀನತೆಯ ಪರಿಣಾಮ ಕಡಿಮೆ ತೂಕ ಮಗುವಿನ ಜನನ ಮಗು ಸತ್ತು ಹುಟ್ಟುವುದು ಹೆರಿಗೆ ಸಮಯದಲ್ಲಿ ಮರಣ ಹೆರಿಗೆಯ ಮುಂಚೆ ಮತ್ತು ಹೆರಿಗೆಯ ಸಮಯದಲ್ಲಿ ಅತಿಯಾದ ರಕ್ತಸ್ರಾವ ಅವಧಿಗೆ ಮೊದಲೇ ಹೆರಿಗೆಯಾಗುವುದು ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಗರ್ಭಿಣಿಯರ ರಕ್ತ ಹೀನತೆ ವರ್ಗೀಕರಣ 11ಗ್ರಾಂ, ಇರಬೇಕು, 7 ಕ್ಕಿಂತ ಕಡಿಮೆ ಇದ್ದರೆ ಹೆಚ್ಚಿನ ಚಿಕಿತ್ಸೆ ಪಡೆಯಬೇಕು.

ನಂತರ ಬಾಲ್ಯ ವಿವಾಹದ ಕುರಿತು ಹಾಗೂ ಸ್ವಚ್ಛತೆಯ, ಪೌಷ್ಟಿಕ ಆಹಾರದ ಸೇವನೆ ಬಹಳ ಮುಖ್ಯ ಬೇಸಿಗೆ ಕಾಲದಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ತೆಗೆದು ಕೊಳ್ಳಬೇಕು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶಮಿನ ಕಊಅಔ,ಶೈನಜ ಆಶಾಕಾರ್ಯಕರ್ತೆ, ದಿಲಶಾದ ಅಂಗನವಾಡಿ ಕಾರ್ಯಕರ್ತೆ, ಸಾವಿತ್ರಿ ಅಂಗನವಾಡಿ ಸಹಾಯಕಿ, ಗರ್ಭಿಣಿತಾಯಂದಿರುಭಾಗವಹಿಸಿದ್ದರು.

### ಮಹಾ ಶಿವಶರಣೆ ಶ್ರೀ ಭೀಮಾಂಬಿಕಾದೇವಿ ಮಠದಲ್ಲಿ 383 ನೇ ಶಿವಾನುಭವ ಗೋಷ್ಠಿ

# ಶಿವರಾತ್ರಿ ಹಬ್ಬದಲ್ಲಿ ಭಕ್ತಿಯಿಂದ ಶಿವನ ಸ್ಮರಣೆ: ನೀಲಕಂತಪ್ಪ ಮುಳಗುಂದ

- ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ತಾಲೂಕಿನ ಸುಕ್ಷೇತ್ರ ದಮ್ಮೂರ ಗ್ರಾಮದ ಶ್ರೀ ಭೀಮಾಂಬಿಕಾ ದೇವಿ ಮಠದಲ್ಲಿ ಚತುರ್ದಶಿ ಅಂಗವಾಗಿ ಫೆ.16 ರಂದು ಜರುಗಿರುವ 383 ನೇ ಶಿವಾನುಭವಗೋಷ್ಠಿಯಲ್ಲಿ ಮಠದ ಒಡೆಯರಾದ ಹನುಮಂತಪ್ಪಜ್ಜ ಧರ್ಮರ ಹಾಗು ಶರಣಯ್ಯ ಹಿರೇಮಠ ಸಾನಿದ್ಯವಹಿಸಿದ್ದರು.



ಶಿವರಾತ್ರಿಯ ಮಹತ್ವ ವಿಷಯದ ಚಿಂತನ ಮಂತನ ಗೋಷ್ಠಿಯಲ್ಲಿ ಭಟಪನಹಳ್ಳಿಯ ನೀಲಕಂತಪ್ಪ ಮುಳಗುಂದ ಅವರು ಮತನಾಡಿ. 35 ವರ್ಷದಿಂದ ಇಲ್ಲಿಯವರೆಗೆ 383 ಶಿವಾನುಭವ ಗೋಷ್ಠಿಗಳು ಸಾಗಿಬಂದಿರುವದು ಉತ್ತಮ ಕಾರ್ಯವಾಗಿದೆ ಎಂದು ಮಾತನಾಡಿದ ಅವರು ಶಿವರಾತ್ರಿಯ ದಿನ ಶಿವನನ್ನು ಸ್ಮರಣೆ ಮಾಡುವದರಿಂದ ಬರುವ ಕಷ್ಟಗಳು ದೂರವಾಗಲು ಸಾದ್ಯ ಎಂದರು.

ಲಿಂಗನಬಂಡಿಯ ಮಲ್ಲಿಕಾರ್ಜುನ ಶಾಸ್ತ್ರಿ ನಿಟ್ಟಾಲಿ ಅವರು ಮಾತನಾಡಿ ಶಿಕ್ಷಣದಿಂದ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವದಕ್ಕೆ ಸಾದ್ಯ, ಈ ನಾಡಿನಲ್ಲಿ ಶರಣರು,ದಾರ್ಶನಿಕರು ಸಂತರು ಮಹಿಮಾಪುರುಷರು ಬಂದು ಹೋಗಿದ್ದಾರೆ ಅವರ ನುಡಿಗಳನ್ನು ಆಲಿಸದಾಗ ಪರಿವರ್ತನೆ ಆಗಲು ಸಾದ್ಯ ಎಂದರು. ಪ್ರಾಸ್ತಾವಿಕವಾಗಿ ಕವಿ ಪ್ರಕಾಶ ರಾವಣಕಿ ಅವರು ಮಾತನಾಡಿ ಶಿವಾನುಭವ ಕಾರ್ಯಕ್ರಮದಲ್ಲಿ ಭಾಗವಹಿಸಿ ಗಣ್ಯರ ನುಡಿಗಳನ್ನು ಕೆಳಿದಾಗ ನಮ್ಮ ಜೀವನದಲ್ಲಿ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳುವದಕ್ಕೆ ಸಾದ್ಯ ಎಂದರು.

ಶ್ರೀ ಭೀಮಾಂಬಿಕಾ ದೇವಿ ಶಿವಾನುಭವ ಸೇವಾ ಸಮಿತಿ ಅಧ್ಯಕ್ಷ ಶರಣಬಸಪ್ಪ, ದಾನಕೈ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ಶಿವರಾತ್ರಿಯಲ್ಲಿ ಓಂ ನಮಃ ಶಿವಾಯ ಮಂತ್ರವನ್ನು ಒಂದನೂರ ಎಂಟು ಭಾರಿ ಭಕ್ತಿಯಿಂದ ಜಪಮಾಡಬೇಕು ,ಶಿವ ಶಿವ ಎಂದರೆ ಭಯವಿಲ್ಲ , ಶಿವ ನಾಮಕೆ ಸಾಟಿ ಬೇರೆ ಇಲ್ಲ ಎನ್ನುವಂತೆ ಶಿವನಿಗೆ ಬಿಲ್ವ ಪತ್ರೆ ,ಬಿಳಿ ಹೂ ಗಳಿಂದ ಪೂಜಾ ವಿಧಾನಗಳಿಂದ ಪುಜಿಸಬೇಕು ಇದ-ರಿಂದ ಸುಖ ಸಂಪತ್ತು ಪಡೆಯಲು ಸಾದ್ಯ ಎಂದರು.

ಈ ವೇಳೆ ಶ್ರೀಮತಿ ಪ್ರೇಮಲತಾ ಮುಳಗುಂದ , ಚಂದಪ್ಪ ಹಳ್ಳಿಕೇರಿ, ಬಸವರಾಜ ಮೆಲಸಕ್ರಿ , ವೀರಪ್ಪ ರಾವಣಕಿ,ಡಿ.ಮೌನೇಶ ಬಡಿಗೇರ, ಬಸವರಾಜಮರಗಪ್ಪನವರ,ಮಂಜುನಾಥ ಭೂನಕೊಪ್ಪ, ವೀರನಗೌಡ ನಿಡಗುಂದಿ,ಕುಮಾರ ಅಂಗಡಿ ಹಾಗು ಸಂಗೀತ ಬಳಗದ ಕಳಕಪ್ಪ ಹಡಪದ , ಯಮನೂರಪ್ಪ ಹಳ್ಳಿಕೇರಿ ಸಹ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಜರುಗಿತು ನಂತರ ಅನ್ನಸಂತರ್ಪಣೆ ಜರುಗಿತು.

## ತ್ರೈಮಾಸಿಕ ಕೆ.ಡಿ.ಪಿ ಸಭೆ

- ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ ತ್ರೈ ಮಾಸಿಕ ಪ್ರಗತಿ ಪರಿಶೀಲನಾ (ಕೆ.ಡಿ.ಪಿ.) ಸಭೆಯು ಫೆ.23 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯೋಜನಾ ಸಮಿತಿ ಸಭೆ

- ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಯೋಜನಾ ಸಮಿತಿ ಸಭೆಯು ಫೆ.24 ರಂದು ಸಂಜೆ 4 ಗಂಟೆಗೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಚಿತ್ರ ಶೀರ್ಷಿಕೆ: ವಂದೇ ಮಾತರಂ ಗೀತೆಯು 150 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ , ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಆಯೋಜಿಸಿದ್ದ 'ವಂದೇ ಮಾತರಂ ಕೋಸ್ಟಲ್ ಸೈಕ್ಲೋಥಾನ್ –2026– ರ್‍ಯಾಲಿಯ ಪಶ್ಚಿಮ ಕರಾವಳಿ ಸೈಕ್ಲೋಥಾನ್ ತಂಡವು, ಮಂಗಳವಾರ ಕಾರವಾರದ ಮಾಜಾಳಿಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ, ಧ್ವಜಾರೋಹಣ ಸಮಾರಂಭದ ನಂತರ ಮುರುಡೇಶ್ವರದ ಕಡೆಗೆ ಸಾಗಿತು. ಈ ಸಂದರ್ಭದಲ್ಲಿ ತರಬೇತಿ ನಿರತ ಐ.ಎ.ಎಸ್ ಅಧಿಕಾರಿ ಝೂಫಿಶಾನ್ ಹಕ್, ಕೈಗಾ ಸ್ಟೇಷನ್ ಡೈರೆಕ್ಟರ್ ಶ್ರೀರಾಮ ಕೆ, ಸಿ.ಐ.ಎಸ್.ಎಫ್. ಘಟಕ ಎನ್.ಪಿ.ಸಿ. ಕೈಗಾದ ಸೀನಿಯರ್ ಕಮಾಂಡೆಂಟ್ ಅಜಯ್ ಕುಮಾರ್ ಝಾ, ಕೋಸ್ಟ್ ಗಾರ್ಡ್ ಕಮಾಂಡರ್ ಕಿರಣಕುಮಾರ ಸಿನ್ಹಾ, ಡೆಪ್ಯುಟಿ ಕಮಾಂಡೆಂಟ್ ಬಿರೇಂದ್ರ ಕುಮಾರ್, ಇಂಜಿನೀಯರ್ ಕಾಲೇಜಿನ ಪ್ರಾಂಶುಪಾಲ ಡಾ. ಶಾಂತಲಾ, ಡಿಆರ್‌ನ ಡಿವೈಎಸ್‌ಪಿ ರಾಘವೇಂದ್ರ ನಾಯ್ಕ, ಸಿಐಎಸ್‌ಎಫ್‌ನ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಎಸ್ ನಗಿ, ಚಂದ್ರು ಮತ್ತಿತರರು ಇದ್ದರು.

## ಸಂತೆ ತಾತ್ಕಾಲಿಕ ಸ್ಥಳಾಂತರ

- ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ.22 ರಂದು ಕಾರವಾರ ನಗರ ವ್ಯಾಪ್ತಿಯಲ್ಲಿ ಪ್ರವಾಸ ಕೈಗೊಂಡಿದ್ದು, ಅಂದು ಕಾರವಾರ ವೈದ್ಯಕೀಯ ಸಂಸ್ಥೆಯಲ್ಲಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ, ಮಾನ್ಯರ ಪ್ರವಾಸದ ಹಿನ್ನಲೆಯಲ್ಲಿ ಸಂಚಾರಕ್ಕೆ ಯಾವುದೇ ಅಡತಡೆ-ಯಾಗದಂತೆ ಮುಕ್ತ ಸಂಚಾರಕ್ಕೆ ಅನುವು ಮಾಡುವ ಸಲುವಾಗಿ ಫೆ.22 ರಂದು ನಡೆಯುವ ಸಂತೆಯನ್ನು ದೋಭಿಘಾಟ ರಸ್ತೆಗೆ ತಾತ್ಕಾಲಿಕವಾಗಿ ಸ್ಥಳಾಂತರ ಮಾಡಲಾಗಿದ್ದು, ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಸಹಕರಿಸುವಂತೆ ನಗರಸಭೆ ಪೌರಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊನ್ನಾವರ: ವಿದ್ಯುತ್ ವ್ಯತ್ಯಯ

- ಮಲ್ಲಮ್ಮ ನುಡಿ ವಾರ್ತೆ ಕಾರವಾರ

33/11ಕೆ.ವಿ. ವಿದ್ಯುತ್ ವಿತರಣಾ ಉಪಕೇಂದ್ರ, ಗೇರುಸೊಪ್ಪದಲ್ಲಿ 33ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ನಿರ್ವಹಣಾ ಕಾರ್ಯದ ನಿಮಿತ್ತ ರೈಟ್, ಲೆಫ್ಟ್, ಮಾಗೋಡ, ಉಪ್ಪೋಣಿ ಫೀಡರುಗಳ ವ್ಯಾಪಿಯಲ್ಲಿ ಹಾಗೂ 33/11ಕೆ.ವಿ. ವಿದ್ಯುತ್ ವಿತರಣಾ ಉಪಕೇಂದ್ರ, ಕಾಸರಕೋಡ ಮತ್ತು ಮಂಕಿಯಲ್ಲಿ 33ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ನಿರ್ವಹಣಾ ಕಾರ್ಯದ ನಿಮಿತ್ತ ಕೆಳಗಿನೂರು, ಟೊಂಕಾ, ಬಳಕೂರು, ದೇವರಗದ್ದೆ, ಇಡಗುಂಜಿ, ಮಂಕಿ ಟೌನ್, ಚಿತ್ತಾರ, ಅಡಿಕೆಕುಳಿ, ಹಾಮಕ್ಕಿ ಮತ್ತು ಬುಸಾಲೆ ಫೀಡರುಗಳ ವ್ಯಾಪಿಯಲ್ಲಿ ಹಾಗೂ ಗ್ರಾಮೀಣ ಶಾಖೆ ವ್ಯಾಪ್ತಿಯ ಹಡಿನಬಾಳ ಮತ್ತು ಸುಬ್ರಹ್ಮಣ್ಯ ಫೀಡರ್ ವ್ಯಾಪ್ತಿಗಳಲ್ಲಿ 11ಕೆ.ವಿ. ಮಾರ್ಗದ ನಿರ್ವಹಣೆಯ ನಿಮಿತ್ತ ಫೆ.18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್(ವಿ)ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಟಕದಲ್ಲಿ ಜೀವನ ಮೌಲ್ಯ ಸಾಮಾಜಿಕ ಜಾಗೃತಿ: ಕೊನನಗೌಡ

- ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಇಂದು ವಿದ್ಯುನ್ಮಾನ ಮಾಧ್ಯಮಗಳ ಹಾವಳಿಯಿಂದ ನೆಜ ಅಭಿನಯದ ನಾಟಕ ಪ್ರದರ್ಶನಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೂ ಕುದರಿಮೋತಿಯಲ್ಲಿ ಹಲವಾರು ನಾಟಕಗಳು ಪ್ರದರ್ಶನಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದು ಜೆಡಿಎಸ್ ಕೊಪ್ಪಳ ಜಿಲ್ಲಾ ವಕ್ತಾರ ಮಲ್ಲನಗೌಡ ಕೊನನಗೌಡ ನುಡಿದರು. ಅವರು ಕುದರಿಮೋತಿ ಮಾಲಿಪಾಟೀಲ್ ಇವರ ಜಾಗದಲ್ಲಿ ಶ್ರೀ ವಿಜಯ ಮಹಾಂತೇಶ್ವರ ನಾಟ್ಯ ಸಂಘದವರಿಂದ ಆಯೋಜಿಸಲ್ಪಟ್ಟ ಸಾಹಿತಿ, ನಾಟಕಕಾರ ಡಿ.ಆರ್.ಪೂಜಾರ ವಿರಚಿತ ಹೆಣ್ಣಿಗೆ ಶೀಲ ಸಿಂಗಾರ ಗಂಡಿಗೆ ಬುದ್ಧಿ ಬಂಗಾರ ಎಂಬ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.



ನಾಟಕದಲ್ಲಿಜೀವನದಪ್ರೀತಿಯಿರುತ್ತದೆ, ಸಾಮಾಜಿಕ ಜಾಗತಿಯಿರುತ್ತದೆ. ನಾಟಕ ರಚನಾಕಾರರನ್ನು ಹಾಗೂ ಕಲಾವಿದರಿಗೆ ಪ್ರೋತ್ಸಾಹಿಸುವ ಕೆಲಸ ಪ್ರತಿಯೊಬ್ಬರೂ ಮಾಡಬೇಕಾಗಿದೆ ಎಂದರು,

ನಾಟಕದ ದಿವ್ಯ ಸಾನಿದ್ಯ ಶ್ರೀ ಮ.ನಿ.ಪ್ರ.ಸ್ವ.ಜ ವಿಜಯಮಹಾಂತೇಶ್ವರ ಮಹಾಸ್ವಾಮಿಗಳು ಸಂಸ್ಥಾನಮಠ ಕುದರಿಮೋತಿ ಇವರು ಆಶೀರ್ವಾಚನ ಮಾಡಿ ನಾಟಕದಲ್ಲಿ ಬರುವ ಎಲ್ಲಾ ಸನ್ನಿವೇಶಗಳಲ್ಲಿ ಒಳ್ಳೆಯ ಪಾತ್ರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಕೆಟ್ಟ ಸನ್ನಿವೇಶಗಳನ್ನು ಇಲ್ಲೆ ಬಿಟ್ಟು ಹೋಗಬೇಕೆಂದು ಸಲಹೆ ನೀಡುವ ಮೂಲಕ ಆಶೀರ್ವಚನ ಮಾಡಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ಶರಣಪ್ಪ ಗುಂಗಾಡಿ,ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷ ಧ್ಯಾಮಣ್ಣ ಉಚ್ಚಲಕುಂಟಿ,ಬಿಜೆಪಿ ಪಕ್ಷದ ಯುವ ಮುಖಂಡರಾದ ವಿಜಯಕುಮಾರ್ ದಾಸರ್,ಹನುಮೇಶ ಗಟ್ಟೆಪ್ಪನವರ್,ಪಂಪಾಪತಿ ವಣಗೇರಿ, ಮಾಜಿ ಗ್ರಾ.ಪಂ.ಸದಸ್ಯ ಶರಣಯ್ಯ ಜಂಗಮೂರು,ಧ್ಯಾಮಣ್ಣ ಚೌಡ್ಕಿ, ನಾಟಕದ ಮಾಲೀಕರು ಹಾಗೂ ಸರ್ಕಾರಿ ಪ್ರೌಡ ಶಾಲೆ ಎಸ್.ಡಿ.ಎಮ್ಸಿ ಅಧ್ಯಕ್ಷ ಈಶಪ್ಪವಣಗೇರಿ,ಮ್ಯಾನೇಜರ ದೇವಪ್ಪ ಹಳ್ಳಿ,ಹನುಮಂತಪ್ಪ ನೇಲಜೇರಿ,ರಂಗಭೂಮಿ ಕಲಾವಿದ ಕೆ.ಗಂಗಾಧರ,ರೈತ ಯುವ ಮುಖಂಡ ಸುರೇಶ ಚೌಡ್ಕಿ, ನಿರೂಪಣೆ ರವಿ ಕಟಗಿ, ನೇರವಹಿಸಿದರು,ಶ್ರೀಗುರು ಪಂಚಾಕ್ಷರಿ ಸಂಗೀತ ಬಳಗದ ಮಾಲೀಕರಾದ ಗವೀಶ್ ಬಸಾಪಟ್ಟಣ್ಣ ಸೇರಿದಂತೆ ಇತರರು ಕಲಾವಿದರು ಇದ್ದರು.

# ಪ್ರಾಮಾಣಿಕ ಅಧ್ಯಯನದಿಂದ ಹೆಚ್ಚಿನ ಅಂಕಗಳಿಸಲು ಸಾಧ್ಯ: ವಿನಯ ಕುಮಾರ

- ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಕರ್ತವ್ಯ ನಿಷ್ಠೆ ಹಾಗೂ ಸಮಯ ಪಾಲನೆ ಪ್ರಾಮಾಣಿಕ ಪರಿಸರದಿಂದ ಅಧ್ಯಯನ ಮಾಡಿದರೆ ಪರೀಕ್ಷೆಯಲ್ಲಿ ಖಂಡಿತವಾಗಿಯೂ ಹೆಚ್ಚಿನ ಅಂಕ ಪಡೆದುಕೊಳ್ಳಲು ಸಾಧ್ಯವೆಂದು ಲಿಂಗಸಗೂರು ಉಮಾ ಮಹೇಶ್ವರಿ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವಿನಯಕುಮಾರ ಗಣಚಾರಿ ಸೋಮವಾರ ಸಂಜೆ ಹೇಳಿದರು.



ಪಟ್ಟಣದ ಭಾರತ ಫಂಕ್ಷನ್ ಹಾಲ್ನಲ್ಲಿ ಹಮ್ಮಿಕೊಂಡಿದ್ದ ಶಾಂತಿ ನೀಕೇತನ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಫ್ರೌಢಶಾಲೆಯ 24ನೇ ಶಾಲಾ ವಾರ್ಷಿಕೋತ್ಸವ ಹಾಗೂ ಚಿಣ್ಣರ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮಕ್ಕಳು ಅಭ್ಯಾಸಮಾಡುತ್ತಿರುವ ಸಂಧರ್ಭದಲ್ಲಿ ಮನೆಯಲ್ಲಿ ಪಾಲಕರು ಕಟ್ಟೆಚ್ಚರದಿಂದ ಟಿ.ವಿ ಹಾಗೂ ಮೊಬೈಲ್ ಬಳಕೆಯಿಂದ ದೂರವಿರಬೇಕು. ಯಾಕೆಂದರೆ ಈಗಿನ ಮಕ್ಕಳಲ್ಲಿ ಮೊಬೈಲ್ ಹಾಗೂ ಟಿವಿ ಹವ್ಯಾಸ ಜಾಸ್ತಿ ಇದೆ. ಇದರಿಂದ ಓದುವ ಮಗುವಿನ ಕೈಯಲ್ಲಿ ಮೊಬೈಲ್ ಇದ್ದರೆ ಶೈಕ್ಷಣಿಕ ಭವಿಷ್ಯ ಕುಂಠಿತವಾಗುತ್ತದೆ. ಶಾಲೆಯಲ್ಲಿ ನೀಡುವ ಶಿಕ್ಷಣದರ ಜೊತೆಗೆ ಮನೆಯಲ್ಲಿ ಪಾಲಕರು ತಮ್ಮ ಮಕ್ಕಳೊಂದಿಗೆ ಬೆರೆತು ಕಲಿಸಿಕೊಡಬೇಕಾದ ಜೀವನದ ಉತ್ತಮ ಮೌಲ್ಯಗಳು ನೀಡುವುದು ಪ್ರತಿಯೊಬ್ಬರ ಕರ್ತವ್ಯ ಹಾಗೂ ಧೈರ್ಯ ತುಂಬುವ ಕಾರ್ಯವಾಗ ಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಟ್ಟಿ ಅಮರೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ದಯ್ಯ ದಳಪತಿ, ಪಿಸಿಎಆರ್ಡಿ ಬ್ಯಾಂಕ ಮಾಜಿ ಅಧ್ಯಕ್ಷ ಶರಣಪ್ಪ ಜಾವೂರ, ಆದ್ಯಾತ್ಮಿಕ ಚಿಂತಕ ರಾಯಚೂರು ರಾಜು ಕಲಾವಿದ ಹಾಗೂ 10ನೇ ತರಗತಿ ವಿದ್ಯಾರ್ಥಿಗಳು ಮಾತನಾಡಿದರು.

ಮೌಲಾನ್ ಅಬುಲ್ ಕಲಾಂ ಆಜಾದ ಎಜುಕೇಶನ್ ಹಾಗೂ ಚಾರಿಟೇಬಲ್ ಟ್ರಸ್ಟ ಸೈಯದ್ ಪಾಷಾಹುಸೇನ್, ಮಂಜುನಾಥ ತೋರಣದಿನ್ನಿ, ನಬೀರಸೂಲ್, ಉದಯಕುಮಾರ ಕಮ್ಮಾರ, ಸೋಮನಾಥ ಪಾಮನಕೆಲ್ಲೂರ್, ಶರಣಪ್ಪ ಬನ್ನಿಗೋಳ, ಡಾ! ಸಂಜೀವ ಭಮಸಾಗರ, ಶಾಲಾ ಆಡಳಿತ ಅಧಿಕಾರಿ ಎಮ್.ಆರ್ ಕಂದಗಲ್,ಬಂದೇನವಾಜ,ಅಮ್ಜದ ಕಂದಗಲ್, ಸೇರಿದಂತೆ ಶಾಲಾ ಮುಖ್ಯೋಪಧ್ಯಾಯ ಹಾಗೂ ಸಿಬ್ಬಂದಿಗಳು, ವಿದ್ಯಾರ್ಥಿಗಳ ಪಾಲಕರು ಇದ್ದರು.

## ಮಹಾಶಿವರಾತ್ರಿ ಸಂಭ್ರಮ

## ಈಶ್ವರನ ಕೃಪೆಗೆ ಪಾತ್ರರಾದ ಸಾವಿರಾರು ಭಕ್ತರು



- ಮಲ್ಮನ ನುಡಿ ವಾರ್ತೆ ಮಸ್ಕಿ

ನಾಡು ಐತಿಹಾಸಿಕ ಮಸ್ಕಿ ಪಟ್ಟಣದಲ್ಲಿ ಮಹಾಶಿವರಾತ್ರಿ ಸಂಭ್ರಮ ಮನೆ ಮಾಡಿತ್ತು,ಐತಿಹಾಸಿಕ ಪ್ರಸಿದ್ಧ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ,ದೇವರ ದರ್ಶನ ಪಡೆದರು.

ಬೆಳಗಿನ ಜಾವ 3 ಗಂಟೆಯಿಂದಲೇ ಶಿವಲಿಂಗಕ್ಕೆ ಅಭಿಷೇಕ,ವಿಶೇಷ ಪೂಜೆ ಸಲ್ಲಿಸಲಾಯಿತು.

ಇಂದು ಮಹಾಶಿವರಾತ್ರಿ ಹಿನ್ನೆಲೆ ದೇವರಿಗೆ ಬಿಲ್ವಪತ್ರೆ,ಹೂವುಗಳನ್ನು ಅರ್ಪಿಸಿ ಭಕ್ತರು ಕೃತಾರ್ಥರಾಗುತ್ತಿದ್ದಾರೆ.

ಪವಿತ್ರ ಗಂಗಾಜಲ ವಿತರಣೆ:- ಮಹಾಶಿವರಾತ್ರಿ ಹಬ್ಬದ ಹಿನ್ನಲೆಯಲ್ಲಿ ಜಿಲ್ಲಾಡಳಿತ,ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲಾ ತಾಲೂಕಿನ ಶಿವ ದೇವಾಲಯಗಳಿಗೆ ಪವಿತ್ರ ಗಂಗಾಜಲ ವಿತರಣೆ ಮಾಡಲಾಯಿತು.

ಗಂಗಾಜಲ ವಿತರಣೆ ಮಾಡಿ ಬಳಿಕ ಮಲ್ಲಿಕಾರ್ಜುನ ದೇವಾಲಯ ಪ್ರಧಾನ ಅರ್ಚಕರಾದ ಸಿದ್ದಯ್ಯ ಹೆಸರೂರು ಹಿರೇಮಠ ಅವರ ಮಾತನಾಡಿ,ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಎಲ್ಲಾ ದೇವಾಲಯಗಳಲ್ಲಿ ಪವಿತ್ರ ಗಂಗಾ ಜಲದಿಂದ ಶಿವನಿಗೆ ಅಭಿಷೇಕ ಮಾಡಲಾಗುತ್ತದೆ.ನಂತರ ಗಂಗಾಜಲವನ್ನು ಶಿವನ ಭಕ್ತರಿಗೆ ಪ್ರಸಾದ ರೂಪದಲ್ಲಿ ಕೊಡಲಾಗುವುದು' ಎಂದರು.

## ಕುಡಿವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ: ಮಲ್ಲಪ್ಪ ಘಂಟಿ



- ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ಬೇಸಿಗೆ ಕಾಲದಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಿ ಎಂದು ಗುರುಮಠಕಲ್ ತಾಲೂಕಿನ ತಹಸಿಲ್ದಾರ್ ಚನ್ನಮಲ್ಲಪ್ಪ ಘಂಟಿ ಪಿಡಿಓ ಅವರಿಗೆ ಸೂಚಿಸಿದರು. ಗುರುಮಠಕಲ್ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಬೇಸಿಗೆ ಪ್ರಾರಂಭದಲ್ಲಿ ಕುಡಿಯುವ ನೀರಿನ ಮುಂಜಾಗ್ರತ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ನೀರಿನ ಮಟ್ಟ ವಿವರ ಕೈಗೊಳ್ಳಬೇಕಾದ ಕ್ರಮಗಳು ಕುರಿತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ ಅಂಬರೀಶ್ ಪಾಟೀಲ್ ಮಾತನಾಡಿ, ಕಳೆದ ವರ್ಷ 2025 ಮಾರ್ಚ್ ನಿಂದ ಜೂನ್ ವರೆಗೆ 13 ಗ್ರಾಮ ಪಂಚಾಯಿತಿಗಳಲ್ಲಿ ಕುಡಿವ ನೀರಿನ ಸಮಸ್ಯೆಯಾಗಿದೆ. ಈ ಬಾರಿ ಬೇಸಿಗೆ ಆರಂಭದಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದರು.

ಅಜಲಾಪುರ ಗ್ರಾಮದ ತುರುಕನ ದೊಡ್ಡಿ ಮತ್ತು ಬದ್ಯಪಲ್ಲಿ ತಾಂಡದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಹೊಸ ಬೋರ್ವೆಲ್ ಹಾಕಿಸಿದರೆ ಸಮಸ್ಯೆ ಬಗೆಹರಿಯುತ್ತದೆ ಎಂದು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ತಿಳಿಸಿದರು. ಚಂಡ್ರಿಕಿ ಗ್ರಾಮದ ವಾರ್ಡ್ ನಂಬರ್ 1 ಮತ್ತು 4 ರಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಹೊಸ ಬೋರಿಂಗ್ ಹಾಕಬೇಕಿದೆ ಮತ್ತು ಪೈಪ್ ಲೈನ್ ಮಾಡಿಸಬೇಕಿದೆ ಎಂದು ಪಿಡಿಓ ತಿಳಿಸಿದರು.

ಚಿನ್ನಕಾರ ಗ್ರಾಮ ಪಂಚಾಯಿತಿಯ ಧರ್ಮಪುರ ತಾಂಡದಲ್ಲಿ ಜಲಸಂಪನ್ಮೂಲ ಕಡಿಮೆ ಇದ್ದು ಹೋದ ಬಾರಿ ಬಾಡಿಗೆ ತೆಗೆದುಕೊಳ್ಳಲಾಗಿದೆ ಈ ಬಾರಿಯೂ ಕೂಡ ಬಾಡಿಗೆ ಬೋರ್ವೆಲ್ ಮುಖಾಂತರ ನೀರು ಸರಬರಾಜು ಮಾಡಲಾಗುತ್ತದೆ ಎಂದು ಗ್ರಾ.ಪಂ ಕಾರ್ಯದರ್ಶಿ ಅಧಿಕಾರಿಗಳಿಗೆ ತಿಳಿಸಿದರು.ಗಾಜರಕೋಟ ಮತ್ತು ರಾಂಪುರದಲ್ಲಿ ನೀರಿನ ಸಮಸ್ಯೆ ಇದ್ದು, ರಾಂಪುರದಲ್ಲಿ ಎಂಟು ಬೋರ್ ವೆಲ್ ರಿಪೇರಿ ಆಗಿವೆ ಮತ್ತು ಹೊಸ ಪೈಪ್ ಲೈನ್ ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಆದರೆ ಬಾಡಿಗೆ ಬೋರ್ವೆಲ್ ಮುಖಾಂತರ ನೀರು ಸರಬರಾಜು ಮಾಡಲಾಗುತ್ತದೆ ಎಂದು ಪಿಡಿಓ ತಿಳಿಸಿದರು.ಜೈ ಗ್ರಾಮ ಗ್ರಾಮ ಪಂಚಾಯಿತಿಯ ಗೊರೆನೂರಿನಲ್ಲಿ ಬೋರ್ವೆಲ್ ಇದೆ 500 ಮೀಟರ್ ಪೈಪ್ಲೈನ್ ಅಳವಡಿಸಬೇಕಿದೆ ಮತ್ತು ಇಡ್ಲೂರಿನಲ್ಲಿ ಹೊಸ ಕೊಳವೆ ಬಾವಿ ಕೊರೆಸ ಬೇಕಿದೆ ಎಂದು ಪಿಡಿಓ ತಿಳಿಸಿದರು.

ಪುಟಪಾಕ ಗ್ರಾಮ ಪಂಚಾಯಿತಿಯ ಮಲ್ಲಾಪುರದಲ್ಲಿ ಒಂದು ಬೋರಿಂಗ್ ಕಾರ್ಯನಿರ್ವಹಿಸುತ್ತಿಲ್ಲ ಅಲ್ಲಿ ಒಂದು ಮೋಟಾರ್ ಅಳವಡಿಸಬೇಕಿದೆ.

ಯಂಪಾಡ ಗ್ರಾಮ ಪಂಚಾಯಿತಿ ಹಾಗೂ ಕಾಕಲವಾರ, ಬುದೂರ ಕಾಳ ಬೆಳಗುಂದಿ, ಕಣೆಕಲ್,

ನಂದೇಪಲ್ಲಿ, ಮಾದ್ವಾರ ಗ್ರಾಮ ಪಂಚಾಯಿತಿ ಮತ್ತು ಎಲೇರಿ ಜಿಬಿ ತಾಂಡದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು ಏಪ್ರಿಲ್ ನಲ್ಲಿ ಸಮಸ್ಯೆ ಉಲ್ಬಾಣಿಸುತ್ತದೆ. ಬಾಡಿಗೆ ಬೋರ್ವೆಲ್ ಮುಖಾಂತರ ನೀರು ಸರಬರಾಜು ಮಾಡುವಂತೆ ತಹಸೀಲ್ದಾರ್ ಅವರು ಪಿಡಿಓ ಅವರಿಗೆ ಸೂಚಿಸಿದರು.

ಗುರುಮಠಕಲ್ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಜನರಿಂದ ಕುಡಿಯುವ ನೀರಿನ ಸಮಸ್ಯೆ & ದೂರುಗಳಿಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಶೀಘ್ರವೇ ಸಮಸ್ಯೆಗೆ ಸ್ಪಂದಿಸಿ ಪರಿಹರಿಸಬೇಕು. ಮುಂಬರುವ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಪಿಡಿಓ ಅವರು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿರಿ ಎಂದು ತಸಿಲ್ದಾರ್ ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರೇಡ್-2 ತಹಸೀಲ್ದಾರ್ ನರಸಿಂಹಸ್ವಾಮಿ, ಪುರಸಭೆ ಮುಖ್ಯಅಧಿಕಾರಿ ಶರಣಪ್ಪ ಮಡಿವಾಳ, ಪಶು ಇಲಾಖೆ ತಾಲೂಕು ಸಹಾಯಕ ನಿರ್ದೇಶಕರು ಶಶಿಕಿರಣ ಹಜಾರೆ,

ತಾ.ಪಂ ಎಡಿ ರಾಮಚಂದ್ರ ಬಸೂದೆ, ವಿಷಯ ನಿರ್ವಾಹಕ ವಿದ್ಯಾಸಾಗರ ಕುಲಕರ್ಣಿ ಸೇರಿದಂತೆ ತಾಲೂಕು ಪಂಚಾಯಿತಿ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಹಗಲಿನಲ್ಲಿ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿ ವಿದ್ಯುತ್ ಕೇಂದ್ರಕ್ಕೆ ಮುತ್ತಿಗೆ



• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಕರಡಿ ಹಾಗೂ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು ರೈತರಿಗೆ ತೊಂದರೆಯಾಗುತ್ತಿದೆ ಆದ್ದರಿಂದ ಹಗಲು ಹೊತ್ತಿನಲ್ಲಿ ವಿದ್ಯುತ್ ಪೂರೈಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಜಾತ್ಯತೀತ ಜನತಾದಳದ ಜಿಲ್ಲಾ ವಕ್ತಾರ ಮಲ್ಲನಗೌಡ ಎಸ್ ಕೋನನಗೌಡ್ರು ಹೇಳಿದರು.

ತಾಲೂಕಿನ ಬೈರನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪಂಪ ಸಟ್ ಗಳನ್ನು ಹೊಂದಿದ ರೈತರು ಮಂಗಳೂರು ಗ್ರಾಮದಲ್ಲಿರುವ 100/11 ಕೆ ವಿ ವಿದ್ಯುತ್ ಉಪ ಕೇಂದ್ರಕ್ಕೆ ಮುತ್ತಿಗೆ ಹಾಕಿ ರೈತರ ಪಂಪ್ ಸೆಟ್ ಗಳಿಗೆ ಹಗಲಿನಲ್ಲಿ ವಿದ್ಯುತ್ ಸರಬರಾಜು ಮಾಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು ಈ ವೇಳೆ ಜೆಡಿಎಸ್ ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರು ಮಾತನಾಡುತ್ತಾ ಭೈರನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪಂಪ್ ಸೆಟ್ ಗಳಿಗೆ ಬೆಳಗಿನ ಜಾವ 5:00 ಗಂಟೆಯಿಂದ ವಿದ್ಯುತ್ ಪೂರೈಕೆಯಾಗುತ್ತಿದ್ದು ನಮ್ಮ ಭಾಗದಲ್ಲಿ ಕರಡಿ ಹಾಗೂ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿರುವುದರಿಂದ ಈ ಸಮಯದಲ್ಲಿ ತಮ್ಮ ಕೃಷಿ ತೋಟಗಳಿಗೆ ಹೋಗಿ ನೀರುಣಿಸಲು ಅಪಾಯ ಎದುರಿಸುವಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ ಆದ್ದರಿಂದ ರೈತರ ವಿದ್ಯುತ್ ಪೂರೈಸಬೇಕು ಎಂದು ಒತ್ತಾಯಿಸಿ ರೈತರೊಂದಿಗೆ ವಿದ್ಯುತ್ ಉಪ ಕೇಂದ್ರವನ್ನು ಮುತ್ತಿಗೆ ಹಾಕಿ ಪ್ರತಿಭಟನೆ ಮಾಡಲಾಯಿತು ಎಂದು ತಿಳಿಸಿದರು.

ಈ ವೇಳೆಯಲ್ಲಿ ಸಣ್ಣಾಹನುಮಂತ ಸಣ್ಣಳ್ಳಿ, ಶಿವಾನಂದಪ್ಪ ಚಿಂಚರ್, ಮಾರುತಿ ಹಿರೇಹಳ್ಳಿ, ಶಂಕ್ರಪ್ಪ ಚಿಂಚರ್, ಗವಿಸಿದ್ದಪ್ಪ ಜಿನ್ನಾಪುರ, ಬಸವರಾಜ ಕೊರಮದಾರ, ಹನುಮಂತಪ್ಪ ಮಾಮನಿ, ಮುನಿಯಪ್ಪ ದನದಮನಿ, ಶಿವನಗೌಡ ದನದಮನಿ, ಅಂಬ್ರಪ್ಪ ಮದ್ಲೂರ್, ಗವಿಸಿದ್ದಪ್ಪ ಕನಗಣ್ಣನವರ್, ಮಲ್ಲಪ್ಪ ಕಲ್ಗುಡಿ, ಮಲ್ಲಪ್ಪ ಗೌಡ್ರು, ಗವಿಸಿದ್ದಪ್ಪ ಚಿಂಚರ್, ಮರಿಯಪ್ಪ ಹರಿಜನ ಈರಪ್ಪ ಮಂಗಳೂರು, ವಿರುಪಾಕ್ಷಿ ಹರಿಜನ, ಚೆನ್ನಪ್ಪ ಜಿನ್ನಾಪುರ್, ಷಣ್ಮುಖಪ್ಪ ದನದಮನಿ, ಹನುಮಂತಪ್ಪ ಡಗ್ಗಿ, ದ್ಯಾಮಣ್ಣ ದನದಮನಿ, ಶಿವೂ ಸಣ್ಣಹಳ್ಳಿ, ಹನುಮಂತಪ್ಪ ಚಿಂಚರ, ಶರಣಪ್ಪ ಮಾಲಿಗೌಡ್ರು ಇನ್ನು ಹಲವರು ಉಪಸ್ಥಿತರಿದ್ದರು.

# ಸಣ್ಣ ಘಟನೆ ಎಂದವರಿಗೆ ತಕ್ಕ ಉತ್ತರ: ಕ್ಯಾವಟರ್



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆಯ ಪ್ರವಾಸಿ ತಾಣವಾಗಿರುವ ಸಾಣಾಪೂರ ಬಳಿ ಕಳೆದ ವರ್ಷ ನಡೆದ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಸಣ್ಣ ಘಟನೆ ಎಂದ ಜನಪ್ರತಿನಿಧಿಗೆ ಗಂಗಾವತಿ ನ್ಯಾಯಲಯ ನೀಡಿರುವ ತೀರ್ಪು ತಕ್ಕ ಉತ್ತರವಾಗಿದೆ ಎಂದು ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಹೇಳಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಅಂದು ಇಸ್ರೇಲ್ ಮಹಿಳೆ ಮೇಲೆ ಅತ್ಯಾಚಾರ ಮಾಡಿ, ವಿದೇಶಿ ಪ್ರಜೆಯನ್ನು ಕೊಲೆ ಮಾಡಿದ ಮೂವರು ಅಪರಾಧಿಗಳಿಗೆ ಗಂಗಾವತಿ ಸತ್ರ ನ್ಯಾಯಾಲಯ ಸೋಮವಾರ ಮರಣ ದಂಡನೆ ವಿಧಿಸುವ ಮೂಲಕ ಐತಿಹಾಸಿಕ ತೀರ್ಪು ನೀಡಿದೆ.

ಇಂತಹ ಘಟನೆ ಇಡೀ ಜಿಲ್ಲೆಯ ಇತಿಹಾಸದಲ್ಲಿ ಎಂದೆಂದೂ ನಡೆದಿರಲಿಲ್ಲ. ಇದರಿಂದ ಜಿಲ್ಲೆಯ ಪ್ರವಾಸೋದ್ಯಮದ ಮೇಲೆ ಕರಿನೆರಳು ಬಿತ್ತು.ಆದರೆ, ಇಂತಹ ಭೀಕರ ಘಟನೆಯನ್ನು ಸಣ್ಣ ಘಟನೆ ಎನ್ನುವ ಮೂಲಕ ಸಂಸದ ರಾಜಶೇಖರ ಹಿಟ್ನಾಳ್ ದುಂಡಾವರ್ತನೆ ತೋರಿದ್ದು ಸರಿಯಾದ ನಡೆಯಲ್ಲ.ಅದು, ಕೇಂದ್ರ ಪ್ರವಾಸೋದ್ಯಮ ಇಲಾಖೆ ಆಯೋಜಿಸಿದ್ದ ಪ್ರವಾಸೋದ್ಯಮ ಕುರಿತ ಕಾರ್ಯಕ್ರಮದಲ್ಲಿ ಸಂಸದ ಹಿಟ್ನಾಳ್, ಸಾಣಾಪೂರ ಗ್ರಾಮದ ಬಳಿ ಜರುಗಿದ ಘಟನೆಯನ್ನು ಸಣ್ಣ ಘಟನೆ ಎನ್ನುವ ಮೂಲಕ ಜಿಲ್ಲೆಯ ಮಾನ– ಮರ್ಯಾದೆ ಕಳೆದಿದ್ದರು.

ಇಂತಹ ಮನಸ್ಥಿತಿ ಹೊಂದಿದ ಹಿಟ್ನಾಳ್ ಅವರಿಗೆ ನ್ಯಾಯಲಯ ನೀಡಿರುವ ತೀರ್ಪು ಸರಿಯಾಗಿದೆ. ಇನ್ನಾದರೂ ಸಂಸದ ಹಿಟ್ನಾಳ್ ಅವರು, ಇಂತಹ ಹೇಳಿಕೆಗಳನ್ನು ಮಾತನಾಡುವುದನ್ನು ಬಿಡಬೇಕು. ಜತೆಗೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಮುಂದೆಂದೂ ಇಂತಹ ಘಟನೆ ಜರುಗದಂತೆ ನೋಡಿಕೊಳ್ಳಬೇಕೆಂದು ಕ್ಯಾವಟರ್ ಅವರು ಒತ್ತಾಯಿಸಿದ್ದಾರೆ.

# ಅನಧಿಕೃತ ಮರಳುಗಾರಿಕೆ ವಿರುದ್ಧ ಕಾನೂನು ಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಕಾರವಾರ ತಾಲೂಕಿನ ಕಾಳಿ ನದಿ ಪಾತ್ರದಲ್ಲಿ ಅನಧಿಕೃತ ಮರಳುಗಾರಿಕೆ/ದಾಸ್ತಾನು/ಸಾಗಾಣಿಕೆ ನಿಯಂತ್ರಿಸುವ ಕುರಿತಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಹಗಲು ರಾತ್ರಿ ಗಸ್ತು ಸಂಚಾರ ಕೈಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಇದುವರೆಗೆ ಅನಧಿಕೃತ ಮರಳುಗಾರಿಕೆ ಮಾಡುತ್ತಿರುವವರಿಂದ ರೂ. 20,6,240 ಗಳ ದಂಡವನ್ನು ಸಂಗ್ರಹಿಸಲಾಗಿದ್ದು, 192 ಮೆಟ್ರಿಕ್ ಟನ್ ಮರಳು ವಶಪಡಿಸಿಕೊಳ್ಳಲಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ತಿಳಿಸಿದ್ದಾರೆ.

ಅಲ್ಲದೇ ಇತರೇ ಇಲಾಖೆಗಳ ವತಿಯಿಂದ ಒಟ್ಟು 17 ಪ್ರಕರಣಗಳಿಗೆ ಸಂಬಂದಿಸಿದಂತೆ ರೂ.3,93,690 ದಂಡ ವಸೂಲಿ ಮಾಡಲಾಗಿದ್ದು, ಅನಧಿಕೃತ ಮರಳುಗಾರಿಕೆ ಚಟುವಟಿಕೆ ಸಂಬಂಧ ಸ್ವೀಕೃತವಾಗುವ ದೂರುಗಳಿಗೆ ಪರಿಶೀಲನೆ ಕೈಗೊಂಡು ನಿಯಮಾವಳಿಗಳಂತೆ ಕ್ರಮ ವಹಿಸಲಾಗುತ್ತಿದ್ದು, ನಿಯಮಿತವಾಗಿ ಹಗಲು ರಾತ್ರಿ ಗಸ್ತು ಸಂಚಾರ ಕೈಗೊಳ್ಳಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿತ್ರ ಶೀರ್ಷಿಕೆ: ಫೆಬ್ರವರಿ 22 ರಂದು ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡುವ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಭೆ ನಡೆಯಿತು. ಸಭೆಯಲ್ಲಿ ಜಿ.ಪಂ. ಸಿಇಓ ಡಾ.ದಿಲೀಷ್ ಶಶಿ, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ತರಬೇತಿ ನಿರತ ಐ.ಎ.ಎಸ್ ಅಧಿಕಾರಿ ಝೂಫಿಶಾನ್ ಹಕ್ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಬ್ರಹ್ಮಕುಮಾರಿ ಸಂಸ್ಥೆಯಿಂದ ಅರ್ಥಪೂರ್ಣ ಮಹಾ ಶಿವರಾತ್ರಿ ಆಚರಣೆ: ಹಂಪಣ್ಣ ಸಜ್ಜನ್

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ರಾಯಚೂರು ನಗರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ಪ್ರತಿವರ್ಷ ಬಹಳ ಅರ್ತಪೂರ್ಣವಾಗಿ ಮಹಾಶಿವರಾತ್ರಿಯನ್ನು ಆಚರಣೆ ಮಾಡುತ್ತಾರೆ .

ಈ ವರ್ಷ ವಿಶಿಷ್ಟವಾಗಿ ಮೂರು ದಿನಗಳ ಕಾರ್ಯಕ್ರಮವನ್ನು ಈ ಒಂದು ಮೈದಾನದಲ್ಲಿ ಆಯೋಜನೆಯನ್ನು ಮಾಡಿ. ಸಾರ್ವಜನಿಕರಿಗೆ ದ್ವಾದಶಿ ಜ್ಯೋತಿರ್ಲಿಂಗಗಳ ದರ್ಶನ. ಅಂತರ್ಲಿಂಗದ ದರ್ಶನ .

ಅಂತರಂಗಕ್ಕೆ ಜ್ಞಾನದ ಬೆಳಕು ಮತ್ತು ಚಿತ್ರ ಪ್ರದರ್ಶನ .ಓಂ ನಮೋ ಶಿವಾಯ ಮಂತ್ರದಿಂದ ಶಿವ ಅನುಭವ ಮಂಟಪ.ಇಂತಹ ಮಹತ್ವ ಕಾರ್ಯಕ್ರಮಗಳನ್ನು ವಿಶೇಷವಾಗಿ ಎಲ್ಲಾ ಲಿಂಗಗಳ ದರ್ಶನಕ್ಕಾಗಿ ಉತ್ತಮವಾದ ಗ್ಯಾಲರಿಯನ್ನು ನಿರ್ಮಾಣ ಮಾಡಿ ಅರ್ಥಪೂರ್ಣವಾಗಿ ಮಹಾ ಶಿವರಾತ್ರಿಯನು ಆಚರಿಸಲು ವ್ಯವಸ್ಥೆಯನ್ನ ಮಾಡಿದ್ದಾರೆ.ಇಂತಹ ಸಂಸ್ಥೆಗಳು ಸಮಾಜದಲ್ಲಿ ಶಾಂತಿ ಮತ್ತು ಸದ್ಭಾವನಗಳನ್ನು ಮೂಡಿಸುವಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ.

ಈ ಸಂಸ್ಥೆಯ ಸಂಚಾಲಕರಾದ ರಾಜಯೋಗಿನಿ ಸ್ಮಿತಾ ಅಕ್ಕ ಈ ಕಾರ್ಯಕ್ರಮ ಆಯೋಜನೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಾರೆ. ಪ್ರತಿ ವರ್ಷ ಮಹಾಶಿವರಾತ್ರಿಯನ್ನ ಅಚ್ಚುಕಟ್ಟಾಗಿ ಆಯೋಜನೆ ಮಾಡುವಲ್ಲಿ ಈ ಸಲ 90ನೇ ಮಹಾಶಿವರಾತ್ರಿ ಮಹೋತ್ಸವದ ಅಂಗವಾಗಿ ಹಲವಾರು ಉಪನ್ಯಾಸಗಳನ್ನು ಮತ್ತು ವೈವಿಧ್ಯಮದ ಕಾರ್ಯಕ್ರಮಗಳನ್ನ ಆಯೋಜನೆ ಮಾಡಿದ್ದಾರೆ ಎಂದು ದಿನಾಂಕ 16.2.2020ರಂದು ರಾಯಚೂರು ನಗರದ ವಾಲ್ಕಟ್ ಮೈದಾನದಲ್ಲಿ ಆಯೋಜನೆ ಮಾಡಿದ 90ನೇ ಮಹಾಶಿವರಾತ್ರಿಯ ಮಹೋತ್ಸವದ ಪಾಲ್ಗೊಂಡು ಜ್ಯೋತಿಯನ್ನು ಬೆಳೆಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ರಾಯಚೂರಿನ ಸಹಾಯಕ ಆಯುಕ್ತರಾದ ಡಾ. ಹಂಪಣ್ಣ ಸಜ್ಜನವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹೆಚ್ಚುವರಿ ಪೊಲೀಸ್ ಅಧ್ಯಕ್ಷಕರಾದ ಕುಮಾರಸ್ವಾಮಿ ರವರು ಮಾತನಾಡುತ್ತಾ .ಇಲ್ಲಿ ವಿಶೇಷವಾಗಿ ಈ ಸಲ ಬ್ರಹ್ಮಕುಮಾರಿ ಸಂಸ್ಥೆಯವರು ನಮ್ಮ ಪೊಲೀಸ್ ಅವರ ಸೇವೆಯನ್ನೂ




ಪರಿಗಣಿಸಿ ಅವರ ಕಾರ್ಯವನ್ನು ಮೆಚ್ಚಿ ಜೊತೆಗೆ ನಮ್ಮ ಇಲಾಖೆಯ ಮೇಲೆ ಇರುವ ಗೌರವ.ಅಭಿಮಾನದಿಂದ ನಮ್ಮ ಆರಕ್ಷಕರ ಕಾರ್ಯ ಚಟುವಟಿಕೆಗಳನ್ನು ಕುರಿತು ಬಹಳ ಅಭಿಮಾನ ಹೊಂದಿದ ಅವರು ತಮ್ಮ ಸಂಸ್ಥೆಯಿಂದ ಎಲ್ಲರಿಗೂ ಗೌರವ ಸನ್ಮಾನವನ್ನು ಆಯೋಜನೆ ಮಾಡಿದ್ದಾರೆ. ನಮ್ಮ ಇಲಾಖೆಯ ಪರವಾಗಿ ಅವರಿಗೆ ನಾನು ಅಭಿನಂದನೆಗಳನ್ನ ಹೇಳುತ್ತೇನೆ ಸಮಾಜದಲ್ಲಿ ಶಾಂತಿ ಮತ್ತು ಜನರಲ್ಲಿ ಭಾವೈಕ್ಯತೆ ನೋಡಲು ಇಂಥ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯುತ್ತಿರಬೇಕೆಂದು ಹೇಳಿದರು.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡಿನ್ ಡಾ. ರಮೇಶ್ ಬಿ.ಎಚ್ ರವರು ಮಾತನಾಡುತ್ತ. ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಆಧ್ಯಾತ್ಮಿಕ ಭಾವೈಕ್ಯತೆ ಏಕತೆ ಮೂಡಿಸುವಂತ ಕಾರ್ಯಕ್ರಮವನ್ನ ನಿರಂತರವಾಗಿ ಈ ಸಂಸ್ಥೆಯವರು ಮಾಡಿಕೊಂಡು ಬರುತ್ತಿದ್ದಾರೆ.ವಿಶಿಷ್ಟವಾದ ವೈವಿಧ್ಯಮಯವಾಗಿ ಈ ಒಂದು ಮಹಾ ಶಿವರಾತ್ರಿವನ್ನ ಅಚ್ಚುಕಟ್ಟಾಗಿ ಸುಂದರವಾಗಿ ಆಕರ್ಷಣವಾಗಿ ಸ್ಮಿತ ಅಕ್ಕನವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಆಯೋಜನೆ ಆಗಿರುವುದು ನಿಜವಾಗಲೂ ಸಂತೋಷದ ವಿಷಯ ಎಂದು ಹೇಳಿದರು .ಕಾರ್ಯಕ್ರಮ ಕುರಿತು ಪೊಲೀಸ್ ಇಲಾಖೆ ಎಸ್ ಕೋಟೆಯವರು ಮಾತನಾಡುತ್ತಾ ಬ್ರಹ್ಮಕುಮಾರಿ ಸಂಸ್ಥೆಯವರು ಪೊಲೀಸ್ ಇಲಾಖೆ ಸಿಬ್ಬಂದಿಯರವರಿಗೆ ಸನ್ಮಾನಿಸುವಂತಹ ಕಾರ್ಯ ಜೊತೆಗೆ ಅವರ ಮೂರು ದಿನ ಅತ್ಯಂತ ಅಚ್ಚುಕಟ್ಟದ ಕಾರ್ಯಕ್ರಮ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು .ನಂತರ ಪೊಲೀಸ್ ಇಲಾಖೆಯ ನೂರಕ್ಕೂ ಮೇಲ್ಪಟ್ಟು ರಾಯಚೂರಿನ ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ರಾಜಯೋಗನಿ ಸ್ಮಿತಾ ಅಕ್ಕನವರು ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಉತ್ಸವ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳಲ್ಲಿ ಪೊಲೀಸರು ಬಹಳ ಅಚ್ಚುಕಟ್ಟಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಅವರ ಸೇವೆಯನ್ನು ಪ್ರತಿಯೊಬ್ಬರಿಗೂ ಗೊತ್ತಾಗಬೇಕು ಅವರು ಸಹ ದಿನದ 24 ಗಂಟೆ ಸೇವೆ ಮಾಡಲು ಮಾಡಲು ಸದಾ ಸಿದ್ದರಿರುತ್ತಾರೆ ಹಿನ್ನಲೆಯಲ್ಲಿ ಈ ಒಂದು ಗೌರವ ಸನ್ಮಾನವನ್ನು ಇಲಾಖೆಯವರಿಗೆ ನಮ್ಮ ಸಂಸ್ಥೆಯಿಂದ ಮಾಡಲಾಗುವುದು ಎಂದು ಹೇಳಿದರು ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಜಿಲ್ಲಾ ಪೊಲೀಸ್ ಡಿ ಆರ. ಪಡೆಯ ಉಪಾದಿಕ್ಷಕರಾದ ಪ್ರಮಾನಂದ್ ಪಿ ಘೊಡಕೆ ಪೂರ್ಣಿಮಾ ಆರ್ಯ ವೆದಿಕ ಕಾಲೇಜಿನ ಪ್ರಾಚಾರ್ಯರ ಚಂದ್ರಶೇಖರ್ ರೆಡ್ಡಿಕರಮುರುಡಿ.ಸರಕಾರಿ ಸಂಘದ ಅಧ್ಯಕ್ಷರಾದ ಕೃಷ್ಣಶಾಂವತಗೆರಿ ಶಾರದಕ್ಕ ಕೃಷಿ

ವಿಜ್ಞಾನಗಳ ವಿಶ್ವವಿದ್ಯಾಲಯದ ಡಾ ಪ್ರಭುರಾಜ್.ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ ಸೇರಿದಂತೆ ಂತೆ ಇನ್ನಿತರರು ಉಪಸಿತರಿದ್ದರು.ಈ ಚಂದ್ರಶೇಖರ್ ದಂಡಿನ್ ನೃತ್ಯ ಸಂಸ್ಥೆ ವತಿಯಿಂದ.ವಂಶಿ ತಂಡದ ವಿದ್ಯಾರ್ಥಿಗಳಿಂದ.

ಶ್ರೇಯಸ್ ರವರ ರಾಘವ ನಾಟ್ಯಾಮೃತ ಸಂಸ್ಥೆ ವತಿಯಿಂದ ಆಕರ್ಷಣೆ ವಾದ ಭರತನಾಟ್ಯ ಮತ್ತು ನೃತ್ಯ ಕಾರ್ಯಕ್ರಮವನ್ನು ನೀಡಿದರು. ಖ್ಯಾತ ಗಾಯಕರಾದ ಗುರುನಾಥ್ ಶಿವ ಸ್ಮರಣೆಯ ಗೀತೆಗಳನ್ನು ಹಾಡಿದರು.

## ಪೌಂಡೇಶನ್ 9 ನೇ ವಾರ್ಷಿಕೋತ್ಸವಖ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ

# ಸಾಧಕರನ್ನು ಗುರುತಿಸುವ ಕಾರ್ಯ ಆಗಬೇಕು: ಶಾಸಕ ಅಪ್ಪಾಜಿ ನಾಡಗೌಡ



• ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ

ಸಮಾಜದ ಹಿತಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡು ಸೇವೆಯನ್ನು ಮಾಡುತ್ತಿರುವ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯ ಸಮಾಜದಿಂದಾಗಬೇಕು ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ,ಶಾಸಕ ಅಪ್ಪಾಜಿ ನಾಡಗೌಡ ಹೇಳಿದರು. ಪಟ್ಟಣದ ಟಿಪ್ಪು ನಗರದ ಆವರಣದಲ್ಲಿ ಡಾ.ಎಪಿಜೆ ಅಬ್ದುಲ್ ಕಲಾಂ ಪೌಂಡೇಶನ್ ಇದರ 9 ನೇ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಂಡ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಫೌಂಡೇಶನ್ ದ ಪದಾಧಿಕಾರಿಗಳು ಮಾಡುವ ಕಾರ್ಯಗಳು ಶ್ಲಾಘನೀಯವಾಗಿವೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು. ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರ್ಕಲ್ ಹಾಗೂ ಮುಸ್ಲಿಂ ಬ್ಯಾಂಕ್ ನಿರ್ದೇಶಕ ಇಬ್ರಾಹಿಂ ಮನ್ಸೂರ್ ಮಾತನಾಡಿ ಫೌಂಡೇಶನ್ ಅಧ್ಯಕ್ಷ ಶಪೀಕ ಇನಾಮದಾರ ಅವರು ಜಾತ್ಯತೀತವಾಗಿ ಎಲ್ಲ ಸಮುದಾಯದವರ ಜೊತೆ ಸೇರಿ ನಿಸ್ವಾರ್ಥ ಭಾವನೆಯಿಂದ ಕೆಲಸ ಮಾಡುತ್ತಿದ್ದಾರೆ ಅವರಿಗೆ ನಾವೆಲ್ಲರೂ ಸಹಕರಿಸೋಣ ಎಂದರು. ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ಸಮಾರಂಭದ ಸಾನಿಧ್ಯವಹಿಸಿದ್ದರು. ಫೌಂಡೇಶನ್ ಅಧ್ಯಕ್ಷ ಮೊಹಮ್ಮದ್ ಶಫೀಕ ಇನಾಮದಾರ ಅಧ್ಯಕ್ಷತೆವಹಿಸಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಮುಖಂಡ ಸಿದ್ದನಗೌಡ ಪಾಟೀಲ(ನಾವವಗಿ), ಸಂಗನಗೌಡ ಲಿಂಗದಳ್ಳಿ,ಸಂಗನಗೌಡ ಅಸ್ಕಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ,ನಿರ್ದೇಶಕ ಆದಮಸಾಬ ಅತ್ತಾರ,ಮಹೆಬೂಬ ಖಾದ್ರಿ, ಮಹಲ್ ಗಲ್ಲಿ ಅಧ್ಯಕ್ಷ ಹಸನಸಾಬ ಕೊರ್ಕಿ,ಕೃಷಿ ಅಧಿಕಾರಿ ಮಹೇಶ ಜೋಶಿ, ಅಬ್ದುಲ್ ರಜಾಕ್ ಮನಗೂಳಿ, ಶಾಸಕರ ಆಪ್ತ ಕಾರ್ಯದರ್ಶಿ ಬಾಗೇವಾಡಿ, ಪುರಸಭೆ ಮಾಜಿ ಅಧ್ಯಕ್ಷ ಎಂ.ಕೆ. ಚೋರಗಸ್ತಿ,ಮೋದಿನಸಾನಗಾರ್ಜಿ, ನಾಸೀರಹುಸೇನ ಇನಾಮದಾರ, ಮೌ.ಮೊಹಮ್ಮದ್ ಯೂಸುಫ್ ಡೋಣಿ, ಕಾರ್ಯದರ್ಶಿ ಪೀರಮಹಮದ್ ಖಾಜಿ,ಅಬ್ಬಾಸಲಿ ನೀರಲಗಿ,ಶೌಕತ್ ಲಾಹೋರಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಆಸೀಫ ಕೆಂಭಾವಿ,ಸಚೀನ ಎಚ್.ಪಾಟೀಲ, ಮಹಾಂತೇಶ ಮುರಾಳ,ಸೈಯದ್ ಇರ್ಫಾನ್ ಖಾಜಿ, ಮೊಹಮ್ಮದ್ ಅಶ್ಫಾಕ್ ನಮಾಜಕಟ್ಟಿ,ಜಾವೀದಕೆಂಭಾವಿ,ಗುಲಾಮ ಡೋಣಿ,ಯಾಸೀನ ಮಕಾಂದಾರ, ಹನೀಫ ಜಮಾದಾರ,ಫೌಂಡೇಶನ್ ಪದಾಧಿಕಾರಿಗಳು ಇದ್ದರು.

"ಸಮಾಜಕ್ಕೆ ತಮ್ಮ ನಿಸ್ವಾರ್ಥ ಸೇವೆಯ ಮೂಲಕ ಅಮೂಲ್ಯ ಕೊಡುಗೆಯನ್ನು ನೀಡಿದ ಮಹನೀಯರನ್ನು ಗುರುತಿಸಿ ಸತ್ಕರಿ ಪ್ರೋತ್ಸಾಹಿಸುವುದು ಸಾಮಾಜಿಕ ಹೊಣೆಗಾರಿಕೆ ಯಾಗಿದೆ". ಅಪ್ಪಾಜಿ ನಾಡಗೌಡ ಶಾಸಕರು

# ಸಾಮೂಹಿಕ ವಿವಾಹ; ದಾಂಪತ್ಯ ಜೀವನಕ್ಕೆ ಪದಾರ್ಪಣೆ ಮಾಡಿದ 21 ನವ ಜೋಡಿಗಳು



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆ ಕುಕನೂರ ತಾಲೂಕಿನ ಕುದುರಿಮೋತಿ ಗ್ರಾಮದ ಶ್ರೀ ಜಗದ್ಗುರು ಸಂಸ್ಥಾನ ಮೈಸೂರು ಮಠದ ಜಾತ್ರಾಮಹೋತ್ಸವ,ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ ಮಹಾಮಂಗಲೋತ್ಸವ ಹಾಗೂ ಉಚಿತ ಸಾಮೂಹಿಕ ವಿವಾಹಗಳ ಕಾರ್ಯಕ್ರಮಗಳ ವೇದಿಕೆಯನ್ನು ಉದ್ದೇಶಿಸಿ ಶ್ರೀ ವಿಜಯ ಮಹಾಂತ ಮಹಾಸ್ವಾಮಿಗಳು ಮಾತನಾಡುತ್ತಾ ಪರಸ್ಪರ ಸೌಹಾರ್ದ್ಯತದಿಂದ ಬದುಕುವುದೇ ಭಾವೈಕ್ಯತೆಯಾಗಿದ್ದು ನಮ್ಮ ಗ್ರಾಮದಲ್ಲಿ ಜಾತಿ ಧರ್ಮಗಳ ಬೇದಭಾವಕ್ಕೆ ಅವಕಾಶವಿಲ್ಲ. ಇದು ಭಾವೈಕ್ಯತೆಯ ತವರೂರಾಗಿದ್ದು ಇಲ್ಲಿ ಎಲ್ಲಾ ಧರ್ಮೀಯರು ಸಹೋದರ ಸಂಬಂಧದಂತೆ ಜೀವನ ನಡೆಸುತ್ತಿರುವುದರಿಂದ ಇಲ್ಲಿ ಮೊಹರಂ ಹಾಗೂ ಹಿಂದೂ ಧಾರ್ಮಿಕ ಕಾರ್ಯಕ್ರಮಗಳು ಅದ್ದೂರಿಯಾಗಿ ಯಶಸ್ವಿಗೊಳ್ಳುತ್ತವೆ ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಸಾಮೂಹಿಕ ವಿವಾಹಗಳಲ್ಲಿ ದಾಂಪತ್ಯ ಜೀವನಕ್ಕೆ ಕಾಲಿರಿಸಿದ ನವ ಜೋಡಿಗಳನ್ನು ಉದ್ದೇಶಿಸಿ ಪರಸ್ಪರ ಅರ್ಥೈಸಿಕೊಂಡಾಗ ಮಾತ್ರ ಸುಖ ದಾಂಪತ್ಯ ಸಾಧ್ಯವಾಗಿದ್ದು ಹೆಣ್ಣು ತವರು ಮನೆಯಿಂದ ಗಂಡನ ಮನೆಗೆ ಹೋದಾಗ ಅತ್ತೆ ಮಾವಂದಿರನ್ನು ತಂದೆ–ತಾಯಿಯಂತೆ ಕಾಪಾಡಿಕೊಳ್ಳಬೇಕು ಇಲ್ಲದಿದ್ದಲ್ಲಿ ಸಂಸಾರದಲ್ಲಿ ಬರೀ ಸಾರಾ ಮಾತ್ರ ಉಳಿಯಬೇಕಾದ ಅನಿವಾರ್ಯತೆ ಎದುರಿಸಬೇಕು ಸೊಸೆಯಾಗಿ ಮನೆಗೆ ಬಂದವಳು ಮನೆ ಬೆಳಗಬೇಕೆ ಹೊರತು ಮನೆ ಒಡೆಯಬಾರದು ಎಂದು ಹಿತವಚನ ನೀಡುತ್ತಾ ಎಲ್ಲರೂ ಅರಿವು ಎನ್ನುವ ಜಾತ್ರೆಯನ್ನು ಮಾಡಿ ಸಂಭ್ರಮಿಸಿ ಎಂದು ತಿಳಿಸಿದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಈರಪ್ಪ ಕುಡುಗುಂಟಿ ಮಾತನಾಡುತ್ತಾ ವೀರಶೈವ ಮಠಗಳು ದೇಶದ ಆಸ್ತಿಯಾಗಿದ್ದು ಅವುಗಳನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ, ಮಠ ಮಾನ್ಯಗಳ ಅಭಿವೃದ್ಧಿಗೆ ಪ್ರತಿಯೊಬ್ಬರು ಕೈಜೋಡಿಸಬೇಕು ಆದರೆ ಕೆಲವು ರಾಜಕಾರಣಿಗಳು ಗೆಲ್ಲುವವರೆಗೆ ಪೂಜ್ಯರನ್ನು ಕೈ ಹಿಡಿದುಕೊಂಡು ನಂತರ ನೋಡದೆ ತಮ್ಮ ಬೇಳೆ ಬಯಸಿಕೊಳ್ಳುತ್ತಾರೆ ಅಂತಹ ರಾಜ–ಕಾ ರಣಿಗಳನ್ನು ದೂರವಿರಬೇಕು. ದೇಶದಲ್ಲಿ ಬಡವರನ್ನು ಕೈಹಿಡಿದು ಅಭಿವೃದ್ಧಿಗೊಳಿಸುತ್ತಿರುವುದು ವೀರಶೈವ ಮಠಗಳಾಗಿದ್ದು ಅಂತಹ ಮಠಗಳಲ್ಲಿ ಮೈಸೂರು ಸಂಸ್ಥಾನ ಮಠ ಪ್ರಮುಖ ಸ್ಥಾನ ಪಡೆದಿದ್ದು. ಈ ಮಠದ ಆಶ್ರಯದಲ್ಲಿ ಇರುವುದು ನಮ್ಮ ಸೌಭಾಗ್ಯ ಎಂದು ಹೇಳಿದರು. ಪ್ರಮುಖರಾದ ಕಳಕಪ್ಪ ಕಂಬಳಿ ಮಾತನಾಡಿ ಸತಿಪತಿಗಳಾದರು ಸಮನಾಗಿ ಜೀವನವನ್ನು ಅರ್ಥೈಸಿಕೊಂಡಾಗ ಜೀವನವೆಂಬ ಬಂಡಿ ಸುಗಮವಾಗಿ ಸಾಗುತ್ತದೆ, ಆದ್ದರಿಂದ ಸತಿಪತಿಗಳಲ್ಲಿ ಮೇಲು–ಕೀಳು ಎಂಬುದನ್ನು ಬಿಟ್ಟು ಪರಸ್ಪರ ಹೊಂದಾಣಿಕೆಯಿಂದ ಜೀವನ ಸಾಗಿಸಿ ಎಂದು ಕಿವಿಮಾತು ಹೇಳಿದರು. ಈ ವೇಳೆಯಲ್ಲಿ 21 ನವ ಜೋಡಿಗಳು ದಾಂಪತ್ಯ ಜೀವನಕ್ಕೆ ಪಾದರ್ಪಣೆ ಮಾಡಿದರು.

ಕುಕನೂರು ಪಟ್ಟಣದ ಪೂಜ್ಯರಾದ ಶ್ರೀ ಮಹಾದೇವ ಮಹಾಸ್ವಾಮಿಗಳು, ಶ್ರೀಧರ ಮರಡಿ ಮಠದ ಪೂಜ್ಯರಾದ ಬಸವಲಿಂಗ ಶಿವಾಚಾರ್ಯರು, ವೆಂಕಟಾಪುರ ಹಿರೇಮಠದ ಗುರು ಸಿದ್ದೇಶ್ವರ ಶಿವಾಚಾರ್ಯರು, ಚಿಕ್ಕಮಗೇರಿ ಗುರು ಶಾಂತವೀರ ಶಿವಾಚಾರ್ಯರು, ಗಜೇಂದ್ರಗಡ ಪಟ್ಟಣದ ಹಜರತ್ ನಿಜಾಮುದ್ದೀನ್ ದರ್ಗಾದ ಪೂಜ್ಯರಾದ ಅಶ್ರಫ್ ಗುರುಗಳು ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಪ್ರಮುಖರಾದ ಶ್ರೀನಾಥ ರೆಡ್ಡಿ ಧನಲಕ್ಷ್ಮಿ ಪೌಲ್ಟ್ರಿ ಫಾರ್ಮ್ ಫಾರಂ, ಮಲ್ಲನಗೌಡ ಕೋನನಗೌಡ್ರು, ಅಶೋಕ ತೆ–ೂಟದ, ಬಸವರಾಜ ರಾಜೂರ, ಅಯ್ಯನಗೌಡ ಕೆಂಚಮ್ಮನವರ್, ಅಮರೇಶ ತಲ್ಲೂರ, ಮಂಜುನಾಥ ಗಟ್ಟಪ್ಪನವರ್, ಹನುಮಂತ ಗೌಡ ದಳಪತಿ, ಈರಣ್ಣ ರಾವಣಕಿ, ಪಂಪಾಪತಿ ವಣಗೇರಿ, ಸುರೇಶ್ ಚೌಡ್ಕಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಉತ್ಸವಗಳಿಂದ ನಾಡಿನ ಕಲೆ ಸಂಸ್ಕೃತಿಯ ಬೆಳಕು ಚೆಲ್ಲುವ ಕಾರ್ಯ: ಜಾರಕಿಹೊಳಿ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಎಲ್ಲಾ ಉತ್ಸವಗಳ ಮೂಲಕ ನಾಡಿನ ಕಲೆ– ಸಂಸ್ಕೃತಿಗೆ ಪ್ರೋತ್ಸಾಹಿಸುವ ಕೆಲಸ, ಬೆಳಕು ಚೆಲ್ಲುವ ಕಾರ್ಯ ನಮ್ಮ ಸರ್ಕಾರ ಮಾಡುತ್ತಿದೆ ಎಂದು ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಹೇಳಿದರು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಕಂಪ್ಲಿ ರಸ್ತೆಯ ಶ್ರೀ ಖಾದರ್‌ಲಿಂಗ ದರ್ಗಾ ಹತ್ತಿರದ ಶ್ರೀ ದೊಡ್ಡ ಬಸವೇಶ್ವರ ವೇದಿಕೆಯಲ್ಲಿ ಆಯೋಜಿಸಲಾದ ಕುರುಗೋಡು ಉತ್ಸವಕ್ಕೆ ಸೋಮವಾರ ವಿದ್ಯುಕ್ತವಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ನಾಡಿನ ಪ್ರಮುಖ ಉತ್ಸವಗಳಾದ ಹಂಪಿ ಉತ್ಸವ, ಕಿತ್ತೂರು ಉತ್ಸವ, ಸಂಗೊಳ್ಳಿ ರಾಯಣ್ಣ ಉತ್ಸವ, ಲಕ್ಕುಂಡಿ ಉತ್ಸವ ಮತ್ತು ಮೈಸೂರು ದಸರಾ ಮಹೋತ್ಸವದಂತೆ ಪ್ರಾಚೀನ ಐತಿಹ್ಯ ಹೊಂದಿರುವ ಈ ಭಾಗದ ಕುರುಗೋಡು– ಕಂಪ್ಲಿ ಉತ್ಸವಗಳು ಇತಿಹಾಸದ ಪುಟ ಸೇರಲಿ ಎಂದು ಆಶಿಸಿದರು.ಕುರುಗೋಡು– ಕಂಪ್ಲಿ ಕ್ಷೇತ್ರಗಳಲ್ಲಿ ಹಲವಾರು ರೀತಿಯ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇನ್ನಷ್ಟು ಕೆಲಸ ಮಾಡುವ ಅವಕಾಶ ಜನತೆ ನೀಡಬೇಕು ಎಂದರು.

ಸಂಸದ ಕೆ.ರಾಜಶೇಖರ ಬಸವರಾಜ ಹಿಟ್ನಾಳ್ ಅವರು ಮಾತನಾಡಿ, ಹಂಪಿಯಂತೆ ಕುರುಗೋಡು– ಕಂಪ್ಲಿ ಸ್ಥಳಗಳು ಐತಿಹಾಸಿಕ ಮಹತ್ವದ ಕುರುಹು ನೆಲೆ ಹೊಂದಿವೆ. ಈ ಸ್ಥಳಗಳ ಐತಿಹಾಸಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಕಾರ್ಯ ಉತ್ಸವಗಳ ಮೂಲಕ ಮಾಡಲಾಗುತ್ತಿದೆ ಎಂದು ಹೇಳಿದರು.ಬಹುದಿನಗಳ ಬೇಡಿಕೆಯಾದ ಕಂಪ್ಲಿ– ಗಂಗಾವತಿ ತುಂಗಭದ್ರಾ ಸೇತುವೆಯು ಲೋಕೋಪಯೋಗಿ ಸಚಿವರ ಅಶ್ವಾಸನೆಯಿಂದ 120 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಕ್ಕೆ ಅನುಮೋದನೆ ದೊರಕಿಸಿಕೊಂಡಿರುವುದು ಈ ಕ್ಷೇತ್ರದ ಶಾಸಕರ ಆಸಕ್ತಿ, ಕ್ರಿಯಾಶೀಲ ಕೆಲಸ ವ್ಯಕ್ತಿತ್ವ ಬಿಂಬಿಸುತ್ತಿದೆ ಎಂದರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಮಾತನಾಡಿ, ಎಲ್ಲಾ ಇಲಾಖೆಗಳ ಸಚಿವರನ್ನು ವಿಶ್ವಾಸಕ್ಕೆ ಪಡೆದು ರಾಜ್ಯದ 224 ಕ್ಷೇತ್ರಗಳಲ್ಲಿಯೇ ಅತಿಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡುತ್ತಿರುವ ಶಾಸಕರೆಂದರೆ ಅದು ಜೆ.ಎನ್.ಗಣೇಶ್;ಈ ಭಾಗದಲ್ಲಿ ಅಭಿವೃದ್ಧಿಯ ಪರ್ವವೇ ನಡೆಯುತ್ತಿದೆ ಎಂದು ಹೇಳಿದರು.ನಮ್ಮ ಕುಟುಂಬಕ್ಕೆ ರಾಜಕೀಯ ನೆಲೆ ನೀಡಿರುವುದು ಆಗಿನ ಈ ಕುರುಗೋಡು ಕ್ಷೇತ್ರ. ಇಲ್ಲಿ ನಮ್ಮ ತಂದೆಯೂ ಸಹ ಹಲವಾರು ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಶಾಸಕ ಜೆ.ಎನ್.ಗಣೇಶ್ ಅವರು ಮಾಡುತ್ತಿದ್ದಾರೆ ಎಂದರು.ಕಂಪ್ಲಿ

ಶಾಸಕ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ(ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆಗಿರುವ ಜೆ.ಎನ್.ಗಣೇಶ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಿಂಧರ ನಾಡು ಕುರುಗೋಡು ಪಟ್ಟಣದ ಇತಿಹಾಸ ಈಗಿನ ಪೀಳಿಗೆಗೆ ತಿಳಿಯಪಡಿಸುವ ಕೆಲಸವಾಗಬೇಕು ಎಂಬುದು ಕ್ಷೇತ್ರದ ಜನರ ಬಹುದಿನಗಳ ಒತ್ತಾಸೆಯಾಗಿತ್ತು. ಸತತ ಮೂರು ತಿಂಗಳ ಪ್ರಯತ್ನದಿಂದ ಉತ್ಸವ ಆಯೋಜನೆಗೆ ಕಾಲ ಈಗ ಕೂಡಿಬಂದಿತು ಎಂದು ಹೇಳಿದರು.

ಅದೇರೀತಿಯಾಗಿ ಕುರುಗೋಡು ಪಟ್ಟಣದಲ್ಲಿ 2 ಲೇನ್ ರಸ್ತೆ, ಕುರುಗೋಡಿನ ಕೋಳೂರು ಕ್ರಾಸ್ ನಿಂದ ಕಂಪ್ಲಿಯವರೆಗೆ ಗುಂಡಿಮುಕ್ತ ರಸ್ತೆನಿರ್ಮಾಣ, ಶಾಲಾ–ಕಾಲೇಜುಗಳು, ವಸತಿನಿಲಯಗಳು ಸೇರಿದಂತೆ ಹಲವಾರು ರೀತಿಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದರು.ರೈತರ ಸಮಸ್ಯೆ ಎಂದರೆ ಮಣಿಯುವ ಶಾಸಕನಲ್ಲ, ಹೇಳುವವನಲ್ಲ ಬದಲಾಗಿ ಕೆಲಸ ಮಾಡಿ ತೋರಿಸುವವ ನಾನು. ಕ್ಷೇತ್ರದ ಜನತೆಯ ಪ್ರೀತಿ ವಿಶ್ವಾಸದಿಂದ ಎರಡು ಬಾರಿ

ಶಾಸಕನಾಗಲು ಅವಕಾಶ ನೀಡಿದ್ದೀರಿ; ಮುಂಬರುವ ದಿನಗಳಲ್ಲಿ ಇನ್ನಷ್ಟು ಸೇವೆ ಮಾಡುವ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.ಇದಕ್ಕೂ ಮುನ್ನ ಸಮಾರಂಭದಲ್ಲಿ ಗಣ್ಯರು “ಕುರುಗೋಡು ಉತ್ಸವ ಐತಿಹಾಸಿಕ ದೇವಸ್ಥಾನಗಳ ದರ್ಶನ” ಪುಸ್ತಕ ಬಿಡುಗಡೆ ಮಾಡಿದರು.

ಈ ವೇಳೆ ಬೆಳಗಾವಿ ಉತ್ತರ ಕ್ಷೇತ್ರ ಶಾಸಕ ಆಸೀಫ್ ಸೇಟ್, ಕಿತ್ತೂರು ಕ್ಷೇತ್ರ ಶಾಸಕ ಬಾಬಾ ಸಾಹೇಬ್ ಪಾಟೀಲ್, ಕುರುಗೋಡು ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ಪುರಸಭೆ ಉಪಾಧ್ಯಕ್ಷ ಚನ್ನಪಟ್ಟಣ

ಮಲ್ಲಿಕಾರ್ಜುನ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಸಹಾಯಕ ಆಯುಕ್ತ ರಾಜೇಶ್. ಹೆಚ್.ಡಿ., ಕುರುಗೋಡು ತಹಶೀಲ್ದಾರ ನರಸಪ್ಪ, ಕಂಪ್ಲಿ ತಹಶೀಲ್ದಾರ ಜೂಗಲ ಮಂಜುನಾಯ್ಕ, ಸಂಡೂರು ತಹಶೀಲ್ದಾರ ಅನಿಲ್ ಕುಮಾರ್ ಸೇರಿದಂತೆ ಪುರಸಭೆ ಸದಸ್ಯರು, ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

## ಹುನಗುಂದ ಪೋಲಿಸರ ಯಶಸ್ವಿ ಕಾರ್ಯಾಚರಣೆ
# 16 ಲಕ್ಷ ರೂ.ಮೌಲ್ಯದ 27 ಬೈಕ್ ವಶ ಮೂವರ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯ ಹುನಗುಂದ ಪೋಲಿಸರು ನಡೆಸಿದ ಕಾರ್ಯಾಚರಣೆಯಲ್ಲಿ 16 ಲಕ್ಷ ರೂ.ಮೌಲ್ಯದ ಕಳುವಾಗಿದ್ದ 27 ಬೈಕ್ ಗಳನ್ನು ವಶಕ್ಕೆ ಪಡೆಯಲಾಗಿದ್ದು, ಮೂವರನ್ನು ವಶಕ್ಕೆ ಪಡೆದು ನ್ಯಾಯಾಂಗಕ್ಕೆ ಒಪ್ಪಿಸಲಾಗಿದೆ.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥಗೋಯೆಲ್ ಹುನಗುಂದದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, ತನ್ನ ಬೈಕ್ ಕಳೆದುಕೊಂಡಿದ್ದ ಹುನಗುಂದ ತಾಲ್ಲೂಕಿನ ಹಡಗಲಿ ಗ್ರಾಮದ ಸಂಗಪ್ಪಬಸಪ್ಪಅಂಗಡಿ ಪೋಲಿಸರಿಗೆ ದೂರು ನೀಡಿದ ಪ್ರಯುಕ್ತ ತನಿಖೆಗೆ ಮುಂದಾದಾಗ ಬೈಕ್ ಕಳುವಿನ ಜಾಲದ ಮಾಹಿತಿ ಸಿಕ್ಕು ಜಾಲದ ಬೆನ್ನತ್ತಿದಾಗ ಇದೆಲ್ಲವೂ ಬೆಳಕಿಗೆ ಬಂದಿದೆ ಎಂದು ತಿಳಿಸಿದರು.

ಬೈಕ್ ಕಳ್ಳತನದ ಪ್ರಕರಣದಲ್ಲಿ ಜಿಲ್ಲೆಯ ಅಮೀನಗಡ ಪೋಲಿಸರಿಂದ ಬಂಧನಕ್ಕೊಳಪಟ್ಟು ನ್ಯಾಯಾಂಗ ವಶದಲ್ಲಿರುವ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಸತ್ಯಂಪೇಟೆಯ ಹುಲಗಪ್ಪ ಹನಮಂತ ಮೋಡಕೇರ್(22) ಈತನನ್ನು ಪೋಲಿಸ್ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ನೀಡಿದ ಮಾಹಿತಿಯ ಮೇರೆಗೆ ರಾಯಚೂರ ಜಿಲ್ಲೆಯ ದೇವದುರ್ಗದ ಹನಮಂತ ರಾಮಣ್ಣ ಮೋಡಕೇರ(22) ಹಾಗೂ ಆಂಜನೇಯ ಹನಮಂತರಾಯ ಗಾಳಿ(30) ಅವರನ್ನು ಬಂಧಿಸಲಾಗಿದೆ ಎಂದು ಎಸ್ಪಿ ತಿಳಿಸಿದರು.

ಬಂಧಿತ ಆರೋಪಿಗಳಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯದಿಂದ ಕಳುವು ಮಾಡಲಾಗಿದ್ದ 7 ಬಜಾಜ್ ಪಲ್ಸರ್, 12 ಹೊಂಡಾ ಯುನಿಕಾರ್ನ, 2 ಹಿರೋ ಹೊಂಡಾ ಫ್ಯಾಷನ್, 1 ಹಿರೋ ಹೊಂಡಾ ಸ್ಪ್ಲೆಂಡರ್ ಹೀಗೆ 27 ಮೋಟಾರ ಸೈಕಲ್ಲಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ ಎಂದು ಅವರು ತಿಳಿಸಿದರು.

ಬೈಕ್ ಕಳ್ಳತನದ ದೊಡ್ಡ ಜಾಲವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿರುವ ಹುನಗುಂದ ಪೋಲಿಸ್ ವಿಭಾಗದ ಡಿವೈಎಸ್ಪಿ ಸಂತೋಷ ಬನ್ನಟ್ಟಿ, ಸಿಪಿಐ ಶರಣಬಸಪ್ಪ ಅಜೂರ, ಪಿಎಸ್ಐ ಸಿದ್ದಾರೂಢ ಆಲದಕಟ್ಟಿ, ಎನ್.ಎಸ್.ಸಿಮಾನಿ ನೇತೃತ್ವದ ತಂಡದ ಕಾರ್ಯವನ್ನು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಪ್ರಶಂಸಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

# ನಾಳೆ ಶಿವಾಜಿ ಮಹಾರಾಜರ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಫೆಬ್ರವರಿ 19 ರಂದು ಬೆಳಿಗ್ಗೆ 11 ಗಂಟೆಗೆ ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕ ಪ್ರಕಾಶ ಹುಕ್ಕೇರಿ, ಬೀಳಗಿ ಶಾಸಕ ಜೆ.ಟಿ.ಪಾಟೀಲ, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿದಂತೆ ಜಿಲ್ಲೆಯ ಎಲ್ಲ ಶಾಸಕರು, ವಿಧಾನ ಪರಿಷತ್ ಶಾಸಕರು ಹಾಗೂ ಇತರೆ ಗಣ್ಯಮಾನ್ಯರು ಆಗಮಿಸಲಿದ್ದಾರೆ.

ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಚಂದ್ರಶೇಖರ ಕಾಳನ್ನವರ ಉಪನ್ಯಾಸ ನೀಡಲಿದ್ದಾರೆ.

# ಪ್ರಗತಿ ಪರಿಶೀಲನಾ ಸಭೆ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಜಿಲ್ಲಾ ಅಲ್ಪಾಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಎರಡನೇ ಮತ್ತು ಮೂರನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ಅಧ್ಯಕ್ಷತೆಯಲ್ಲಿ ಫೆ.19 ರಂದು ರಂದು ಬೆಳಿಗೆ 11 ಗಂಟೆಗೆ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಜು ಅವರು ತಿಳಿಸಿದ್ದಾರೆ.

# ಹೆಚ್ಐವಿ ಪೀಡಿತರಿಗೆ ಬೆಂಬಲ ನೀಡೋಣ: ಗಿರೀಶ್

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ಹೆಚ್ಐವಿ ಪೀಡಿತ ವ್ಯಕ್ತಿಗಳೊಂದಿಗೆ ಮಾನವೀಯತೆಯಿಂದ ವರ್ತಿಸಿ ಅವರ ಮನೋಬಲವನ್ನು ಹೆಚ್ಚಿಸಬೇಕು ಎಂದು ಹೆಚ್ಐವಿ ಜಿಲ್ಲಾ ಮೇಲ್ವಿಚಾರಕ ಗಿರೀಶ್ ಅವರು ಹೇಳಿದರು.

ನಗರದ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್‌ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಾಹಕ ಘಟಕ ವತಿಯಿಂದ ಏಡ್ಸ್ ತಡೆ, ಹಾರೈಕೆ ಬೆಂಬಲ ಹಾಗೂ ಚಿಕಿತ್ಸೆ ಮತ್ತು ಸೇವೆಗಳ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಅವರು ಮಾತನಾಡಿದರು.

ಏಡ್ಸ್ ಹರಡಲು ಪ್ರಮುಖ ಕಾರಣಗಳು ಮತ್ತು ಏಡ್ಸ್ ಹರಡದಂತೆ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಇಂದಿನ ಯುವ ಪೀಳಿಗೆಯಾದ ವಿದ್ಯಾರ್ಥಿಗಳು ವಿಶೇಷ ಜಾಗೃತಿ ಹೊಂದಬೇಕು ಎಂದರು.

18 ವರ್ಷ ತುಂಬಿದವರು ರಕ್ತದಾನ ಮಾಡಿದರೆ ಅವರ ಆರೋಗ್ಯ ಅವರ ಆಯಸ್ಸು, ನೆನಪಿನ ಶಕ್ತಿ ವೃದ್ಧಿಸುತ್ತದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ತಮ್ಮ ಆರೋಗ್ಯಕ್ಕೆ ಅನುಗುಣವಾಗಿ ರಕ್ತದಾನ ಮಾಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಪ್ರೊ.ಇಸ್ಮಾಯಿಲ್ ಮಕಂದಾರ್, ಉಪನ್ಯಾಸಕರಾದ ಡಾ.ದಸ್ತಗಿರಿಸಾಬ್, ಬಸಪ್ಪ.ಕೆ., ಮಾರೆಪ್ಪ, ಡಾ.ಮಹಾಂತೇಶ್, ಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ: ಆಕ್ಷೇಪೆ ಸಲ್ಲಿಸಲು ಅವಕಾಶ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಅಧೀನದ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಆಯ್ಕೆಗಾಗಿ ತಾತ್ಕಾಲಿಕವಾಗಿ ಆಯ್ಕೆಗೊಂಡ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಸಹಾಯಕಿಯರ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದಲ್ಲಿ ಮಾ.03 ರ ಸಂಜೆ 5.30 ರೊಳಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ

ಯೋಜನಾಧಿಕಾರಿಗಳ ಕಚೇರಿಗಳಿಗೆ ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಬಹುದು.

ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಹಾನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯತ್, ಪುರಸಭೆ, ಗ್ರಾಮ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಹಾಗೂ ಜಿಲ್ಲಾಧಿಕಾರಿಯವರ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಸಲಾಗಿದೆ.

ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳಿಗೆ ಉತ್ತಮ ಸಂಸ್ಕಾರ, ಶಿಕ್ಷಣ ಕೊಡಿಸಿ–ಖೋತ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಪಾಲಕರು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ಕೊಡಬೇಕು. ಕಷ್ಟ ಎನಿಸಿದರೂ ಮಕ್ಕಳಿಗೆ ಶಿಕ್ಷಣ ಕೊಡಿಸುವುದನ್ನು ನಿಲ್ಲಿಸಬಾರದು ಎಂದು ಶಿಕ್ಷಣ ಸಂಯೋಜಕ ಜಗದೀಶ ಖೋತ ಹೇಳಿದರು.

ಜಿಲ್ಲೆಯ ಬೀಳಗಿ ತಾಲೂಕಿನ ಜಾನಮಟ್ಟಿ ಗ್ರಾಮದಲ್ಲಿ ನಡೆದ ಅಡವಿಸಿದ್ಧೇಶ್ವರ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿ, ಶಿಕ್ಷಕರು ಪಾಠದ ಜೊತೆಗೆ ಮಕ್ಕಳಿಗೆ ಮಾನವೀಯ ಮೌಲ್ಯಗಳ ಕುರಿತು ತಿಳಿಸಿ ಕೊಡಬೇಕೆಂದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಮಾತನಾಡಿ, ಸಂಸ್ಕಾರ ಇರದಿದ್ದರೆ ಎಷ್ಟೇ ಉನ್ನತ ಶಿಕ್ಷಣ ಪಡೆದರೂ ಪ್ರಯೋಜನವಿಲ್ಲ. ಪಾಲಕರು ಮಕ್ಕಳು ಚಿಕ್ಕವಯಸ್ಸಿನಲ್ಲಿ ತಪ್ಪು ಮಾಡಿದರೆ ಬುದ್ಧಿ ಕಲಿಸಬೇಕು. ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿರಿ. ಓದುವಾಗ ಧಾರವಾಹಿ ನೋಡುವುದರಿಂದ ಮಕ್ಕಳ ಶೈಕ್ಷಣಿಕ ಹಿನ್ನಡೆಗೆ ಪಾಲಕರೇ ನೇರ ಕಾರಣರಾಗಬೇಕಾಗುತ್ತದೆ ಎಂದರು.

ಮುಖ್ಯಶಿಕ್ಷಕರಾಗಿ ಕಾರ್ಯನಿರ್ವಹಿಸಿದ ರುಕ್ಮಿಣಿ ಬರಗಾಲ ಮತ್ತು ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ಮತ್ತು ವಿವಿಧ ಚಟುವಟಿಕೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಮುಖ್ಯಗುರುಮಾತೆ ಸುಧಾ ಗೌಡರ ವರದಿ ವಾಚಿಸಿದರು.

ಅಡವಿಸಿದ್ಧೇಶ್ವರ ಪ್ರಾಥಮಿಕ ಶಾಲೆಯ ಅಧ್ಯಕ್ಷ ಜಗದೀಶ ವಟವಟಿ ಅಧ್ಯಕ್ಷತೆ ವಹಿಸಿದ್ದರು. ಸಂಗನಬಸಯ್ಯ ಹಿರೇಮಠ ನೇತೃತ್ವ ವಹಿಸಿದ್ದರು. ಅತಿಥಿಗಳಾಗಿ ಎಂಪಿಎಸ್ ಪ್ರಭಾರ ಮುಖ್ಯಶಿಕ್ಷಕ ಎಸ್.ಎಂ.ಕಡ್ಲಿಮಟ್ಟಿ, ಶಾಲೆಯ ಸದಸ್ಯರಾದ ಶಂಕರ ಡಬರಿ, ವಿಶಾಲ ಕೋಟಿ, ನಾರಾಯಣ ಕಂಬಾರ, ಯಲಗೂರೇಶ ಬಂಡಿ, ತಿಮ್ಮಣ್ಣ ಬೆಣ್ಣೂರ, ಬಸವರಾಜ ಸಂಶಿ, ಚಂದ್ರವ್ವ ಮಾದರ, ದಯಾನಂದ ಮಾದರ ಮತ್ತಿತರರಿದ್ದರು.

ಬೋರಮ್ಮ ಮುರನಾಳ ಸ್ವಾಗತಿಸಿದರು. ರಮೇಶ ಸನ್ನಿ ನಿರೂಪಿಸಿದರು. ದೀಪಾ ಹಣಮರ ವಂದಿಸಿದರು.

# ಭಕ್ತಿಮಾರ್ಗದಲ್ಲಿ ನಡೆದು ಜೀವನ ಸಾರ್ಥಕ ಮಾಡಿಕೊಳ್ಳಿ: ಜೋಗಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಸತ್ಕಾರ್ಯಗಳಿಗೆ ದಾನ ಧರ್ಮಗಳನ್ನು ಮಾಡುವುದರಿಂದ ಪಾಪ ನಾಶವಾಗುತ್ತದೆ. ಭಕ್ತಿಯಿಂದ ನಡೆದುಕೊಂಡ ಭಕ್ತರ ಕೋರಿಕೆಗಳನ್ನು ಈಡೇರಿಸಿ ಉದ್ಧರಿಸಲೆಂಬ ಸಂಕಲ್ಪದಿಂದ ಕಾಶಿಯಿಂದ ಈಶ್ವರ ಲಿಂಗವನ್ನು ತಂದು ಪ್ರತಿಷ್ಠಾಪಿಸಲಾಗಿದೆ ಎಂದು ಕಾಶಿಲಿಂಗೇಶ್ವರ ದೇವಾಲಯದ ಅರ್ಚಕ ರಂಗಪ್ಪ ಜೋಗಿ ಹೇಳಿದರು.

ಜಿಲ್ಲೆಯ ಬೀಳಗಿ ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಕಾಶಿಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಶಿವಭಜನೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿ, ಭಕ್ತಿಯಿಂದ ನಡೆದು–ಕೊಂಡು ಬದುಕನ್ನು ಉದ್ಧಾರ ಮಾಡಿಕೊಂಡು ಮಾನವ ಜನ್ಮ ಸಾರ್ಥಕ ಮಾಡಿಕೊಳ್ಳಬೇಕೆಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಧಾರ್ಮಿಕ ಮತ್ತು ವೈಜ್ಞಾನಿಕ ಮಹತ್ವವನ್ನು ಹೊಂದಿರುವ ಮಹಾಶಿವರಾತ್ರಿ ಹಿಂದೂ ಧರ್ಮದ ಪವಿತ್ರ ಹಬ್ಬವಾಗಿದ್ದು, ಶಿವ–ಪಾರ್ವತಿಯರ ವಿವಾಹವಾದ ದಿನ ಮತ್ತು ಶಿವ ಲಿಂಗರೂಪಿಯಾಗಿ ಅವತರಿಸಿದ ದಿನವಾಗಿದೆ ಎಂದು ಹೇಳಿದರು.

ಮಹಾಶಿವರಾತ್ರಿಯಂದು ಉಪವಾಸ, ಜಾಗರಣೆ ಮತ್ತು ಶಿವ ಪೂಜೆಗೆ ವಿಶೇಷ ಮಹತ್ವವಿದೆ. ಶಿವನಾಮ ಸ್ಮರಣೆ, ಶಿವಭಜನೆ ಮತ್ತು ಧ್ಯಾನದಲ್ಲಿ ತೊಡಗಿಸಿಕೊಳ್ಳುವುದು ಶಿವನ ಕೃಪೆಯಿಂದ ಇಷ್ಟಾರ್ಥಗಳು ಸಿದ್ಧಿಸುತ್ತವೆ. ಪರಮಾತ್ಮನ ಒಲುಮೆಗೆ ಶಿವಭಜನೆಯನ್ನು ಭಕ್ತಿಯಿಂದ ಶಾಸ್ತ್ರೀಯ ಪದ್ಧತಿ ಆಧಾರದ ಮೇಲೆ ಮಾಡಬೇಕು. ಮದ್ಯಪಾನ ಮಾಡಿ ಶಿವಭಜನೆ ಮಾಡಬಾರದು. ಸಿನಿಮಾ ದಾಟಿಯಲ್ಲಿಯೂ ಕೂಡ ಶಿವಭಜನೆ ಮಾಡುವುದರಿಂದ ಯಾವುದೇ ಫಲ ದೊರೆಯದು ಎಂದು ಸಾವಕಾರ ಹೇಳಿದರು.

ಪ್ರಾಚಾರ್ಯ ಡಾ.ಎಸ್.ಕೆ.ಬಂಗಾರಿ ಮಾತನಾಡಿ, ಮಹಾಶಿವರಾತ್ರಿಯ ಇಡೀ ದಿನ ನಿರ್ಜಲ ಉಪವಾಸ ಆಚರಿಸುವುದರಿಂದ ದೇಹ ಮತ್ತು ಮನಸ್ಸಿನ ಸಮತೋಲನ ಹೆಚ್ಚುತ್ತದೆ. ಬಿಲ್ವಪತ್ರೆ ಅರ್ಪಣೆ ಮತ್ತು ಓಂ ನಮಃ ಶಿವಾಯ ಮಂತ್ರ ಜಪಿಸುವುದರಿಂದ ಕಷ್ಟಕಾರ್ಪಣ್ಯಗಳು ದೂರಾಗಿ ಭಗವಂತನ ಅನುಗ್ರಹ ಲಭಿಸುತ್ತದೆ. ಇದಕ್ಕೆ ಬೇಡರ ಕಣ್ಣಪ್ಪನ ಮುಗ್ಧ ಭಕ್ತಿಯೇ ಸಾಕ್ಷಿ ಎಂದು ಉದಾಹರಿಸಿದರು.

ವೇದಿಕೆ ಮೇಲೆ ಮುಖಂಡರಾದ ಬಾಬು ಕೆಂಪಲಿಂಗಣ್ಣವರ, ವೀರೇಶ ಖೋತ, ಕುಮಾರಗೌಡ ಪಾಟೀಲ, ಆನಂದ ಖೋತ, ಮಲ್ಲು ಹೋಳಿ, ಬಸು ಪಾವಡದ, ಮುನ್ನಾ ಮುಲ್ಲಾ, ಸದಾಶಿವ ಆಗೋಜಿ ಮತ್ತಿತರರಿದ್ದರು.

# ವೈಜ್ಞಾನಿಕ ಮೀನುಗಾರಿಕೆ ಲಾಭದಾಯಕ




• ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಸೀಗಡಿ ಸಾಕಣೆ, ಪಂಜರ ಮೀನುಗಾರಿಕೆ, ಜಲಚರ ಸಾಕಣಿಕೆ ಹಾಗೂ ಶೆಟ್ಲೆ ಸಾಕಣೆ ಚಟುವಟಿಕೆಗಳನ್ನು ವೈಜ್ಞಾನಿಕವಾಗಿ ಅಳವಡಿಸಿಕೊಳ್ಳುವುದರಿಂದ ಮೀನುಗಾರರ ಆದಾಯವನ್ನು ಹೆಚ್ಚಿಸಬಹುದಾಗಿದೆ .

ಕರಾವಳಿ ಜಲಕೃಷಿ ಪ್ರಾಧಿಕಾರದ ನಿಯಮಾವಳಿಗಳನ್ನು ಪಾಲಿಸುವುದು ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾಗಿದೆ ಎಂದು ಮೀನುಗಾರಿಕೆ ನಿರ್ದೇಶಕರು ಹೇಳಿದರು.

ಅವರು ಇತ್ತೀಚೆಗೆ ಕುಮಟಾದ ಮಂದಾರ ಎಲೈಟ್ ಸಭಾಂಗಣದಲ್ಲಿ, ಕರಾವಳಿ ಜಲಕೃಷಿ ಪ್ರಾಧಿಕಾರ ಚೆನ್ನೈ ಹಾಗೂ ಮೀನುಗಾರಿಕೆ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ , ಸುಸ್ಥಿರ ಕರಾವಳಿ ಜಲಕೃಷಿ ವಿಧಾನಗಳ

ಉತ್ತೇಜನಕ್ಕಾಗಿ ಒಂದು ದಿನದ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ತಾಂತ್ರಿಕ ಅಧಿವೇಶನದಲ್ಲಿ ಕರಾವಳಿ ಜಲಕೃಷಿ ಪ್ರಾಧಿಕಾರ ಅನುಮತಿ ಪ್ರಕ್ರಿಯೆ ಮತ್ತು ಎನ್ಎಸ್‌ಡಬ್ಲೂಎಸ್ ನೋಂದಣಿ ವಿಧಾನ, ಒಕಇಆಂ ವತಿಯಿಂದ ಸುಸ್ಥಿರ ಜಲಕೃಷಿ ಪದ್ಧತಿಗಳು ಮತ್ತು ರಫ್ತು ಗುಣಮಟ್ಟದ ಮಾನದಂಡಗಳು, ಋಅಂಖ–ಅಓಈಖಋ ಮೂಲಕ ಸಮುದ್ರ ಮೀನು ಮರಿ ಉತ್ಪಾದನೆ ಹಾಗೂ ಸಮುದ್ರ

ಕೃಷಿ ಅವಕಾಶಗಳು, ಸಿ.ಆರ್‌ಝಡ್ ಅಧಿಸೂಚನೆ–2019ರ ನಿಯಮಗಳು ಮತ್ತು ಕರ್ನಾಟಕ ರಾಜ್ಯದ ಹೊಸ ಸಮುದ್ರ ಕೃಷಿ ನೀತಿ ಕುರಿತು ಸಂಕ್ಷಿಪ್ತ ಮಾಹಿತಿ ನೀಡಲಾಯಿತು. ಸಂವಾದ ಅಧಿವೇಶನದಲ್ಲಿ ಮೀನುಗಾರರು ಹಾಗೂ ಅಧಿಕಾರಿಗಳೊಂದಿಗೆ ಜಲಕೃಷಿಯಲ್ಲಿ

ಎದುರಾಗುವ ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳ ಕುರಿತು ಚರ್ಚಿಸಲಾಯಿತು.

ಕಾರ್ಯಾಗಾರವು ಸುಸ್ಥಿರ ಕರಾವಳಿ ಜಲಕೃಷಿ ಪದ್ಧತಿಗಳ ಬಗ್ಗೆ ಅರಿವು ಮೂಡಿಸುವಲ್ಲಿ ಹಾಗೂ ಮೀನುಗಾರರಿಗೆ ತಾಂತ್ರಿಕ ಜ್ಞಾನ ವಿಸ್ತರಣೆಯಲ್ಲಿ ಸಹಕಾರಿಯಾಯಿತು.

ಕಾರ್ಯಾಗಾರದಲ್ಲಿ ಮೀನುಗಾರಿಕೆ ಇಲಾಖೆ, ಕರಾವಳಿ ಜಲಕೃಷಿ ಪ್ರಾಧಿಕಾರ,

ಋಅಂಖ–ಅಓಈಖಋ, ಒಕಇಆಂ ಹಾಗೂ ಸಿ.ಆರ್‌ಝಡ್ ಇಲಾಖೆಗಳ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದು, ಕೆನರಾ ಬ್ಯಾಂಕ್‌ನ ಸಹಾಯಕ ಮಹಾಪ್ರಬಂಧಕರು ಹಾಗೂ ಜಿಲ್ಲಾ ಮುಖ್ಯ ವ್ಯವಸ್ಥಾಪಕರು ಉಪಸ್ಥಿತರಿದ್ದರು.

ಕರಾವಳಿ ಭಾಗದ ಸುಮಾರು 120 ಜಲಕೃಷಿ ರೈತರು ಹಾಗೂ ಇಲಾಖೆಯ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಗ್ಯಾರಂಟಿ ಯೋಜನೆ ಉತ್ಸವ ಅಚ್ಚುಕಟ್ಟಾಗಿ ನಡೆಸಲು ಡಿಸಿ ಸೂಚನೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನವನಗರದ ಜಿಲ್ಲಾ ಕಲಾಭವನದಲ್ಲಿ ಫೆಬ್ರವರಿ 20 ರಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಕಾರ್ಯಾಗಾರ(ಉತ್ಸವ) ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯವಾದ ಎಲ್ಲ ಸಿದ್ದತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಮಂಗಳವಾರ ಜರುಗಿದ ಪಂಚ ಗ್ಯಾರಂಟಿ ಯೋಜನೆಯ ಕಾರ್ಯಾಗಾರ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ವ್ಯವಸ್ಥಿತ ರೀತಿಯಲ್ಲಿ ಕಾರ್ಯಕ್ರಮ ನಡೆಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗಳಿಗೆ ವಹಿಸಿಕೊಟ್ಟ ಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವಂತೆ ಸೂಚನೆ ನೀಡಿದರು.

ರಾಜ್ಯ ಸರಕಾರ ಅನುಷ್ಠಾನಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಸಾರಲು ಹಾಗೂ ಅರ್ಹ ಫಲಾನುಭವಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಗ್ಯಾರಂಟಿ ಯೋಜನೆ ಉತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

3 ಸಾವಿರಕ್ಕೂ ಹೆಚ್ಚು ಜನ ಯೋಜನಾ ಫಲಾನುಭವಿಗಳು ಭಾಗವಹಿಸುತ್ತಿದ್ದು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್‌ಗಳ ವ್ಯವಸ್ಥೆ ಮಾಡುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಜಿಲ್ಲಾ ಸಂಚಾರಿ ಅಧಿಕಾರಿಗಳಿಗೆ ತಿಳಿಸಿದರು. ಕಲಾಭವನದ ಆವರಣದಲ್ಲಿ ಗ್ಯಾರಂಟಿ ಯೋಜನೆಗಳ ಮಾಹಿತಿ ಸೇರಿದಂತೆ ವಿವಿಧ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಹಾಕುವ ವ್ಯವಸ್ಥೆ ಮಾಡಬೇಕು ಎಂದು ಹೇಳಿದ ಸಿಇಓ ಕುರೇರ, ಎಂದರು. ಗ್ಯಾರಂಟಿ ಯೋಜನೆಯ ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ಪಟ್ಟಿ ನೀಡಿದಲ್ಲಿ ಅವರಿಗೆ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಜಿಲ್ಲೆಯ ಎಲ್ಲ ತಾಲೂಕಾ ಮಟ್ಟದ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳ ಕರೆತರುವ ಕೆಲಸ ಮಾಡಬೇಕು. ಉತ್ಸವದಲ್ಲಿ ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ಕ್ರಮಕೈಗೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷೆ ಜಯಶ್ರೀ ತಿಮ್ಮಾಪೂರ, ರಫೀಕ್ ಇಸ್ಮಾಯಿಲ್‌ಸಾಬ್ ಬೈರಕದಾರ್, ಶಿವಪ್ಪ ಕೊಣೇರಿ, ರವೀಂದ್ರ ಯಡಹಳ್ಳಿ, ಜಿ.ಪಂ ಯೋಜನಾ ನಿರ್ದೇಶಕ ಎಸ್.ಎಂ.ಕಾಂಬಳೆ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಸೇರಿದಂತೆ ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರು, ಯೋಜನೆ ಅನುಷ್ಠಾನ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಂತ ಸೇವಾಲಾಲರು ಬಂಜಾರರ ಪಾಲಿನ ಭಗವಂತ: ಗಾಳಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಸಂತ ಸೇವಾಲಾಲರು ಮನುಕುಲದ ಉದ್ದಾರಕ್ಕಾಗಿ ಶ್ರಮಿಸಿದ ಯುಗಪುರುಷರಾಗಿದ್ದಾರೆ. ಅವರ ತತ್ವಾದರ್ಶಗಳು ಇಂದಿನ ಯುವಜನತೆಗೆ ಸ್ಪೂರ್ತಿ ಮತ್ತು ಪ್ರೇರಣೆಯಾಗಿವೆ. ಬಂಜಾರರ ಪಾಲಿನ ಭಗವಂತ ಸಂತ ಸೇವಾಲಾಲರು ಎಂದು ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಹೇಳಿದರು.

ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾರ್ಥನಾ ವಲಯದ ಆವರಣದಲ್ಲಿ ಸೋಮವಾರ ನಡೆದ ಸಂತ ಸೇವಾಲಾಲರ 287 ನೇ ಜಯಂತಿ ಕಾರ್ಯಕ್ರಮದಲ್ಲಿ ಸಂತ ಸೇವಾಲಾಲರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಶ್ರಮ ಸಮುದಾಯದ ಕುಟುಂಬದಲ್ಲಿ ಹುಟ್ಟಿದ ಸಂತ ಸೇವಾಲಾಲ್ ಅವರು ಮೂಢನಂಬಿಕೆ ತೊಡೆದು ಹಾಕಲು ಮತ್ತು ಶೈಕ್ಷಣಿಕವಾಗಿ ಜಾಗೃತಿ ಮೂಡಿಸಲು ಶ್ರಮಿಸಿದವರು. ಅಲೆಮಾರಿ ಬಂಜಾರ ಸಮುದಾಯದಲ್ಲಿ ಹುಟ್ಟಿ ಬಂದ ಚಾರಿತ್ರಿಕ ಯುಗಪುರುಷ, ಸಂತ, ಚಾರಣ ಕವಿ, ಕಾಲಜ್ಞಾನಿ ಮಹಾತ್ಮರಾಗಿದ್ದಾರೆ. ಸಮಾಜದ ಸುಧಾರಣೆಯೊಂದಿಗೆ ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸೆಯಲ್ಲಿ ಅಪಾರ ಜ್ಞಾನ ಸಂಪಾದಿಸಿದ್ದರು ಎಂದು ಅವರು ಹೇಳಿದರು. ಸೇವಾಲಾಲರು ನಾಟಿ ವೈದ್ಯರಾಗಿ ಬಂಜಾರ ಸಮುದಾಯದ ದಾರಿದೀಪವಾಗಿದ್ದಾರೆ. ಮಾನವರು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡು ವನ್ಯಜೀವಿಗಳನ್ನು ಸಂರಕ್ಷಣೆ ಮಾಡಬೇಕು ಎಂದು ವಿಶ್ವ ಸಂದೇಶ ನೀಡಿದ್ದಾರೆ ಅವರ ವಿಚಾರ ಧಾರೆಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಡಾ.ಗಾಳಿ ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ, ಬೋಧಕೇತರ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ವಿಜಯಪುರ ಕೇಂದ್ರ ಬಸ್ ನಿಲ್ದಾಣದಲ್ಲಿ ಮಲ್ಲಮ್ಮನುಡಿ ದಿನಪತ್ರಿಕೆ.

## ದರ್ಶನ್ ಹುಟ್ಟುಹಬ್ಬ: ಶಾಲಾ ಮಕ್ಕಳಿಗೆ ಪುಸ್ತಕ ಪೆನ್ ವಿತರಣೆ



**ಬಳ್ಳಾರಿ:** ಕಂಪ್ಲಿ ತಾಲೂಕಿನ ಚಾಲೆಂಜಿಂಗ್ ಸ್ಟಾರ್ ದರ್ಶನ್ ಹುಟ್ಟು ಹಬ್ಬದ ಪ್ರಯುಕ್ತ ನಾಲ್ಕನೇ ವಾರ್ಡ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ 100 ಪುಸ್ತಕ 100 ಪೆನ್ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳು ಆ ಶಾಲೆ ಮಕ್ಕಳಿಗೆ ಹುಟ್ಟು ಹಬ್ಬದ ಪ್ರಯುಕ್ತ ವಿತರಣೆ ಮಾಡಿದರು. ನಂತರ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿ ಅವರು ಮಾತನಾಡಿ ನಮ್ಮ ಬಾಸ್, ಎಲ್ಲಿದ್ದರೂ ಚೆನ್ನಾಗಿರುತ್ತಾರೆ ಸಾಕು ನಮಗೆ ನಾವು ಅವರಿಲ್ಲ ಅಂದ್ರು ಕೂಡ ನಾವು ಇಲ್ಲಿ ಹುಟ್ಟುಹಬ್ಬ ಸಂಭ್ರಮದಿಂದ ಆಚರಣೆ ಮಾಡಿದ್ದೇವೆ ನಮ್ಮ ಬಾಸ್ ಆದಷ್ಟು ಬೇಗ ಬಿಡುಗಡೆ ಆಗಿ ಬರ್ತಾರೆ ಎಂದು ದೇವರಲ್ಲಿ ನಾವು ಪ್ರಾರ್ಥನೆ ಮಾಡುತ್ತೇವೆ ಹುಟ್ಟು ಹಬ್ಬದ ಪ್ರಯುಕ್ತವೇ ಬೆಳಿಗ್ಗೆಯಿಂದಲೇ ದೇವರ ದರ್ಶನಗಳು ಮಾಡಿದ್ದೇವೆ ಎಂದು ದರ್ಶನ ಅಭಿಮಾನಿ ಮಾಹಿತಿ ತಿಳಿಸಿದರು. ಈ ಸಂದರ್ಭದಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿ ಬಳಗದವರು ಹಾಗೂ ಆ ಶಾಲೆಯ ಮುಖ್ಯ ಗುರುಗಳು ಆ ಶಾಲೆಯ ಎಲ್ಲಾ ಸಿಬ್ಬಂದಿಗಳು ಎಲ್ಲಾ ಶಾಲೆಯ ವಿದ್ಯಾರ್ಥಿಗಳು ಈ ಚಾಲೆಂಜಿಂಗ್ ಸ್ಟಾರ್ ದರ್ಶನ್ ಹುಟ್ಟು ಹಬ್ಬದ ಪ್ರಯುಕ್ತ ಆಚರಣೆ ಮಾಡಿದರು ಮತ್ತಿತರು ಹಾಜರಿದ್ದರು.

## ಬಾಬು ಜಗಜೀವನರಾಂ ಜಯಂತಿಯ ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ: ಮನವಿ

**ಕಲಬುರಗಿ:** ಈ ಬಾರಿ ಜಿಲ್ಲೆಯಲ್ಲಿ ನಡೆಯಲಿರುವ 119ನೇ ಡಾ.ಬಾಬು ಜಗಜೀವನರಾಂ ಜಯಂತಿಯೂ ಅತೀ ವಿಜ್ರಂಭಣೆಯಿಂದ ಆಚರಿಸಲು ನಿರ್ಧಾರ ಮಾಡಿರುವ ಜಿಲ್ಲಾ ಜಯಂತೋತ್ಸವ ಸಮಿತಿಯ ಮುಖಂಡರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಬಾರಿ ನಡೆಯಲಿರುವ ಡಾ.ಬಾಬು ಜಗಜೀವನರಾಂ ರವರ 119ನೇ ಜಿಲ್ಲಾ ಜಯಂತೋತ್ಸವ ಸಮಿತಿಗೆ ನನಗೆ ನೂತನವಾಗಿ ಜಿಲ್ಲಾ ಜಯಂತೋತ್ಸವ ಸಮಿತಿಯ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವ ಮೂಲಕ ಸಮಾಜದ ಯುವಕರಲ್ಲಿ ಉತ್ಸಾಹ ನೀಡುವ ಮೂಲಕ ಸಮಾಜದ ಏಳಿಗೆಗಾಗಿ ಶ್ರಮಿಸುತ್ತೇನೆ ಎಂದು ಡಾ.ಬಾಬು ಜಗಜೀವನರಾಂ ಜಿಲ್ಲಾ ಜಯಂತೋತ್ಸವದ ಸಮಿತಿಯ ಜಿಲ್ಲಾಧ್ಯಕ್ಷ ಸ್ಥಾನದ ಅಂಕಾಕ್ಷಿ ಮಂಜುನಾಥ ಎಸ್ ನಾಲವಾರಕರ್ ಮನವಿ ಮಾಡಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಮಾದಿಗ ಸಮಾಜದ ಹಿರಿಯ ಜೀವಿಗಳು,ಸಾಮಾಜಿಕ ಚಿಂತಕರು,ಹಿರಿಯ ಹೋರಾಟಗಾರರು, ಯುವಕರು, ಮಹಿಳೆಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಸುಮಾರು 10 ವರ್ಷಗಳಿಂದ ನಡೆಯುತ್ತಿರುವ ಡಾ.ಬಾಬು ಜಗಜೀವನರಾಂ ರವರ ಜಯಂತಿಯ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಈ ಬಾರಿ ನನಗೆ ಜಿಲ್ಲಾಧ್ಯಕ್ಷರನ್ನಾಗಿ ಘೋಷಣೆ ಮಾಡುವ ಮೂಲಕ ನನಗೆ ನೇಮಕ ಮಾಡಬೇಕು ಎಂದರು. ಈಗಾಗಲೇ ಮಾದಿಗ ಸಮಾಜದ ಪರವಾಗಿ ಸುಮಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿರುತ್ತೇನೆ. ಹಾಗೂ ಸಮಾಜದ ಏಳಿಗೆಗಾಗಿ ನಾನು ಶ್ರಮಿಸುತ್ತಿದ್ದೇನೆ. ಮಾದಿಗ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬುದು ನನ್ನ ಆಸೆಯಾಗಿದೆ.ಆದ್ದರಿಂದ ಮಾದಿಗ ಸಮಾಜದ ಹಿರಿಯ ಜೀವಿಗಳು, ಸಾಮಾಜಿಕ ಚಿಂತಕರು, ಹಿರಿಯ ಹೋರಾಟಗಾರರು ಎಲ್ಲರೂ ಸೇರಿ ಈ ಬಾರಿ ನಡೆಯುವ 119ನೇ ಡಾ.ಬಾಬು ಜಗಜೀನರಾಂ ಜಿಲ್ಲಾ ಜಯಂತೋತ್ಸವ ಸಮಿತಿಯ ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕೆಂದು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿಕೊಂಡಿದ್ದಾರೆ.

## ಸರ್ಕಾರಿ ನೌಕರರ ಹಳೆಯ ಪಿಂಚಣಿ ಯೋಜನೆ ಜಾರಿಗೆ ಕ್ರಮ: ಶಾಸಕ



**ಬಳ್ಳಾರಿ:** ರಾಜ್ಯ ಸರ್ಕಾರಿ ನೌಕರರ ಬಹುನಿರೀಕ್ಷಿತ ಬೇಡಿಕೆಯಾಗಿರುವ ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಮರಳಿ ಜಾರಿಗೆ ತರಲು ರಾಜ್ಯ ಸರ್ಕಾರ ಕ್ರಮ ವಹಿಸಲಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಮಂಗಳವಾರ ಜಿಲ್ಲಾಡಳಿತ, ಜಿಪಂ, ಯುವ ಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಸರ್ಕಾರಿ ನೌಕರರಿಗಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಳೆಯ ಪಿಂಚಣಿ ಯೋಜನೆಯ ಜಾರಿಗೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಸಮಿತಿಯನ್ನು ರಚಿಸಿ, ಐದು ರಾಜ್ಯಗಳಲ್ಲಿರುವ ವ್ಯವಸ್ಥೆಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಿದ್ದಾರೆ, ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ, ಈ ವರ್ಷದ ಬಜೆಟ್ ಅಧಿವೇಶನದ ವೇಳೆ ನಾನು, ಮಾಜಿ ಸಚಿವ ಬಿ.ನಾಗೇಂದ್ರ ಹಾಗೂ ಶಾಸಕ ಜೆ.ಎನ್.ಗಣೇಶ್ ಒಟ್ಟಾಗಿ ಸರ್ಕಾರದ ಗಮನ ಸೆಳೆಯುತ್ತೇವೆ ಎಂದರು.

ಈ ಸಂದರ್ಭ ಜಿಲ್ಲಾ ಸರ್ಜನ್ ಡಾ.ಬಸರೆಡ್ಡಿ, ಜಿಲ್ಲಾ ಆರೋಗ್ಯ-ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು, ಎಡಿಎಸ್ಪಿ ರವಿಕುಮಾರ್, ಶಿಕ್ಷಕರ ಸಂಘದ ಮಲ್ಲೇಶ್, ಸುರೇಶ್, ಎಲ್.ಎನ್.ಶಾಸ್ತ್ರಿ ಪಾಲಿಕೆಯ ಸದಸ್ಯರಾದ ಮಿಂಚು ಸೀನಾ, ಎಂ.ರಾಜೇಶ್ವರಿ, ಕಾಂಗ್ರೆಸ್ ಮುಖಂಡ ಸುಬ್ಬರಾಯುಡು ಸೇರಿದಂತೆ ಹಲವರು ಹಾಜರಿದ್ದರು.

# ರಾಜಕಾರಣದ ಘನತೆ ಹೆಚ್ಚಿಸಲು ಪಿ.ರಾಮಯ್ಯ ಶ್ರಮ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಸಾರ್ವಜನಿಕ ಬದುಕು ಕಲುಷಿತಗೊಳ್ಳುತ್ತಿರುವ ಹೊತ್ತಲ್ಲಿ ಪಿ.ರಾಮಯ್ಯ ಮಾದರಿಯಾಗಿ ಕಾಣುತ್ತಾರೆ. ಅವರು ಪತ್ರಿಕಾ ವೃತ್ತಿ ಮತ್ತು ರಾಜಕಾರಣದ ಘನತೆ ಹೆಚ್ಚಿಸಲು ಶ್ರಮಿಸಿದ್ದರು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಶ್ಲಾಘಿಸಿದರು.

ಗಾಂಧಿ ಭವನದಲ್ಲಿ ನಡೆದ ಹಿರಿಯ ಪತ್ರಕರ್ತ ದಿವಂಗತ ಪಿ.ರಾಮಯ್ಯ ಅವರ ಶ್ರದ್ಧಾಂಜಲಿ ಹಾಗೂ "ನಾನು ಹಿಂದೂ ರಾಮಯ್ಯ" ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಮಾಜದ ಆಗುಹೋಗುಗಳನ್ನು, ಒಳಿತು ಕೆಡುಕುಗಳನ್ನೇ ಧ್ಯಾನಿಸುವ ಪತ್ರಕರ್ತರು ಸದಾ ಈ ಧಾವಂತದಲ್ಲಿಯೇ ಉಳಿದು ಕ್ರಮೇಣ ಅಸೂಕ್ಷ್ಮರಾಗುವ, ಸಂವೇದನೆಗಳನ್ನು ಕಳೆದುಕೊಳ್ಳುವ ಅಪಾಯ ಹೆಚ್ಚು. ಇದನ್ನು ಪ್ರಜ್ಞಾಪೂರ್ವಕಾಗಿ ಮೀರುವ ಪ್ರಯತ್ನ ಮಾಡಿದಾಗಷ್ಟೆ ವೃತ್ತಿ ಘನತೆ ಹೆಚ್ಚುತ್ತದೆ.

ನಮ್ಮೆಲ್ಲರ ವೈಯುಕ್ತಿಕ ಹಳಹಳಿಕೆ, ಧಾವಂತಗಳ ನಡುವೆಯೂ ಇತರರ ಘನತೆಗೆ ಕುಂದು ಬಾರದಂತೆ ವೃತ್ತಿಪರರಾಗುವುದು, ಪತ್ರಿಕೋದ್ಯಮ ನಡೆಸುವುದು, ಪತ್ರಕರ್ತರಾಗಿ ಉಳಿಯುವುದು ನಮ್ಮ ಮುಂದಿರುವ ದೊಡ್ಡ ಸವಾಲು ಎಂದರು.

ಅಗಲಿದ ಹಿರಿಯ ಚೇತನ ಪಿ. ರಾಮಯ್ಯ ಈ ವಿಚಾರದಲ್ಲಿ ನಮ್ಮೆಲ್ಲರಿಗೂ ಮಾದರಿಯಾಗಿದ್ದರು. ಪತ್ರಕರ್ತರಾಗುವುದು ಒಂದು ನಮೂನೆಯ ದೀಕ್ಷೆ



ಇದ್ದಂತೆ. ಒಮ್ಮೆ ನೀವು ಪತ್ರಕರ್ತರೆಂದು ಗುರುತಿಸಿಕೊಂಡ ಮೇಲೆ ಕೆಲವು ನಿಷ್ಠುರ ಗುಣಗಳು ಅನಾಯಸವಾಗಿ ಬಂದುಬಿಡುತ್ತವೆ. ಮುಂದೆ ರಾಜಕಾರಣಿಯಾದರೂ ಸರಿಯೇ, ಉದ್ಯಮಿಯಾದರೂ ಸರಿಯೇ. ಒಮ್ಮೆ ಪತ್ರಕರ್ತರಾದವರು ಮಾಜಿಯಾಗಲಾರರು, ನಿವೃತ್ತರಾಗಲಾರರು. ಚಲನಶೀಲತೆಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಮನೋಭಾವ ಇದ್ದ ಪತ್ರಕರ್ತರಿಗೆ ಸಾವು ಇರದು ಎಂದು ಅಭಿಪ್ರಾಯಪಟ್ಟರು.

ಕಾಲವನ್ನು ಒಪ್ಪಿಕೊಳ್ಳುತ್ತಲೇ ಸಮಾಜದಲ್ಲಿರುವ ಹುಳಕನ್ನು ನಯವಾಗಿ ತೋರಿಸಿ ತಿದ್ದಬಲ್ಲವರು ಮಾತ್ರ ಜನಮಾನಸದಲ್ಲಿ ಉಳಿಯಬಲ್ಲರು. ಅವರಿಗೂ ಆತ್ಮತೃಪ್ತಿ ತರಬಲ್ಲವು. ಇಂಥಾ ಆತ್ಮತೃಪ್ತಿ ಗಳಿಸಿದ್ದಾಗಿ ತಮ್ಮ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಹೇಳಿಕೊಂಡಿದ್ದ ರಾಮಯ್ಯ ಅವರು, ತಾವು ಸಾರ್ಥಕ್ಯವಾಗಿ ಬಾಳಿ, ತಮ್ಮೊಡನಿರುವ ವೃತ್ತಿಪರರ ಘನತೆಯನ್ನು ಎತ್ತಿ ಹಿಡಿದು ಪತ್ರಕರ್ತರಾಗಿ ಅಷ್ಟೆ ಅಲ್ಲ ವ್ಯಕ್ತಿತ್ವ ದೃಷ್ಟಿಯಿಂದಲೂ ಅನುಸರಣೀಯರಾಗಿದ್ದರು ಎಂದು ಧನ್ಯತೆ ಅರ್ಪಿಸಿದರು.

ಸಾರ್ವಜನಿಕ ಜೀವನ ವಿಪರೀತ ಕಲುಷಿತ ಮತ್ತು ಕಳಪೆ ಆಗುತ್ತಿರುವ ಹೊತ್ತಿನಲ್ಲಿ ಪಿ.ರಾಮಯ್ಯ ಅವರಂತಹ ಒಂದು ಅಪ್ಪಟ ಮಾದರಿ ನಮ್ಮನ್ನೆಲ್ಲಾ ಅಗಲಿದೆ. ರಾಮಯ್ಯ ಅವರು ಪತ್ರಕರ್ತರಾಗಿ ಪತ್ರಿಕಾ ವೃತ್ತಿಯ ಘನತೆ-ಮೌಲ್ಯ-ನೈತಿಕ ಶಕ್ತಿ ಹೆಚ್ಚಿಸಲು ಶ್ರಮಿಸಿದರು ಎಂದು ವಿವರಿಸಿದರು.

ಹಾಗೆಯೇ ಪಿ.ರಾಮಯ್ಯ ಅವರು ರಾಜ-ಕಾರಣಿಯಾಗಿ ರಾಜಕಾರಣದ ಉದ್ದೇಶ, ಕಾಳಜಿಯ ಗುಣಮಟ್ಟವನ್ನು ಹೆಚ್ಚಿಸುವ ಪ್ರಯತ್ನ ಮಾಡಿ ಸಾರ್ವಜನಿಕ ಜೀವನದ ಮೌಲ್ಯವನ್ನು ಉನ್ನತ ಮಟ್ಟದಲ್ಲಿ ಉಳಿಸುವ ಪ್ರಯತ್ನ ಮಾಡಿದ್ದರು.

ಹೀಗಾಗಿ ಪಿ.ರಾಮಯ್ಯ ಪತ್ರಕರ್ತರಾಗಿ, ರಾಜಕಾರಣಿಯಾಗಿ ಅವರು ತಮ್ಮ ಕಾಲದ ಸಾರ್ವಜನಿಕ ಬದುಕಿನ ಮೌಲ್ಯಗಳ ಪ್ರತಿರೂಪವಾಗಿದ್ದರು. ವೃತ್ತಿಪರತೆ ಮತ್ತು ಸಾಮಾಜಿಕ ಬದ್ಧತೆ ರಾಮಯ್ಯನವರ ವ್ಯಕ್ತಿತ್ವದ ಎರಡು ಕಣ್ಣುಗಳಾಗಿದ್ದವು.

ಸುದ್ದಿಯನ್ನು ಅವರು ಗ್ರಹಿಸುತ್ತಿದ್ದ ರೀತಿಯೇ, ಅವರು ಸಮಾಜಮುಖಿ ಆಗಿದ್ದರು ಎನ್ನುವುದಕ್ಕೆ ಸಾಕ್ಷಿಯಾಗಿತ್ತು. ಆಗ ಸಮಾಜಮುಖಿಯಲ್ಲದ ಪತ್ರಕರ್ತರಿಗೆ ವೃತ್ತಿಯಲ್ಲಿ ಜಾಗ ಇರಲಿಲ್ಲ, ಸಮಾಜಮುಖಿಯಲ್ಲದ ಬರಹಗಳಿಗೆ ಪುಟಗಳಲ್ಲಿ ಜಾಗವೂ ಸಿಗುತ್ತಿರಲಿಲ್ಲ. ಈ ಹೊತ್ತಿನಲ್ಲಿ ಇವೆರಡೂ ಮಾದರಿಗಳೂ ಸವಕಲಾಗಿ ಕಾಣುತ್ತಿರುವುದು ಬೇಸರದ ಸಂಗತಿ ಎಂದರು.

ಪಿ.ರಾಮಯ್ಯನವರಿಗೆ ದೇವರಾಜ ಅರಸು ಅವರಿಂದ ಹಿಡಿದು ಅನೇಕ ಮುಖ್ಯಮಂತ್ರಿಗಳೊಂದಿಗೆ ಇದ್ದ ಆಪ್ತ ಒಡನಾಟವನ್ನು ರಾಜ್ಯ ಧರ್ಮ/ವೃತ್ತಿಧರ್ಮವನ್ನು ಕಾಪಾಡಲು ಕಟ್ಟುನಿಟ್ಟಾಗಿ ಬಳಸಿದ್ದನ್ನು ಸ್ಮರಿಸಿದರು.

ಮೇಲ್ಮನೆಯಲ್ಲಿ (ವಿಧಾನ ಪರಿಷತ್) ನಡೆಯುತ್ತಿದ್ದ ಚರ್ಚೆಗಳಲ್ಲಿ ಗಂಭೀರತೆ ಮತ್ತು ಮೌಲ್ಯಗಳನ್ನು ತರುವಲ್ಲಿ ಇವರು ಶ್ರಮಿಸಿದರು. ಹೀಗಾಗಿ ರಾಮಯ್ಯ ಅವರು ತಾವು ತೊಡಗಿಸಿಕೊಂಡಿದ್ದ ಎಲ್ಲಾ ಕ್ಷೇತ್ರಗಳ ಘನತೆ ಹೆಚ್ಚಿಸುವ ಕೆಲಸ ಮಾಡಿ ಆ ಮಾದರಿಗಳನ್ನು ನಮ್ಮೆದುರಿಗೆ ಬಿಟ್ಟು ಹೋಗಿದ್ದಾರೆ. ಈ ಮಾದರಿಗಳನ್ನು ಇವತ್ತಿನ ಪತ್ರಕರ್ತರು ಮುಂದುವರೆಸಬೇಕು ಎಂದು ಕರೆ ನೀಡಿದರು.


ಕಾರ್ಯಕ್ರಮದಲ್ಲಿ ಸಚಿವ ಚಲುವರಾಯಸ್ವಾಮಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ವೋಡೆ ಪಿ ಕೃಷ್ಣ, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನುಂ, ಐಗಘಎ ಅಧ್ಯಕ್ಷರಾದ ಶಿವಾನಂದ ತಗಡೂರು, ಈ ಸಂಜೆ ಸಂಪಾದಕರಾದ ಟಿ.ವೆಂಕಟೇಶ್, ವರದಿಗಾರರ ಕೂಟದ ಅಧ್ಯಕ್ಷ ಆರ್.ಟಿ.ವಿಠ್ಠಲ್ ಮೂರ್ತಿ, ಪ್ರೆಸ್ ಕ್ಲಬ್ ಅಧ್ಯಕ್ಷರಾದ ಶ್ರೀಧರ್, ಗಾಂಧಿ ಸ್ಮಾರದ ನಿಧಿ ಕೋಶಾಧ್ಯಕ್ಷರಾದ ದಿನೇಶ್, ರಾಮಯ್ಯ ಅವರ ಪುತ್ರ ಡಾ.ಬಾಲಾಜಿ ಅವರುಗಳು ಉಪಸ್ಥಿತರಿದ್ದರು.

## 40ನೇ ಪತ್ರಕರ್ತರ ಸಮ್ಮೇಳನಕ್ಕೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಈ ಬಾರಿ ಬೀದರನಲ್ಲಿ ಮಾರ್ಚ್ ಅಂತ್ಯದಲ್ಲಿ ಆಯೋಜಿಸಲಾಗುತ್ತಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ನೇತೃತ್ವದ ಕೆಯುಡಬ್ಲ್ಯೂಜೆ ನಿಯೋಗವು ಲೋಕಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಮನವಿ ಮಾಡಿ ಆಹ್ವಾನಿಸಿತು.

ಸಂಘದ ಮನವಿಗೆ ಪ್ರತಿಕ್ರಿಯಿಸಿದ ರಾಜ್ಯಪಾಲರು, ಸಮ್ಮೇಳನದಲ್ಲಿ ಭಾಗವಹಿಸಲು ಆಸಕ್ತನಾಗಿದ್ದೇನೆ ಎಂದರು. ರಾಜ್ಯಸಂಘದ ಇತಿಹಾಸವನ್ನು ಕೇಳಿಕೊಂಡ ಅವರು ಡಿವಿಜಿ ಸಂಸ್ಥಾಪಿಸಿದ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೇಣಿಗೆ ನೀಡಿದ ಸಂಘ-ಕ್ಕೆ ತೊಂಬತ್ತೈದು ವಸಂತ ತುಂಬುತ್ತಿರುವ ಬಗ್ಗೆ ಮೆಚ್ಚುಗೆ ಮತ್ತು ಅಭಿಮಾನ ವ್ಯಕ್ತಪಡಿಸಿದರು.



ಇದೇ ಸಂಧರ್ಭದಲ್ಲಿ ಅವರಿಗೆ ಕೆಯುಡಬ್ಲ್ಯೂಜೆ ನೆನಪಿನ ಸಂಚಿಕೆ, ಕೋವಿಡ್ ಕಥೆಗಳು ಮತ್ತು ಅಮೃತ ಬೀಜ ಪುಸ್ತಕವನ್ನು ನೀಡಲಾಯಿತು. ಕೆಯುಡಬ್ಲ್ಯೂಜೆ ಲೋಗೋ ಜೊತೆಗೆ ಅವರದೇ ಭಾವಚಿತ್ರವಿರುವ ಕಾಫಿ ಕಪ್ ಮತ್ತು ಕೆಯುಡಬ್ಲ್ಯೂಜೆ ಕ್ಯಾಲೆಂಡರ್ ನೀಡಲಾಯಿತು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಎಚ್.ಬಿ.ಮದನಗೌಡ, ಜಿ.ಸಿ.ಲೋಕೇಶ, ಸೋಮಶೇಖರ ಕೆರಗೋಡು, ವಾಸುದೇವ ಹೊಳ್ಳ ಅವರುಗಳು ನಿಯೋಗದಲ್ಲಿದ್ದರು.

## ಹೊರಗೆ ಗುಜರಿ, ಒಳಗೆ ಅಕ್ರಮ ಗೊಬ್ಬರ ದಾಸ್ತಾನು

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ಕೇರಳಕ್ಕೆ ಸಾಗಿಸಲು ಅಕ್ರಮವಾಗಿ ದಾಸ್ತಾನು ಮಾಡಿದ್ದ 1296 ಮೂಟೆ ಯೂರಿಯಾ ವಶಕ್ಕೆ ಪಡೆದಿರುವ ಘಟನೆ ನಡೆದಿದೆ.

112 ಗೆ ಬಂದ ಹೆದ್ದಾರಿಯ ಹುಣಸೂರು ತಾಲೂಕಿನ ಕಲ್ ಬೆಟ್ಟದ ಜಮೀನಿನಲ್ಲಿ ನಿರ್ಮಿಸಿದ್ದ ಗೋಡೌನ್ ಮೇಲೆ ಡಿವೈಎಸ್ ಪಿ ರವಿ ನೇತೃತ್ವದಲ್ಲಿ ದಾಳಿ ನಡೆಸಿದ ವೇಳೆ 1296 ಮೂಟೆ ಸಬ್ಸಿಡಿ ಯೂರಿಯಾ ಪತ್ತೆಯಾಗಿದೆ.

ಗೋಡೌನ್ ನಲ್ಲಿ ಕೇಂದ್ರ ಸರಕಾರದ ಸಬ್ಸಿಡಿ ಮಾರ್ಕ್ 9 ಇರುವ ಚೀಲಗಳನ್ನು ಬದಲಾಯಿಸಿ ಬೇರೆ ಚೀಲಕ್ಕೆ ತುಂಬುತ್ತಿರುವುದನ್ನು ಪತ್ತೆ ಹಚ್ಚಿದ ತಂಡ ಕೂಡಲೆ ಕೃಷಿ ಇಲಾಖೆಗೆ ಮಾಹಿತಿ ನೀಡದ ಮೇರೆಗೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಅನಿಲ್ ಕುಮಾರ್ . ಕೃಷಿ ಅಧಿಕಾರಿ ಜಯಕುಮಾರ್ ಹಾಗೂ ಸಿಬ್ಬಂದಿಗಳು ಭೇಟಿ ಇತ್ತು ಪರಿಶೀಲನೆ ನಡೆಸಿದ ವೇಳೆ ಸಬ್ಸಿಡಿ ಗೊಬ್ಬರ



ಬದಲಾಯಿಸುತ್ತಿರುವುದು ಪತ್ತೆಯಾಗಿದ್ದು. ಚೀಲ ಬದಲಾಯಿಸುತ್ತಿದ್ದ 8-10 ಮಂದಿ ಕಾರ್ಮಿಕರು ಪೊಲೀಸರನ್ನು ಕಂಡು ಕತ್ತಲಿನಲ್ಲಿ ಪರಾರಿಯಾಗಿದ್ದಾರೆ.

ವಶಕ್ಕೆ ಪಡೆದಿರುವ ಗೊಬ್ಬರವನ್ನು ಚಿಲ್ಕಂದ ಸರಕಾರಿ ಗೋದಾಮಿಗೆ ಸಾಗಿಸಲಾಗುವುದು.

ಮಂಡ್ಯದ ನಾಗನಹಳ್ಳಿ ಪ್ರಯೋಗಾಲಯಕ್ಕೆ ಸ್ಯಾಂಪಲ್ ಕಳುಹಿಸಿ ವರದಿ ಬಂದ ನಂತರ ಜಿಲ್ಲಾಧಿಕಾರಿಗಳ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುವುದೆಂದು ಎ.ಡಿ. ಅನಿಲ್ ಕುಮಾರ್ ತಿಳಿಸಿದ್ದಾರೆ.

## ಪ್ರತಿಭಾವಂತ ಮಕ್ಕಳಿಗೆ ವರದಾನವಾದ ಸಿಬಿ ಪಿಯು ಕಾಲೇಜ್ ಪರೀಕ್ಷೆ

• **ಪರಶುರಾಮ ಕರಣಂ, ಭಾಲ್ಕಿ**

ಪಟ್ಟಣದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಚನ್ನಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿನಲ್ಲಿ 2026-27 ನೇ ಶೈಕ್ಷಣಿಕ ಸಾಲಿಗಾಗಿ ಪಿಯುಸಿ ಪ್ರಥಮ ವರ್ಷದ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆಯಲು ರಿಯಾಯಿತಿ ಶಿಷ್ಯ ವೇತನ ಪರೀಕ್ಷೆ ಫೆಬ್ರುವರಿ 22ರಂದು ರವಿವಾರ ಮುಂಜಾನೆ 12 ಗಂಟೆಯಿಂದ 1: 30 ನಿಮಿಷದವರೆಗೆ ಸಿಬಿ ಕಾಲೇಜಿನಲ್ಲಿ ನಡೆಸಲಾಗುತ್ತಿದೆ.



ಈ ಕುರಿತು ಪ್ರಕಟಣೆ ಹೊರಡಿಸಿರುವ ಕಾಲೇಜಿನ ಪ್ರಾಚಾರ್ಯರಾದ ಲಕ್ಷ್ಮಿಕಾಂತ ನಾಟೇಕರ್ ಅವರು ಗ್ರಾಮೀಣ ಭಾಗದ ಬಡ ರೈತಪಿ ಕುಟುಂಬದ ಪ್ರತಿಭಾವಂತ ಮಕ್ಕಳಿಗಾಗಿ ರಿಯಾಯಿತಿ ಶಿಷ್ಯವೇತನ ಪ್ರವೇಶ ಪರೀಕ್ಷೆ ಏರ್ಪಡಿಸಲಾಗಿದೆ. 1ರಿಂದ 30ನೇ ಅಗ್ರಶ್ರೇಣಿ ಪಡೆದವರಿಗೆ ಸಂಪೂರ್ಣ ಪ್ರವೇಶ ಉಚಿತ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಿ ಪಿಯು ವರ್ಗಕ್ಕೆ ಪ್ರವೇಶ ನೀಡಲಾಗುವುದು. 31 ರಿಂದ 100 ನೇ ಶ್ರೇಣಿ ಪಡೆದವರಿಗೆ ಶೇ.75./. ಕಾಲೇಜು ಶುಲ್ಕ, 101 ರಿಂದ 200 ನೇ ಶ್ರೇಣಿ ಪಡೆದವರಿಗೆ 50./. ಶುಲ್ಕ, 201 ರಿಂದ 300 ಶ್ರೇಣಿ ಪಡೆದವರಿಗೆ 25./. ಕಾಲೇಜು ಶುಲ್ಕದಲ್ಲಿ ವಿನಾಯಿತಿ ನೀಡಲಾಗುವುದು. ಪ್ರತಿ ವರ್ಷ ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಮೆಡಿಕಲ್, ಇಂಜಿನಿಯರಿಂಗ್ ಡೆಂಟಲ್ ಕೋರ್ಸ್ ಗಳಿಗೆ ಪ್ರವೇಶ ಪಡೆದಿದ್ದಾರೆ ಎಂದು ಪ್ರಾಚಾರ್ಯ ಲಕ್ಷ್ಮಿಕಾಂತ ನಾಟೇಕರ್ ತಿಳಿಸಿದರು. ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸಾಗರ ಖಂಡ್ರೆ ಅವರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದ 10ನೇ ತರಗತಿಯಲ್ಲಿ ಅಧ್ಯಯನ ನಿಯತ್ತಿರುವ ವಿದ್ಯಾರ್ಥಿಗಳಿಗೆ ಕೆ ಸೆಟ್, ನೀಟ್, ಜೆ ಇ ಇ ಪರೀಕ್ಷೆ ಎದುರಿಸಲು ಆತ್ಮಸ್ಥೈರ್ಯ ತುಂಬಲು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಈ ಒಂದು ನೂತನ ಸುವರ್ಣ ಅವಕಾಶ ಕಲ್ಪಿಸಲಾಗಿದೆ ಎಂದರು.



10ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳಿಗಾಗಿ ಭೌತಶಾಸ್ತ್ರ 25 ಪ್ರಶ್ನೆ, ರಸಾಯನ ಶಾಸ್ತ್ರ 25 ಪ್ರಶ್ನೆ ,ಜೀವಶಾಸ್ತ್ರ 25 ಪ್ರಶ್ನೆ, ಗಣಿತ 25 ಪ್ರಶ್ನೆ ಒಟ್ಟು 100 ಪ್ರಶ್ನೆಗಳ ಪರೀಕ್ಷೆ ತೆಗೆದುಕೊಳ್ಳಲಾಗುತ್ತದೆ. ಒಂದು ಪ್ರಶ್ನೆಗೆ ಒಂದು ಅಂಕ. ತಪ್ಪು ಉತ್ತರಕ್ಕೆ 0.25 ಋಣಾತ್ಮಕ ಅಂಕ ಹೊಂದಿರುತ್ತದೆ. 10ನೇ ವರ್ಗದ ಎಲ್ಲಾ ವಿದ್ಯಾರ್ಥಿಗಳು ಶಿಷ್ಯವೇತನ ಪ್ರವೇಶ ಪರೀ-ಕ್ಷೆಯ ಲಾಭ ಪಡೆಯಬೇಕೆಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> **ಕಲ್ಯಾಣ ಕರ್ನಾಟಕದಲ್ಲಿ ಹೆಸರುವಾಸಿಯಾದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಚನ್ನಬಸವೇಶ್ವರ ಪಿಯು ಕಾಲೇಜ್ ಗುಣಾತ್ಮಕ , ಪ್ರಾಯೋಗಿಕ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಗ್ರಾಮೀಣ ಭಾಗದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ವರದಾನವಾಗಿದ್ದು, ಸದುಪಯೋಗಪಡಿಸಿಕೊಳ್ಳಲು ಸುವರ್ಣ ಅವಕಾಶ.**
>
> **-ಸಾಗರ್ ಖಂಡ್ರೆ, ಕಾರ್ಯದರ್ಶಿಗಳು, ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ ಭಾಲ್ಕಿ**

> **ಅನುಭವಿ, ನುರಿತ ಉಪನ್ಯಾಸಕರ ವರ್ಗ, ಪರಿಣಾಮಕಾರಿ ಬೋಧನೆ, ಪ್ರಾಯೋಗಿಕತೆಗೆ ಆದ್ಯತೆ ಗೆ ಶಿಕ್ಷಣ ಸಂಸ್ಥೆ ಹೆಸರುವಾಸಿ. ನಮ್ಮ ಕಾಲೇಜಿನಲ್ಲಿ ಅಭ್ಯಾಸಿಸಿದ ವಿದ್ಯಾರ್ಥಿಗಳು ಉನ್ನತ ಕ್ಷೇತ್ರಗಳಲ್ಲಿರುವುದು ಹೆಮ್ಮೆಯ ಸಂಗತಿ.**
>
> **-ಲಕ್ಷ್ಮಿಕಾಂತ ನಾಟೇಕರ್, ಪ್ರಾಚಾರ್ಯರು, ಸಿಬಿ ಪಿಯು ಕಾಲೇಜ್ ಭಾಲ್ಕಿ**


# ಮನುಷ್ಯ ಸಂಸ್ಕೃತಿಯ ತಿರುಳು



**ವೀರಣ್ಣ ಕಲಕೇರಿ ಕೆಂಭಾವಿ**

ತೋರಿಕೆಯ ಆಚರಣೆಗಳಿಗಿಂತ ತತ್ವನಿಷ್ಠ ಬದುಕು ಶ್ರೇಷ್ಠ ಎಂಬ ವಿಶ್ವಮಾನವ ಕವಿ ಕುವೆಂಪುರವರ ಸಾಲುಗಳು "ರೂಪ ರೂಪಗಳನು ದಾಟಿ ನಾಮ ಕೋಟಿಗಳನು ಮೀಟಿ ಎದೆಯ ಬಿರಿಯ ಭಾವದೀಟಿ ಓ ನನ್ನ ಚೇತನ ಆಗು ನೀ ಅನಿಕೇತನ" ಆಹಾ..! ವಿಶಾಲಭಾವದ ಆನಂದಕ್ಕೆ ಮಿತಿಗಟ್ಟದ ಸಾಲುಗಳು ವಿಶ್ವ ಮಾನವನಿಂದ. "ನೂರು ಮತದ ಹೊಟ್ಟ ತೂರಿ ಎಲ್ಲ ತತ್ವದಲ್ಲೆ ಮೀರಿ ನಿರ್ದಿಗಂತವಾಗಿ ಏರಿ", ಬದುಕಿನ ಭವ್ಯತೆಯ ಸಾಕ್ಷಾತ್ಕಾರಕ್ಕೆ ಅರಿವಿಗೆ ಇಷ್ಟು ಸಾಕು ಎನಿಸುತ್ತದೆ. ಜಾತಿ, ಮತಗಳೆಂಬ ಸಂಕೋಲೆಗಳನ್ನು ಕಳಚಿಟ್ಟು, ಮನುಷ್ಯತ್ವವನ್ನು ಮೈಗೂಡಿಸಿಕೊಂಡು ಸಾಗುವುದೇ ಬದುಕಿನ ಭವ್ಯತೆ ಮತ್ತು ಅದೇ ತತ್ವ ಕೂಡ. ಕುವೆಂಪುರವರ ಈ ಸಾಲುಗಳು ನಿತ್ಯ ಸ್ಮರಣೀಯವಾಗಬೇಕು ಮನುಜ ಮತಕ್ಕೆ.

ಮತದ ಮಮಕಾರದಲ್ಲಿ ಪ್ರತಿಷ್ಠೆಯ ಮಾತುಗಳು ಒಂದೆಡೆಯಾದರೆ, ತತ್ವಬಿತ್ತಿದ ಆದರ್ಶವಾದಿಗಳನ್ನೂ ಜಾತಿಯೊಳಗೆ ಸಿಲುಕಿಸಿಕೊಂಡು, ಅವರ ಆದರ್ಶವನ್ನು ಮರೆತು ಆದರ್ಶವಾದಿಗಳನ್ನು ಮುಂದಿಟ್ಟುಕೊಂಡು ಆರಾಧಿಸುವ ನಾಟಕೀಯ ವೈಭವೀಕರಣದಲ್ಲಿ ನೈಜ ಬದುಕಿನ ಅರ್ಥವನ್ನು ಬದಿಗೊತ್ತಿ ಸಂಕುಚಿ ಭಾವನೆಗಳಿಂದ ವ್ಯರ್ಥ ಕಾಲ ಕಳೆಯುತ್ತಿದ್ದೇವೆ ಎಂದು ಎನಿಸದೆ ಇರದು.





ವಿಶಾಲ ಮನೋಭಾವದ ಆದರ್ಶವಾದಿಗಳು ಇಡೀ ಸಮಾಜದ ಏಳಿಗೆಗಾಗಿ ಮಾನವೀಯ ಮೌಲ್ಯಗಳನ್ನು ಬಿತ್ತಿದರು. ಅಂತಹವರನ್ನು ಕೇವಲ ಒಂದು ನಿರ್ದಿಷ್ಟ ಜಾತಿಗೆ ಕಟ್ಟಿಹಾಕಿ, ಅವರ ಆರಾಧನೆಯ ಹೆಸರಿನಲ್ಲಿ ಜಾತಿ ಪ್ರಾಬಲ್ಯವನ್ನು ಪ್ರದರ್ಶಿಸಿ ಬಲ ಪ್ರದರ್ಶನವಾಗಿ ಕಾಣುತ್ತಿರುವುದು ಒಂದೆಡೆಯಾದರೆ, ಅವರ ಆಶಯವನ್ನೇ ಮರೆಮಾಚಿ ನಮಗರಿವಿಲ್ಲದೆ ಅವರನ್ನು ಅಲ್ಪಮಾನವನನ್ನಾಗಿ ರೂಪಿಸಲು ಪ್ರಯತ್ನಿಸುತ್ತಿದ್ದೇವೇನೋ? ಎಂದೆನಿಸದೆ ಇರದು. ಇದು ಕೇವಲ ಆ ಮಹಾಪುರುಷರ ವ್ಯಕ್ತಿತ್ವಕ್ಕೆ ತರುತ್ತಿರುವ ಕುಂದಷ್ಟೇ ಅಲ್ಲದೆ, ಮುಂದಿನ ಪೀಳಿಗೆಗೆ ಅವರ ಸಾರ್ವತ್ರಿಕ ತತ್ವಗಳು ತಲುಪದಂತೆ, ಸಮಾಜವನ್ನು ಒಗ್ಗೂಡಿಸಬೇಕಾದ ವ್ಯಕ್ತಿತ್ವಗಳನ್ನು ವಿಭಜನೆಯ ಸಾಧನವಾಗಿ ಬಳಸುವುದು ನೈತಿಕವಾಗಿ ತಪ್ಪು ಎಂದು ಗೊತ್ತಿದ್ದರೂ, ಆಚರಣೆಯ ನೆಪದಲ್ಲಿ ವಿಜ್ರಂಬಿಸುವುಸುವುದು ಸಮಾಜದ ಬೌದ್ಧಿಕ ಅವನತಿ ಎನ್ನಬಹುದೆ ? ತಿಳಿಯದು.

ಜಾತಿ ಮತ ಧರ್ಮಗಳು ಎಲ್ಲವೂ ಒಂದೇ ಸೂರಿನಲ್ಲಿ ಬಂದು ನಿಲ್ಲುತ್ತವೆ ಎಂಬುವುದು ಆದರ್ಶಗಳ ತಿರುಳು. ಆದರೂ ಆ ಮತ ದೊಡ್ಡದೋ, ಈ ಮತ ಶ್ರೇಷ್ಠವೋ?" ವ್ಯರ್ಥ ಚರ್ಚೆಯಲ್ಲಿ ನಾವುಗಳು, ಇಲ್ಲಿ ಧರ್ಮಗಳೂ ಇವೆ, ಜಾತಿಗಳೂ ಇವೆ, ನಂಬಿಕೆಗಳು ಇವೆ. ಇವೆಲ್ಲವುಗಳ ಮಧ್ಯ ನಾವು ಸಹಮತಿಗಳಾಗಿ ಇರಬೇಕಾದ್ದು ಮನುಷ್ಯತ್ವ. ಈ ಮನುಷ್ಯತ್ವ ಎನ್ನುವುದೇ ಸಹಮತ ಮತ್ತು ಸ್ವಮತವು ಕೂಡ, ಮನುಷ್ಯ ಸಂಸ್ಕೃತಿ ಎಂದರೆ ಎಲ್ಲರನ್ನೂ ಪ್ರೀತಿಸುವ ಗುಣವನ್ನು ಬೆಳೆಸಿಕೊಳ್ಳುವುದೆ ಆಗಿದೆಯಲ್ಲವೆ? ಸ್ವಮತವೆಂದರೇನೆ ಅದು ಆಚರಣೆಯಿಂದ ಕಾಣುವ ಧರ್ಮಗಳಾಚೆಯ ನಿಜವಾದ ಧರ್ಮ. ಅದೇ ಮೂಲ ತತ್ವ ಕೂಡ. ತತ್ವವೆಂಬುದು ಧರ್ಮದಾಚೆಯ ನಿಜಧರ್ಮ. ಅದು ಸಮುದಾಯ ಅಥವಾ ಗುಂಪಿಗೆ ಸೇರುವುದಲ್ಲ; ಬದಲಾಗಿ ಅದು ನಮ್ಮೊಳಗಿನ ಅಂತರಾತ್ಮ. ಕೆಲವು ಬಾರಿ ಅಂತರಾತ್ಮ ಒಪ್ಪದಿದ್ದರೂ ಒಪ್ಪಂದ ಮಾಡಿಕೊಂಡಂತೆ ಅಂಟಿಕೊಂಡ ಬದುಕು ನಮ್ಮದಾಗಿದೆ ಎಂಬ ಪ್ರಜ್ಞೆ ಪ್ರಜ್ಞಾವಂತ ಮನುಷ್ಯನಿಗೆ ಮೂಡದಿರದು. ಹುಟ್ಟು ಮತ್ತು ಸಾವುಗಳ ನಡುವಿನ ಬದುಕು ಬಹಳ ಚಿಕ್ಕದು ಬದುಕನ್ನು ಮನುಷ್ಯರಾದ ನಾವು ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆ, ಸಹಕಾರ ಅನುಕಂಪದ ಆಧಾರದಲ್ಲಿ ಜೀವನವನ್ನು ಸಂಭ್ರಮಿಸಬೇಕು, ಇದನ್ನು ಅರಿತೂ ಕಟ್ಟುಬಿದ್ದು ಪ್ರಜ್ಞಾಶೂನ್ಯರಾಗಿದ್ದವೆ ಎನಿಸುವುದಿಲ್ಲವೆ? ಎಂಬ ಪ್ರಶ್ನೆ ಕಾಡುವುದಂತು ನಿಜ.

ಹಾಗಾಗಿ ತೀವ್ರ ಭಾವನೆಯೊಂದಿಗೆ ಆತ್ಮದ ಚೇತನವನ್ನು ಯಾವ ಬಂಧನಕ್ಕೆ ಒಳಪಡದಂತೆ ನಮ್ಮೊಳಗಿನ ಮಾನವೀಯತೆ, ಕರುಣೆಯಿಂದ ಸತ್ಯದ ಹಾದಿಯಲ್ಲಿ ನಮ್ಮ ನಿಜವಾದ ಮತವನ್ನು ಕಾಣಲು ಪ್ರಯತ್ನಿಸುತ್ತ, ಅಂತರಾತ್ಮದ ಅರಿವಿನಡಿ ನಿಜ ಧರ್ಮದ ಗೋಚರದಿಂದ ಆಂತರಿಕ ಶಾಂತಿ ಹೊಂದಿ ವಿಶ್ವ ಮಾನವ ತತ್ವದೆಡೆಗೆ ದಿಟ್ಟಿ ಹಾಯಿಸೋಣ ಸಹಮತಿಯಲ್ಲಿ ನಡೆಯೋಣ ಸ್ವಮತ ಹೊಂದೋಣ.

**ಆ ಮತ ಈ ಮತ ಯಾವ ಮತ**
**ಸಹಮತವಿರಲಿ, ಅರ್ಥಹೀನದಿ ಶೋಧಿಸಿ**
**ಸಮಯ ವ್ಯರ್ಥ ಮಾಡಿಕೊಳ್ಳದಿರು,**
**ವಾಸ್ತವತೆಯನ್ನರಿತು**
**ನಿನ್ನ ನಿಜ ಸ್ವಮತ ಕಂಡು ಸುಲಭದಿ**
**ಜೀವನ್ಮುಕ್ತಿಗೆ ಸಾಗು ನೀ ಸೃಷ್ಟಿಬಲೇಶ.**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)